SRI K. M. THAMMAIAH.—Sir, it is an important matter which we cannot neglect like this. It isa matter of dumb cattle affair. ತಾವು ಹೇಳಿದಿರಿ ಲೆಕ್ಕ ಸಿಕ್ಕಿಲ್ಲವೆಂದು. ಈಗಿನಕಾಲದವರು ವಿದ್ಯಾವಂತ ಪೀಳಿಗೆ ಲೆಕ್ಕ ಕೊಡುತ್ತಾರೆ. ಬ್ಯಾಂಕಿನಲ್ಲಿ ಲೆಕ್ಕವಿರುತ್ತದೆ ಕೊಡುತ್ತಾರೆ. ಹಿಂದಿನಕಾಲದಜನ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ತಾವು ಕೊಡತಕ್ಕಂಥ ಪರಿಹಾರ ಸುಮಾರು ಒಂದುನೂರು ಎರಡುನೂರು ರೂಪಾಯಿಗಳಾದರೆ ಅದರ ಚರ್ಮದ ಬೆಲೆ ಬಾಳುವುದಿಲ್ಲ. ಇನ್ನು ಲಸಿಕೆ ವಿಚಾರದಲ್ಲಿ ಟೈಮ್ ಕೊಡಿ ಎಂದು ಹೇಳಿದಿರಿ, ಒಂದೊಂದು ಡಿಸ್ಟ್ರಿಕ್ಟ್‌ಗೆ ಒಂದೊಂದುವರ್ಷ ಲಸಿಕೆಯನ್ನು ಹಾಕತಕ್ಕಂಥ ಏರ್ಪಾಡುಮಾಡಿ ಆದರಿಂದ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

FINANCIAL BUSINESS

Further discussion on demands No. 28 and 29

† ಶ್ರೀ ಎಚ್. ವಿಶ್ವನಾಥ್ (ಕೆ. ಆರ್. ನಗರ್).—ಸನ್‌ಮಾನ್ಯ ಅಧ್ಯಕ್ಷರೇ ಈ ಸದನದ ಮುಂದೆ ಮಾನ್ಯ ಆರೋಗ್ಯಸಚಿವರು ಅವರ ಇಲಾಖೆಗೆ ಸಂಬಂಧಪಟ್ಟಂತೆ ತಂದಿರತಕ್ಕಂಥ ಬೇಡಿಕೆಯನು ನಾನು ಪ್ರುತ್ಪೂರ್ವಕವಾಗಿ ಸ್ವಾಗತಿಸುತ್ತ ಎರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ.

ಸನ್‌ಮಾನ್ಯ ಆರೋಗ್ಯಸಚಿವರು ತಮ್ಮ ಇಲಾಖೆಯಲ್ಲಿ ಹಲವಾರು ಸಾಧನೆಗಳನ್ನು ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಮಾಡಿದ್ದಾರೆ. ಕೇಂದ್ರ ಸರ್ಕಾರದವರ ಸಹಾಯದಿಂದ ಸುಮಾರು ಮೂವತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತು ರಾಜ್ಯ ಸರ್ಕಾರದ ವತಿಯಿಂದ ಸುಮಾರು ೬೧ ಪ್ರಾಥಮಿಕ ಆರೋಗ್ಯ ಘಟಕಗಳನ್ನು ತೆರೆದು ಹೀಗೆ ಹಲವಾರು ಕಾರ್ಯಕ್ರಮಗಳನ್ನು ಈ ರಾಜ್ಯದಲ್ಲಿ ಸಾದಿಸಲಾಗಿದೆ ಎಂದು ತೋರಿಸಿದ್ದಾರೆ. ಹೀಗೆ ಸಾರ್ವಜನಿಕ ಆರೋಗ್ಯವನ್ನು ಸುದಾರಿಸುವ ದೃಷ್ಟಿಯಿಂದ ನಮ್ಮ ಆರೋಗ್ಯ ಇಲಾಖೆಯವರು ಬಹಳವಾಗಿ ಪ್ರಯತ್ನ ಪಟ್ಟಿದ್ದಾರೆ, ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ನಾನು ಹೆಚ್ಚಿಗೆ ಯಾವುದೇ ವಿಚಾರಗಳನ್ನು ತೆಗೆದುಕೊಳ್ಳುವುದಕ್ಕೆ ಹೋಗದೆ ಮತ್ತೆ ಬೇರೆ ಬೇರೆ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಹಾಕಿಕೊಳ್ಳಬೇಕೆಂದು ಹೇಳದೆ ನಮ್ಮ ಇಲಾಖೆಯಲ್ಲಿ ಈಗ ಇರತಕ್ಕಂಥ ಏನು ವ್ಯವಸ್ಥೆ ಇದೆ ಅದನ್ನು ಸರಿಯಾದ ರೀತಿಯಲ್ಲಿ ಸುವ್ಯವಸ್ಥಿತವಾದ ರೀತಿಯಲ್ಲಿ ಮಾಡಿಕೊಂಡು ಹೋಗಿ ಎನ್ನುವ ಒಂದು ಮಾತನ್ನು ಮೊಟ್ಟಮೊದಲನೆಯಾಗಿ ಹೇಳುವುದೇನೆಂದರೆ ನಮ್ಮಲ್ಲಿ ಸುಮಾರು ೯೩ ಎಕ್ಸ್‌ರೆ ಘಟಕಗಳನ್ನು ತಾವು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಈ ೯೩ ಎಕ್ಸ್‌ರೆ ಘಟಕಗಳಲ್ಲಿ ಸುಮಾರು ೬೦ ಎಕ್ಸ್‌ರೆ ಘಟಕಗಳು ಡಿಫಂಕ್ಟ್ ಆಗಿ ನಿಂತಿವೆ. ಮತ್ತೆ ನಮ್ಮಲ್ಲಿರತಕ್ಕಂಥ ೯೫೧ ವಾಹನಗಳಲ್ಲಿ ಸುಮಾರು ನಾಲ್ಕುನೂರು ಚಿಲ್ಲರೆ ವಾಹನಗಳು ಚಾಲನೆ ಇಲ್ಲದೆ. ನಿಂತಿವೆ. ಹೀಗಿರುವಾಗ ಈವತ್ತಿನದಿವಸ ನಾವು ಹೆಚ್ಚಾಗಿ ಹಣವನ್ನು ಕೇಳುವುದರಲ್ಲಿ ಯಾವ ಪ್ರಯೋಜನವೂ ಇಲ್ಲ. ಇಂಥ ಹಲವಾರು ನ್ಯೂನ್ಯತೆಗಳು ಇಲಾಖೆಯಲ್ಲಿ ಇರುತ್ತದೆ. ಆದುದರಿಂದ ಇರತಕ್ಕಂಥ ವ್ಯವಸ್ಥೆಯಲ್ಲಿ ಸುವ್ಯವಸ್ಥಿತವಾಗಿ ಇಲಾಖೆಯನ್ನು ನಡೆಸಿಕೊಂಡು ಹೋಗಬೇಕೆಂದು ಮಾನ್ಯ ಸಚಿವರಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಮತ್ತೆ ಮಾನ್ಯ ಅಧ್ಯಕ್ಷರೇ ಈ ಟ್ರಾನ್ಸ್‌ಫರ್ಸ್ ಮತ್ತು ಪೋಸ್ಟಿಂಗ್ಸ್ ವಿಚಾರದಲ್ಲಿ ಹಲವಾರು ಸದಸ್ಯರು ಅವರವರ ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ನನಗೆ ಬಹಳ ದುಃಖವಾಗಿ ಹೇಳಬೇಕಾದ ಸಂಗತಿಎಂದರೆ ಸರ್ಕಾರದವರು ಯಾವ ಒಬ್ಬ ವೈದ್ಯನಿಗೆ ಹಣವನ್ನು ಖರ್ಚುಮಾಡಿ ಎಂ. ಎಸ್. ಮತ್ತು ಎಂ. ಡಿ. ಡಿಗ್ರಿಗಳನ್ನು ಕೊಟ್ಟು ಸಾರ್ವಜನಿಕ ಸೇವೆಯಲ್ಲಿ ತೊಡಗಲಿ ಎಂದು ಹೆಚ್ಚಿನ ಒಂದು ವ್ಯಾಸಂಗವನ್ನು ಕೊಟ್ಟಂಥವರನ್ನು ಎಲ್ಲೋ ಮೂಲೆ ಮೂಲೆ ಹಳ್ಳಿಗಳಿಗೆ ಹಾಕಿ ಕಾಲಿ ಎಂ.ಬಿ.ಬಿಎಸ್., ಮಾಡಿರತಕ್ಕಂಥವರನ್ನು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ನಲ್ಲಿ ಹಾಕತಕ್ಕಂಥದ್ದು ತುಂಬ ಶೋಚನೀಯವಾದ ಪ್ರಸಂಗ ವಾಗಿರುತ್ತದೆ. ಮೈಸೂರಿನಲ್ಲಿ ಡಿಸ್ಟ್ರಿಕ್ಟ್ ಸರ್ಜನ್ ನಾಯ್ಡು ಎಂದು ಹೇಳಿ ಅವರನ್ನು ನೇಮಿಸಿರುತ್ತಾರೆ. ಅವರ ಕ್ವಾಲಿಫಿಕೇಷನ್ ಎಲ್. ಎಂ. ಪಿ. ಅವರಿಗೆ ಪ್ರೊಮೋಷನ್ ಕೊಟ್ಟು ಡಿಸ್ಟ್ರಿಕ್ಟ್ ಸರ್ಜನ್ ಆಗಿ ಪೋಸ್ಟಿಂಗ್ಸ್ ಮಾಡಿರುತ್ತಾರೆ.

ಡಿಸ್ಟ್ರಿಕ್ಟ್ ಸರ್ಜನ್ ಎಂದರೆ ಆತ ಕಾಂಪಿಟಿಟಿವ್ ಸರ್ಟಿಫಿಕೇಟ್, ಪೋಸ್ಟ್ ಮಾರ್ಟಮ್ ಸರ್ಟಿಫಿಕೇಟ್ ಕೊಡಬೇಕಾಗುತ್ತದೆ. ಅವರದು ಜವಾಬ್ದಾರಿಯುತವಾದ ಕೆಲಸಗಳನ್ನು ಮಾಡಬೇಕಾಗುತ್ತದೆ. ಎಲ್.ಎಂ.ಪಿ. ಆಗಿರುವವರನ್ನು ಈ ರೀತಿ ನಡೆಸಿಕೊಂಡರೆ ಹೇಗೆ? ಇದರಿಂದಾಗಿ ಎಷ್ಟೋ ಜನ ವೈದ್ಯರು ರಾಜೀನಾಮೆಯನ್ನು ಕೊಟ್ಟು ಸ್ವಂತ ಪ್ರಾಕ್ಟೀಸ್ ಮಾಡುತ್ತಿರುವುದನ್ನು ನಾವು ಇವತ್ತು ನೋಡಿದ್ದೇವೆ. ಡಾ॥ ಇಂದಿರಾ ಅವ್ಲ್ಲ, ಡಾ॥ ಮಸ್ಕರಾನಸ್, ಡಾ॥ ಮೂರ್ತಿ ಈ ವರ್ಗಾವಣೆಯ ಕಿರುಕುಳದಿಂದಾಗಿ ರಾಜೀನಾಮೆ ಕೊಟ್ಟು ಮನೆಗೆ ಹೋಗಿದ್ದಾರೆ. ಹೊಸ ಹೊಸ ವೈದ್ಯಕೀಯ ಕಾಲೇಜುಗಳನ್ನು ತೆರೆಯಲಾಗುತ್ತಿದೆ. ಹಲವಾರು ವಿದ್ಯಾರ್ಥಿಗಳು ಒಂದು ಲಕ್ಷದ ಅರವತ್ತು ಸಾವಿರ ರೂಪಾಯಿ ಕ್ಯಾಪಿಟೇಷನ್ ಫೀಸನ್ನು ಕೊಟ್ಟು ಡಾಕ್ಟರುಗಳಾಗುತ್ತಿದ್ದಾರೆ. ಹಲವಾರು ಡಾಕ್ಟರುಗಳು ವಿದೇಶಗಳಿಗೆ ಹೋಗಿ ತಜ್ಞರಾಗಿ ಬಂದು ಸಾರ್ವಜನಿಕರ ಆರೋಗ್ಯವನ್ನು ಕಾಪಾಡಬೇಕಾಗಿದ್ದಂತಹ ಡಾ॥ ಇಂದಿರಾ ಆವ್ಲ್ಲಿ, ಡಾ॥ ಮಸ್ಕರಾನಸ್. ಇಂತಹವರನ್ನು ನಾವು ಮತ್ತೊಮ್ಮೆ ತಯಾರು ಮಾಡಲು ಆಗುತ್ತದೆಯೇ ? ಮಾನ್ಯ ಮಂತ್ರಿಗಳು ಈ ಬಗ್ಗೆ ಗಮನಹರಿಸಬೇಕು. ಅವರುಗಳು ರಾಜೀನಾಮೆಯನ್ನು ಕೊಟ್ಟರೂ ತಪ್ಪಿಲ್ಲ ಅವರನ್ನು ಸರ್ಕಾರ ಮತ್ತೆ ವಾಪಸ್ ಕರೆಸಿಕೊಂಡು ಅವರ ಒಂದು ಸೇವೆಯನ್ನು ಉಪಯೋಗಿಸಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಎಂ.ಎಸ್. ಮಾಡಿರು ವವರನ್ನು ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮಾಡಲಾಗಿದೆ. ಈ ಹುದ್ದೆಗೆ ಎಂ.ಎಸ್. ಪಾಸ್ ಮಾಡಿರುವಂತಹವರು ಬೇಕೇ ? ಇದಕ್ಕೆ ಎಂ.ಬಿ.ಬಿ.ಎಸ್. ಮಾಡಿರುವವರು ಸಾಕು. ಮಾನ್ಯ ಸಚಿವರು ವರ್ಗಾವಣೆ ಮಾಡುವ ಬಗ್ಗೆ ಸರಿಯಾದ ನೀತಿಯನ್ನು ಇಟ್ಟುಕೊಂಡು ಯಾರ್ಯಾರನ್ನು ಎಲ್ಲೆಲ್ಲಿ ಉಪಯೋಗಿಸಿಕೊಳ್ಳಬೇಕು ಎನ್ನುವ ಬಗ್ಗೆ ಗಮನ ಕೊಡಬೇಕು.

ಇನ್ನು ನರ್ಸಿಂಗ್ ಟ್ರೈನಿಂಗ್ ಬಗ್ಗೆ ಹೇಳಬೇಕೆಂದರೆ ಇದರಲ್ಲಿ ಸ್ಟೈಫೆಂಡರಿ ಸ್ಟಾಫ್ ಹಾಗೂ ನಾನ್ ಸ್ಟೈಫೆಂಡರಿ ಸ್ಟಾಫ್ ಎಂದು ಎರಡು ವಿಧ ಮಾಡಿದ್ದೀರಿ. ಜಿಲ್ಲಾ ಕೇಂದ್ರಗಳಲ್ಲಿ ಸ್ಟೈಫೆಂಡರಿ ಸ್ಟಾಫ್ ಟ್ರೈನಿಂಗ್ ನಡೆಯುತ್ತಿದೆ. ಇವತ್ತು ಹಳ್ಳಿಯ ಹೆಣ್ಣು ಮಕ್ಕಳು ನರ್ಸಿಂಗ್ ಟ್ರೈನಿಂಗ್ ಮಾಡಬೇಕಾದರೆ ನಾನ್ ಸ್ಟೈಫೆಂಡರಿಯಲ್ಲಿ ಬರುವುದಕ್ಕಾಗುವುದಿಲ್ಲ. ಇಂತಹವರು ಟ್ರೈನಿಂಗ್ ಮಾಡಬೇಕಾದರೆ ಪಟ್ಟಣ ಗಳಿಗೆ ಬಂದು ಅವರ ಮಾನವನ್ನು ವ್ಯಯಮಾಡಿಕೊಂಡು ನರ್ಸ್ ಟ್ರೈನಿಂಗ್ ಮಾಡಬೇಕಾದ ಪರಿಸ್ಥಿತಿ ಇದೆ. ಈ ನರ್ಸ್ ಟ್ರೈನಿಂಗ್‌ನಲ್ಲೂ ಏಕೆ ಈ ತಾರತಮ್ಯ ? ಮಾಡಿದರೆ ಎಲ್ಲರಿಗೂ ಒಂದೇ ರೀತಿಯ ಟ್ರೈನಿಂಗ್ ಕೊಡಿ. ಇಂತಹ ತಾರತಮ್ಯವನ್ನು ತಪ್ಪಿಸಬೇಕು. ಇಂತಹ ತಾರತಮ್ಯದಿಂದ ಸಾಮಾಜಿಕ ಅನೈತಿಕತೆ ಏನು ಉಂಟಾಗಿದೆ ಇದನ್ನು ತಪ್ಪಿಸುವುದಕ್ಕೆ ಸಹಾಯ ಮಾಡಬೇಕು. ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ವರದಿಯಲ್ಲಿ ಒಂದೊಂದು ಜಿಲ್ಲೆಯಲ್ಲಿನ ಜಿಲ್ಲಾ ಆಸ್ಪತ್ರೆಗಳಲ್ಲಿ ೧೨ ರೀತಿಯ ವ್ಯವಸ್ಥೆ ಮಾಡ ಲಾಗಿದೆಯೆಂದು ಹೇಳಿದ್ದಾರೆ. ನಾನು ಈಗ ಮೈಸೂರು ಜಿಲ್ಲೆಯ ಮೈಸೂರು ನಗರದಲ್ಲಿರುವ ಕೃಷ್ಣರಾಜ ಆಸ್ಪತ್ರೆಗೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಹೇಳುತ್ತೇನೆ. ಕೃಷ್ಣರಾಜ ಆಸ್ಪತ್ರೆ ನಿರ್ಮಾಣ ಆಗಿ ನೂರು ವರ್ಷ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಆಗಿನಿಂದಲೂ ಆ ಆಸ್ಪತ್ರೆಯಲ್ಲಿ ಇರತಕ್ಕ ತುರ್ತು ಚಿಕಿತ್ಸಾ ವಿಭಾಗಗಳು ಎರಡೇ, ಒಂದು ಗಂಡಸರಿಗೆ ಇನ್ನೊಂದು ಹೆಂಗಸರಿಗೆ. ಪ್ರತಿ ಹೊಂದರಲ್ಲಿರುವ ಹಾಸಿಗೆಗಳು ಬರೇ ನಾಲ್ಕು. ಈಗ ೮೧ನೇ ಇಸವಿ ಆದರೂ ಕೂಡ ತುರ್ತು ಚಿಕಿತ್ಸಾ ವಿಭಾಗಗಳು ಹೆಚ್ಚಳಗೊಂಡಿಲ್ಲ. ಇಲ್ಲಿಗೆ ತರಾವರಿ ರೋಗದವರು ಬರುತ್ತಾರೆ. ಅವರಿಗೆ ಸರಿಯಾಗಿ ಚಿಕಿತ್ಸೆ ಕೊಡುವುದಕ್ಕೆ ಆಗುತ್ತಾ ಇಲ್ಲ. ಇದನ್ನು ವಿಸ್ತರಣೆ ಮಾಡಿ ಇನ್ನೂ ನಾಲ್ಕೈದು ತುರ್ತು ಚಿಕಿತ್ಸಾ ವಿಭಾಗಗಳನ್ನು ತೆರೆಯಬೇಕು. ಈ ತುರ್ತು ಚಿಕಿತ್ಸಾ ವಿಬಾಗದಲ್ಲಿ ಜೀವ ರಕ್ಷಕ ಔಷಧಿಗಳನ್ನು ಇಡುವುದಕ್ಕೆ ಒಂದು ಶೀತಲ ಯಂತ್ರ (ಫ್ರಿಡ್ಜ್) ಕೂಡ ಇಲ್ಲ ದೂರದಿಂದ ಆ ಔಷಧಿಗಳನ್ನು ತರುವು ದರೊಳಗೆ ಅಲ್ಲಿನ ರೋಗಿಗಳು ಸತ್ತುಹೋಗುತ್ತಾರೆ. ಆದ್ದರಿಂದ ತುರ್ತು ಚಿಕಿತ್ಸಾ ವಿಭಾಗದಲ್ಲಿ ಒಂದು ಫ್ರಿಡ್ಜ್ ಇರಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ತಿಳಿಸುತ್ತಿದ್ದೇನೆ. ಮತ್ತು ಇದೇ ಆಸ್ಪತ್ರೆಯಲ್ಲಿ ಹೃದ್ರೋಗಿಗಳನ್ನು ಚಿಕಿತ್ಸೆಗಾಗಿ ಮೇಲಿನ ಅಂತಸ್ತಿಗೆ ಕೊಂಡೊಯ್ಯುವುದಕ್ಕೆ ಒಂದು ಲಿಫ್ಟ್ ಇದ್ದು ಅದು ಕಳೆದ ೧೦ ವರ್ಷಗಳಿಂದ ಕೆಟ್ಟು ಕುಳಿತಿದೆ. ಈ ಬಗ್ಗೆ ನಾನು ಹಿಂದೆ ಕಾಲಿಂಗ್ ಅಟೆಂಷನ್ ಕೊಟ್ಟಿದ್ದು ಆ ಬಗ್ಗೆ ಅಂದಿನ ಮಂತ್ರಿಗಳು ಅದನ್ನು ಸರಿಪಡಿಸುತ್ತೇವೆಂದು ಹೇಳಿದ್ದರು. ಆದರೆ ಅದರ ರಿಪೇರಿ ಇನ್ನು ಸಹ ಆಗಿಲ್ಲ, ಈಗ ಹೃದ್ರೋಗಿಗಳನ್ನು ನಾಲ್ಕು ಜನರು ಹೊತ್ತುಕೊಂಡು ಮೇಲಿನ ಮಹಡಿಗೆ ಚಿಕಿತ್ಸೆಗಾಗಿ ಕೊಂಡೊಯ್ಯುತ್ತಿದ್ದಾರೆ. ಒಂದು ಲಿಫ್ಟನ್ನು ಸರಿಮಾಡುವುದಕ್ಕೆ ಆಗದಿದ್ದರೂ ಕೋಟ್ಯಾಂತರ ರೂಪಾಯಿಯನ್ನು ಇವತ್ತು ಕೇಳುತ್ತಿದ್ದಾರೆ. ಆದ್ದರಿಂದ ಆದಷ್ಟು ಬೇಗ ಈ ಲಿಫ್ಟನ್ನು

ರಿಪೇರಿ ಮಾಡಿ ಹೃದ್ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಈ ಕೆ. ಆರ್. ಆಸ್ಪತ್ರೆಗೆ ಒಂದು ವರ್ಷದಲ್ಲಿ ಸುಮಾರು ೨ ಲಕ್ಷ ಜನ ಹೊರ ರೋಗಿಗಳು ಬರುತ್ತಾರೆಂದು ಹೇಳಲಾಗಿದೆ. ಈ ೨ ಲಕ್ಷ ಜನರಿಗಾಗಿ ಈ ಆಸ್ಪತ್ರೆಯಲ್ಲಿ ಇರುವ ಮಲಮೂತ್ರ ವಿಸರ್ಜನಾ ಜಾಗಗಳು ಬರೀ ಎರಡೇ. ಹೀಗಾದರೇ ಆರೋಗ್ಯವನ್ನು ಕಾಪಾಡುವುದು ಹೇಗೆ? ಈ ಆಸ್ಪತ್ರೆ ಒಳಗೆ ಸ್ವಚ್ಛತೆ ಇಲ್ಲ. ಯಾರಾದರೂ ಚಲನಚಿತ್ರಮಂದಿರಗಳ ನಿರ್ಮಾಣಕ್ಕೆ ಅರ್ಜಿ ಹಾಕಿದರೆ, ಆ ಚಿತ್ರಮಂದಿರದಲ್ಲಿ ಪ್ರತಿ ೫೦ ಜನಕ್ಕೆ ಒಂದರಂತೆ ಕಕ್ಕಸ್ಸು ಇರಬೇಕೆಂದು ಕಾನೂನು ಹೇರುತ್ತೀರಿ. ಎಂದಮೇಲೆ ೨ ಲಕ್ಷ ಹೊರರೋಗಿಗಳಿಗೆ ಬರೀ ೨ ಕಕ್ಕಸ್ಸುಗಳು ಅಂದರೆ ಆರೋಗ್ಯ ಎಲ್ಲಿ ಕಾಪಾಡಲಾಗುತ್ತಿದೆ? ಇದರಿಂದಾಗಿ ರೋಗಾಣುಗಳು ಹರಡುವುದಕ್ಕೆ ಅನುಕೂಲವಾಗುವುದಿಲ್ಲವೆ? ರೋಗಾಣುಗಳನ್ನು ಹರಡುವಿಕೆ ಹಂದಿ ನಾಯಿಗಳಿಂದ ಈಗ ಆಗುತ್ತಾ ಇಲ್ಲ, ಅದು ಆಸ್ಪತ್ರೆಗಳಿಂದ ಎಂದರೆ ತಪ್ಪಾಗಲಾರದು. ಇಲ್ಲಿಗೆ ೨ ಲಕ್ಷ ಹೊರರೋಗಿಗಳು ಬರಬೇಕಾದರೆ ಅವರ ಜೊತೆ ಬರುವಂತಹ ಜನರು ಎಷ್ಟು ಜನ ಎಂದು ಲೆಕ್ಕಹಾಕಿ. ಆದ್ದರಿಂದ ಇಲ್ಲಿ ಕನಿಷ್ಟ ೧೦ ಕಕ್ಕಸ್ಸನ್ನಾದರೂ ನಿರ್ಮಿಸಿ ಅವಕ್ಕೆ ಇಬ್ಬರು ಅಟೆಂಡೆಂಟ್ಸ್‌ನ್ನಾದರೂ ನೇಮಕ ಮಾಡಬೇಕೆಂದು ಹೇಳುತ್ತೇನೆ. ಮಹಾತ್ಮಾ ಗಾಂಧೀಜಿಯವರು ಯಾರಾದರೂ ಒಬ್ಬರ ಸ್ವಚ್ಛತೆಯನ್ನು ನೋಡಬೇಕಾದರೆ ಅವರು ಹಾಕಿರತಕ್ಕ ಬಟ್ಟೆಗಳನ್ನು ನೋಡಬೇಡಿ. ಅವರ ಮನೆಯಲ್ಲಿರುವ ಕಕ್ಕಸ್ಸನ್ನು ನೋಡಿ ಅವರ ಸ್ವಚ್ಛತೆಯನ್ನು ತಿಳಿಯಿರಿ ಎಂದು ಹೇಳಿದ್ದಾರೆ. ಈ ಪರಿಸರದ ನೈರ್ಮಲ್ಯತೆಯ ಬಗ್ಗೆ ಮಂತ್ರಿಗಳು ಗಮನ ಕೊಡಬೇಕೆಂದು ಈ ಮೂಲಕ ತಿಳಿಸುತ್ತೇನೆ.

ಇನ್ನು ಹಲವಾರು ಆಸ್ಪತ್ರೆಗಳನ್ನು ಕಟ್ಟುವುದಕ್ಕೆ ಸಾರ್ವಜನಿಕರಿಂದ ವಂತಿಕೆಯನ್ನು ಪಡೆಯಲಾಗಿದೆ. ನಮ್ಮ ಕಡೆಯ ಒಬ್ಬ ದಾನಿಗಳು ವಿರಲೆ ಸಂಣಪ್ಪಾಜಿಗೌಡರು ಎಂಬುವವರು ಆಸ್ಪತ್ರೆಯನ್ನು ಕಟ್ಟಲೋಸುಗ ೪೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರೂ ಕೂಡಾ ಅದು ಇನ್ನೂ ಯಾವ ಹಂತಕ್ಕೂ ಬಂದಿಲ್ಲ. ಆದ್ದರಿಂದ ಅವರು ಆ ಹಣವನ್ನು ವಾಪಸ್ಸು ಕೊಡಿಸಿ ಎಂದು ಕೇಳುತ್ತಿದ್ದಾರೆ. ಆ ಹಣಕ್ಕೆ ಬಡ್ಡಿ ಇಲ್ಲದೇ ಅಲ್ಲೇ ಇರುವುದು ಸರಿಯಲ್ಲ ಹೆಗಿಗೆ ಆಸ್ಪತ್ರೆ ಕಟ್ಟಲಾಗದಿದ್ದರೆ ಆ ಹಣವನ್ನು ವಾಪಸ್ ಕೊಡಿಸಿ ಎಂದು ನನ್ನ ಕುತ್ತಿಗೆಯಮೇಲೆ ಬಂದು ಕುಳಿತಿದ್ದಾರೆ. ಅವರಿಗೆ ವಯಸ್ಸಾಗಿದೆ. ಸಾಯುವುದರೊಳಗೆ ಅವರು ಆ ಆಸ್ಪತ್ರೆಯಲ್ಲಿ ತಮ್ಮ ಹೆಸರನ್ನು ಹಾಕಿಸಿಕೊಳ್ಳಬೇಕೆಂಬ ಆಸೆಯಿಂದ ಹಣವನ್ನು ಕೊಟ್ಟಿರುತ್ತಾರೆ. ಮತ್ತೆ ಮಾರ್ಕೆಟಿಂಗ್ ಡಿಪಾರ್ಟ್‌ಮೆಂಟಿನಲ್ಲಿ ಹಾಗೂ ಬೇರೆ ಇಲಾಖೆಗಳಲ್ಲಿ ಇರುವಂತೆ ಎಂಜಿನಿಯರಿಂಗ್ ಸೆಲ್ ಕಟ್ಟಡಗಳನ್ನು ಕಟ್ಟುವುದಕ್ಕೋಸ್ಕರ ಎಂದು ಹೇಗೆ ಬೇರೆ ಸೆಲ್ ಮಾಡಿದ್ದಾರೆ ಆ ರೀತಿ ಆರೋಗ್ಯ ಇಲಾಖೆಯಲ್ಲೂ ಒಂದು ಎಂಜಿನಿಯರಿಂಗ್ ಸೆಲ್ ಮಾಡಬೇಕೆಂದು ನಾನು ಹೇಳುತ್ತೇನೆ. ಮಾನ್ಯ ಪಿ. ಡಬ್ಲ್ಯೂ. ಡಿ. ಮಂತ್ರಿಗಳು ಇಲ್ಲೇ ಇದ್ದಾರೆ ಪಿ.ಡಬ್ಲ್ಯೂ.ಡಿ. ಇಲಾಖೆಗೆ ಹೋದ ಹಣ ಮರ ಎತ್ತುವುದಕ್ಕೆ ಮಣ್ಣು ತುಂಬುವುದಕ್ಕೇ ಖರ್ಚಾಗುತ್ತದೆ. ನಮ್ಮ ಬಿಲ್ಡಿಂಗ್ಸ್‌ಗೆ ಆ ಹಣ ಬರುವುದಿಲ್ಲ. ಆಸ್ಪತ್ರೆಗಳ ಕಟ್ಟಡ ಆದಷ್ಟು ಬೇಗ ಆಗಬೇಕಾದರೆ ಆರೋಗ್ಯ ಇಲಾಖೆಯಲ್ಲೂ ಸಹಾ ಎಂಜಿನಿಯರಿಂಗ್ ಸೆಲ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಟ್ಟಡಗಳಿಗೆ ಕೊಟ್ಟಂತಹ ಹಣವನ್ನು ನಾವು ಕಟ್ಟಡಗಳಿಗಾಗಿಯೇ ವಿನಿಯೋಗಿಸುತ್ತೇವೆಯೇ ವಿನಹ ನಾವು ಆ ಹಣವನ್ನು ಬೇರೆ ಉದ್ದೇಶಗಳಿಗಾಗಿ ವ್ಯಯಮಾಡುವುದಿಲ್ಲ. ಇದನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಚ್. ವಿಶ್ವನಾಥ್.—ನಾನು ತಿಳಿದುಕೊಂಡಿದ್ದೇನೆ. ನಮ್ಮ ಹಣವನ್ನು ಬೇಗ ಬೇಗ ಖರ್ಚುಮಾಡಿ ಕಟ್ಟಡಗಳನ್ನು ನಿರ್ಮಾಣ ಮಾಡಿ ಎಂದೆನಷ್ಟೇ. ಇನ್ನು ಕೊನೆಯದಾಗಿ ಕುಟುಂಬ ಕಲ್ಯಾಣದ ಬಗ್ಗೆ ಹೇಳುತ್ತೇನೆ. ಈ ದಿವಸ ರಾಷ್ಟ್ರದಲ್ಲಿ ಇರತಕ್ಕ ಎಲ್ಲಾ ಸಮಸ್ಯೆಗಳಲ್ಲೂ ಮೂಲಭೂತವಾಗಿ ಇರತಕ್ಕದ್ದು ಈ ಬೆಳೆಯುತ್ತಿರತಕ್ಕ ಜನಸಂಖ್ಯೆ. ಈಗೇನೋ ನಾವು ಕೇಳುತ್ತಿರುವವರೆಗೆ ಕಟ್ಟಡಗಳನ್ನು, ಮನೆಗಳನ್ನು, ನಿವೇಶನಗಳನ್ನು ಕೊಡುತ್ತಿದ್ದೇವೆ. ಜನಸಂಖ್ಯೆ ಇದೇ ರೀತಿ ಬೆಳೆಯುತ್ತಾ ಹೋದರೆ ನಾವು ಜನಕ್ಕೆ ಒಂದು ಗೋಣಿಚೀಲವನ್ನೂ ಸಹಾ ಕೊಡುವುದಕ್ಕಾಗುವುದಿಲ್ಲ.

ಆದ್ದರಿಂದ ಈ ಬಗ್ಗೆ ನಾವು ಜಾಸ್ತಿ ಹಣ ಖರ್ಚು ಮಾಡಬೇಕಾಗಿದೆ. ೬ನೇ ಯೋಜನೆಯಲ್ಲಿ ಬರ್ತ್ ರೇಟನ್ನು ೨೫ ಪರ್ಸೆಂಟ್‌ಗೆ ಇಳಿಸಬೇಕೆಂದು ಇದೆ. ಆದರೆ ನಮ್ಮ ಸರ್ಕಾರ ಈಗಾಗಲೇ ಅದನ್ನು ೨೩ ಪರ್ಸೆಂಟ್‌ಗೆ ಇಳಿಸಿ ಒಂದು ಒಳ್ಳೆಯ ಸಾಧನೆ ಮಾಡಿದೆ ಎಂದು ಈ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕುಟುಂಬಕಲ್ಯಾಣ ಯೋಜನೆಗೆ ೯೧೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ೪೩೧ ಲಕ್ಷ ರೂಪಾಯಿಗಳು ಖರ್ಚಾಗದೆ ಹಾಗೆ ಉಳಿದಿದೆ. ಏತಕ್ಕೆ ಉಳಿಸುತ್ತೀರಿ ? ಜನರಿಗೆ ನಿರೋಧ್‌ನ್ನು ಫ್ರಿಯಾಗಿ ಕೊಡಿ. ಇದು ನಗುವ ವಿಚಾರ ಅಲ್ಲ, ಇದು ದೇಶದ ದೊಡ್ಡ ವಿಚಾರ. ನಿರೋಧ್‌ಗಳನ್ನು ನಾಲ್ಕಾಣೆಗೆ ಏತಕ್ಕೆ ಮಾರುತ್ತೀರಿ ಪುಕ್ಕಟೆ ಯಾಗಿ ಹಂಚಿ. ಈಗಿನ ಕಾಲದಲ್ಲಿ ಯುವಕರೇನಿದ್ದಾರೆ ಅವರಿಗೆ ನಿರೋಧನ್ನು ಉಪಯೋಗಿಸುವುದಕ್ಕೆ ಯಾರು ಇಚ್ಛೆಪಡುವುದಿಲ್ಲ. ಮಹಿಳೆಯರು ಕೂಡ ಇಷ್ಟಪಡುವುದಿಲ್ಲವಂತೆ. ಆ ವಿಚಾರ ನನಗೆ ಗೊತ್ತಿಲ್ಲ. ಆದ್ದರಿಂದ ಬೇರೆ ಬೇರೆ ನಿಯಮಗಳನ್ನು ಕಂಡುಹಿಡಿಯಬೇಕು, ಸಾಧನೆಗಳನ್ನು ಮಾಡಬೇಕು. ಇದರಲ್ಲಿ ಮೂಲಸಮಸ್ಯೆ ಪ್ರಜಾಸಂಖ್ಯೆ ಹೆಚ್ಚುವುದನ್ನು ನಿಲ್ಲಿಸಬೇಕು. ಕೊಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿಯೆಂದು ನಿಮಗೆ ಹಣ ಕೊಟ್ಟರೆ ಯಾವರೀತಿ ಖರ್ಚುಮಾಡುತ್ತೀರಿ ? ನಿಮ್ಮ ಅಧಿಕಾರಿಗಳು ೯೧೨ ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಿಕ್ಕೆ ಸಾಧ್ಯವಾಗಿಲ್ಲ. ಆಪರೇಷನ್ ಮಾಡಿಸಿಕೊಂಡಂತಹ ಮಹಿಳೆಯರಿಗೆ ಸೀರಿ, ರವಿಕೆ ಕೊಡಿ, ಗಂಡಸರನ್ನು ಎಳೆದುಕೊಂಡು ಬಂದು ಕಟ್ ಮಾಡಿ ಯಾರು ಬೇಡ ಅಂದರೂ,

MR. DEPUTY SPEAKER.—You have already taken seven minutes more than allowed. I have allotted you 10 minutes. You have taken 17 minutes already.

ಶ್ರೀ ಎಚ್. ವಿಶ್ವನಾಥ್.—ಬೆಂಗಳೂರಿನಲ್ಲಿ ಆದರ್ಶ ಕ್ಲಿನಿಕ್‌ನವರು ಟ್ಯುಬ್ಯಾಕ್ಟಮಿ ಆಪರೇಷನ್ ಮಿಷನ್ ತಂದಿದ್ದಾರಂತೆ, ಅದು ೨ ನಿಮಿಷಗಳಲ್ಲಿ ಆಪರೇಷನ್ ಮಾಡಿ ಮುಗಿಸುತ್ತದಂತೆ. ಅಂತಹ ಮಿಷನ್‌ಗಳನ್ನು ತರಿಸಿ ಎಲ್ಲ ಕಡೆಗೂ ಒದಗಿಸಿಕೊಟ್ಟು ಚಿಕಿತ್ಸೆ ಸಂಗವಂವಾಗಿ ಮಾಡಿ ಅದಷ್ಟು ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು ಜೊತೆಗೆ ಪ್ರಚಾರ ಕೂಡ ಮಾಡಬೇಕು. ಪ್ರಚಾರಕ್ಕೆ ಲಿಟರೇಚರ್‌ಗಳನ್ನು ಒದಗಿಸಬೇಕು. ಪ್ರಚಾರಮಾಡತಕ್ಕ ಅಧಿಕಾರಿಗಳು ಕೆಳಮಟ್ಟದ ಅಧಿಕಾರಿಗಳಾಗಿರದೇ, ಲಿಟರೇಚರ್‌ಗಳನ್ನು ಸರಿಯಾದ ರೀತಿಯಲ್ಲಿ ಒದಗಿಸಿಕೊಂಡು ಪ್ರಚಾರಮಾಡಬೇಕು. ಪ್ರಜಾಸಂಖ್ಯೆ ದಿನೇ ದಿನೇ ಏರುತ್ತಿದೆ, ಇದು ದೇಶದ ಸಮಸ್ಯೆಯಾಗಿದೆ. ಪ್ರಚಾರ ಮಾಡತಕ್ಕ ಅಧಿಕಾರಿಗಳು ಜನರಿಗೆ ಹೇಳುವಾಗ ಸರಿಯಾದ ರೀತಿಯಲ್ಲಿ ಪ್ರಚಾರಮಾಡಬೇಕು. ನಮ್ಮಲ್ಲಿ ಪ್ರಚಾರ ಮಾಡಲಿಕ್ಕೆ ಅಧಿಕಾರಿಗಳು ಬಂದರು, ಅವರು ನಿರೋಧನ್ನು ಯಾವ ರೀತಿ ಬಳಸಬೇಕೆಂಬುದನ್ನು ಹೇಳಿದರು. ಯಾವ ರೀತಿ ಬಳಸಬೇಕು ? ಒಂದು ಕೋಲು ತೆಗೆದುಕೊಂಡು ಆ ಕೋಲಿಗೆ ನಿರೋಧನ್ನು ಸಿಕ್ಕಿಸಿದರು, ಪಾಪ ಹಳ್ಳಿಯ ಜನರಿಗೆ ಯಾವರೀತಿ ಬಳಸಬೇಕೆಂದು ಗೊತ್ತಿಲ್ಲ. ಇವರು ಕೊಟ್ಟಂತಹ ನಿರೋಧ್‌ಗಳನ್ನು ಆ ಜನರು ಕೋಲಿಗೆ ಸಿಕ್ಕಿಸುತ್ತಾ ಬಂದರೂ ಮಕ್ಕಳು ಮಾತ್ರ ಹುಟ್ಟುವುದು ತಪ್ಪಲಿಲ್ಲ ಆದ್ದರಿಂದ ಪ್ರಚಾರ ಮಾಡತಕ್ಕವರು ಸರಿಯಾದ ರೀತಿಯಲ್ಲಿ ಹಳ್ಳಿಗಾಡಿನಲ್ಲಿರತಕ್ಕ ಜನರಿಗೆ ಹೇಳಿಕೊಡಬೇಕೆಂದು ನಾನು ಕಳಕಳಿಯಿಂದ ಹೇಳುತ್ತಿದ್ದೇನೆ. ಇದು ದೇಶದ ಮೂಲ ಸಮಸ್ಯೆ, ಇದನ್ನು ಗಮನದಲ್ಲಿಟ್ಟುಕೊಂಡು ಕೆಲಸಮಾಡಬೇಕಾಗಿದೆ. ಹಲವಾರು ಕಾರ್ಯಕಲಾಪಗಳನ್ನು ಹಾಕಿಕೊಂಡು ನಮ್ಮ ಆರೋಗ್ಯ ಸಚಿವರ ನೇತೃತ್ವದಲ್ಲಿ ಆರೋಗ್ಯ ಇಲಾಖೆ ಸಾಧನೆಗಳನ್ನು ಸಾಧಿಸಲಿ ಮುಂದುವರಿಯಲಿ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರು ಮಂಡಿಸಿರತಕ್ಕ ಮುಂಗಡಪತ್ರವನ್ನು ಸ್ವಾಗತಿಸುತ್ತಾ, ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ಮಲೇರಿಯಾ ಎರಾಡಿಕೇಷನ್ ಸ್ಕೀಮ್ ಜಾರಿಯಲ್ಲಿದೆ. ಇದು

† Indicates that remarks or speeches have not been revised by the member concerned.

ಪ್ರಾರಂಭವಾಗಿ ೮–೧೦ ವರ್ಷಗಳಾಗಿರಬಹುದು, ಇದು ಪ್ರಾರಂಭವಾದಾಗಿನಿಂದಲೂ ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸವನ್ನು ಮಾಡಿಲ್ಲ. ನಾವು ನೋಡುತ್ತಿದ್ದೇವೆ ಮಲೇರಿಯಾ ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಿದೆ. ಕಾರಣವೇನೆಂದು ಸರ್ಕಾರಿ ಅಧಿಕಾರಿಗಳೇ ಹೇಳುತ್ತಾರೆ, ಡಿ.ಡಿ.ಟಿ. ಯನ್ನು ಹೊಡೆಯುವುದು ಸೊಳ್ಳೆಗಳನ್ನು ಸಾಯಿಸಲಿಕ್ಕೆ ಡಿ.ಡಿ.ಟಿ ಹೊಡೆದರೆ ಸೊಳ್ಳೆಗಳು ಸಾಯುವುದಿಲ್ಲವಂತೆ. ಡಿ.ಡಿ ಟಿ. ಹೊಡೆದರೂ ಇಮ್ಯುನಿಟಿ ಆಗಿ ಸೊಳ್ಳೆಗಳ ಸಂತಾನ ಪೂರ್ಣ ಹಾಳಾಗುವುದಿಲ್ಲ. ಇದಕ್ಕೆ ಬೇರೆ ಏನಾದರೂ ಮಾರ್ಗವನ್ನು ಕಂಡುಹಿಡಿಯಬೇಕು. ಕರ್ನಾಟಕ ರಾಜ್ಯದಲ್ಲಿ ಮಲೇರಿಯಾ ರೋಗವನ್ನು ತಡೆಗಟ್ಟಲು ಪೂರ್ಣ ಯಶಸ್ವಿಯಾಗಿದ್ದರೂ ಪ್ರಾಜೆಕ್ಟ್‌ಗಳಲ್ಲಿ ಕೆಲಸ ಮಾಡಲಿಕ್ಕೆ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಂದ ಬಂದಂತಹ ಕಾರ್ಮಿಕರಲ್ಲಿ ಈ ರೋಗವಿದ್ದು ಇದು ಕರ್ನಾಟಕದಲ್ಲೂ ಹರಡಿತು ಎಂದು ಕಾರಣಗಳನ್ನು ಅಧಿಕಾರಿಗಳು ಹೇಳುತ್ತಾರೆ. ಮಾನ್ಯ ಆರೋಗ್ಯ ಸಚಿವರು ಕೂಲಂಕುಷವಾಗಿ ಪರಿಶೀಲನೆ ಮಾಡಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸಲಹೆ ಮಾಡಲು ಇಚ್ಛೆಪಡುತ್ತೇನೆ. ಹೊರ ದೇಶಗಳಿಂದ ಬರತಕ್ಕ ಕೂಲಿಗಾರರಿಗೆ ನಮ್ಮ ದೇಶಕ್ಕೆ ಬರುವುದಕ್ಕೆ ಮುಂಚಿತವಾಗಿಯೇ ಇಂಜಕ್ಷನ್ ವಗೈರೆಗಳನ್ನು ಕೊಟ್ಟು ಕಂಟ್ರೋಲ್ ಮಾಡುವುದು ಉತ್ತಮವೆಂದು ನಾನು ತಿಳಿಸಲು ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ೬೦೦ ಆಸ್ಪತ್ರೆಗಳನ್ನು ನಡೆಸುತ್ತಿದ್ದಾರೆ. ಮಾನ್ಯ ಸಿದ್ಧವೀರಪ್ಪನವರು ಆರೋಗ್ಯ ಮಂತ್ರಿಗಳಾಗಿದ್ದಾಗ, ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ನಡೆಸುವ ಆಸ್ಪತ್ರೆಗಳನ್ನು ಸರ್ಕಾರವೇ ವಹಿಸಿಕೊಳ್ಳುವಂತೆ ಮಾಡಿದ್ದರು. ಕಾರಣ ಅಲ್ಲಿ ಸರಿಯಾದ ವೈದ್ಯಕೀಯ ಸೌಲಭ್ಯ ಹಳ್ಳಿಗಾಡಿನ ಜನರಿಗೆ ಸಿಕ್ಕುತ್ತಿರಲಿಲ್ಲ. ಟಿ.ಡಿ.ಬಿ. ಗಳಿಗೆ ಹೆಚ್ಚಿನ ಉತ್ಪತ್ತಿ ಇರುವುದಿಲ್ಲ. ತಾವು ಕೂಡ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ನಡೆಸತಕ್ಕ ಆಸ್ಪತ್ರೆಗಳನ್ನು ತಕ್ಷಣ ಸರ್ಕಾರವೇ ವಹಿಸಿಕೊಳ್ಳುತ್ತದೆಂಬ ಭರವಸೆಯನ್ನು ನೀಡಿದ್ದೀರಿ ಈಗ ಸರ್ಕಾರ ೨೦೦ ಆಸ್ಪತ್ರೆಗಳನ್ನು ಮಾತ್ರ ತೆಗೆದುಕೊಂಡಿದೆ. ಇನ್ನು ೪೦೦ ಆಸ್ಪತ್ರೆಗಳನ್ನು ತೆಗೆದುಕೊಳ್ಳುವ ಬಗ್ಗೆ ಮಾನ್ಯ ಸಚಿವರು ಗಮನಹರಿಸಿ ತಕ್ಷಣ ಸರ್ಕಾರ ವಹಿಸಿಕೊಳ್ಳಲು ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರ ಆರೋಗ್ಯ ಕೆಟ್ಟು ಅನೇಕ ವಿಧವಾದ ತೊಂದರೆಗಳಿಗೆ ನಾವೇ ಗುರಿಮಾಡಿದಂತಾಗುತ್ತದೆ.

ಇನ್ನು ಫುಡ್ ಅಡಲ್ಟ್‌ರೇಷನ್ ಸೆಲ್ ಇದೆ, ಅದಕ್ಕೆ ಒಬ್ಬರು ಜಾಯಿಂಟ್ ಡೈರೆಕ್ಟರೂ ಇದ್ದಾರೆ. ಅಲ್ಲಿ ಮಾರಾಟ ಮಾಡತಕ್ಕಂತಹ ವಸ್ತುಗಳನ್ನು ಒಮ್ಮೆ ಚೆಕ್ ಮಾಡಬೇಕು. ಉದಾಹರಣೆಗೆ ಬೆಣ್ಣೆ, ಎಣ್ಣೆ, ಹಾಲು ಇತರೆ ಆಹಾರ ಪದಾರ್ಥಗಳನ್ನು ಇನ್ಸ್‌ಪೆಕ್ಟ್ ಮಾಡತಕ್ಕವರು ಹೆಲ್ತ್ ಇನ್ಸ್‌ಪೆಕ್ಟರುಗಳು. ಹಾಲಿಗೆ ಮಣ್ಣಿನ ಅಂಶ ಜಾಸ್ತಿಯಿರುವ ನೀರನ್ನು ಬೆರೆಸಿ ಮಾರಾಟ ಮಾಡುತ್ತಾರೆ. ಈ ರೀತಿ ಮಾಡುವುದರಿಂದ ಜನಗಳ ಆರೋಗ್ಯ ಕೆಡುತ್ತದೆ. ಸರಿಯಾಗಿ ಇನ್ಸ್‌ಪೆಕ್ಟ್ ಮಾಡುವುದಿಲ್ಲ. ಲ್ಯಾಬೊರೇಟರಿ ಬೆಂಗಳೂರಿನಲ್ಲಿದೆ, ಇಲ್ಲಿಗೆ ಇನ್ಸ್‌ಪೆಕ್ಟ್ ಮಾಡಲು ಕಳುಹಿಸಿದಂತಹ ಪದಾರ್ಥಗಳು ೧ ವರ್ಷ ೧½ ವರ್ಷಗಳ ನಂತರ ವಾಪಸ್ಸು ಬರಲಾಗುತ್ತದೆ. ಅಷ್ಟೊತ್ತಿಗೆ ಅವುಗಳ ಸ್ಥಿತಿ ಕೆಟ್ಟು ಹಾಳಾಗಿರುತ್ತದೆ. ಏನು ಪರಿಣಾಮವಾಗುವುದಿಲ್ಲ, ಈಗ ಕಳುಹಿಸುವುದನ್ನು ಸಹ ಬಿಟ್ಟು ಬಿಟ್ಟಿದ್ದಾರೆ. ಒಂದೇ ಒಂದು ಲ್ಯಾಬೊರೇಟರಿ ಇದ್ದರೆ ಟೆಸ್ಟ್ ಮಾಡಲು ಸಾಧ್ಯವಾಗುವುದಿಲ್ಲ. ಇದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಚನ್ನಬಸಪ್ಪನವರು ಆರೋಗ್ಯ ಮಂತ್ರಿಗಳಾಗಿದ್ದಾಗ ಹೋಬಳಿಗಳಲ್ಲಿರತಕ್ಕ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿರುವ ಹೊಟೇಲುಗಳಿಗೆ ಹೋಗಿ ಚೆಕ್ ಮಾಡಿ, ಅನೇಕ ಹೊಟೇಲುಗಳ ಲೈಸೆನ್ಸ್‌ಗಳನ್ನು ಕ್ಯಾನ್ಸಲ್ ಮಾಡಿದ್ದರು. ಈ ರೀತಿ ಮಾಡಿದ್ದರಿಂದ ಅನೇಕ ಹೊಟೇಲುಗಳವರು ಭಯಪಟ್ಟುಕೊಂಡು ಶುಚಿಯಾಗಿ ಮತ್ತು ಉತ್ತಮವಾದ ರೀತಿಯಲ್ಲಿ ನಡೆಸುತ್ತಿದ್ದರು. ಅವರು ಹೋದಮೇಲೆ ಯಥಾಪ್ರಕಾರ ಆಗಿದೆ. ಹೊಟೇಲುಗಳಿಗೆ ಇನ್ಸ್‌ಪೆಕ್ಟ್ ಮಾಡಲು ಹೋಗುವ ಅಧಿಕಾರಿಗಳಿಗೆ 'ಮಾಮೂಲಿ' ಮಾಡಿಕೊಂಡು ಅಂತಹ ಹೊಟೇಲುಗಳು ಕಾಯಿಲೆಗಳ ಕೇಂದ್ರಗಳಾಗಿವೆ. ಅಪ್ಪಿತಪ್ಪಿ ನಾವೇನಾದರೂ ಅಲ್ಲಿ ಊಟಮಾಡಿದರೆ ಮುಗಿಯಿತು ನಮ್ಮ ಕಥೆ. ಇಲ್ಲಿರತಕ್ಕ ಫೈವ್‌ಸ್ಟಾರ್, ನೈನ್‌ಸ್ಟಾರ್ ಹೊಟೇಲುಗಳನ್ನು ಬಿಡಿ, ಬಡವರು ಊಟ ಮಾಡತಕ್ಕಂತಹ ಊಟದ ಹೊಟೇಲುಗಳ ಊಟ ಬಹಳ ಅಧೋಗತಿಗೆ ಇಳಿದಿದೆ. ನಿಮ್ಮಂತಹವರೇನಾದರೂ ಆ ಹೊಟೇಲುಗಳಲ್ಲಿ ಊಟ ಮಾಡಿದರೆ ನೀವು ೨ ವರ್ಷ ಆಸ್ಪತ್ರೆಯಲ್ಲಿರಬೇಕಾಗುತ್ತದೆ. ನಾನು ಮಾತನಾಡಲು ಕಾಲದಮಿತಿ ಕಡಿಮೆಯಿರುವುದರಿಂದ ನಾನು ಹೇಳುವುದಿಷ್ಟೆ, ಮಾನ್ಯ ಚನ್ನಬಸಪ್ಪನವರು ಮಾಡಿದಂತೆ ತಾವು ಸಹ ಕೆಲವಾರು ಹೊಟೇಲುಗಳನ್ನು ಚೆಕ್ ಮಾಡಿ ಅವರ ಲೈಸೆನ್ಸ್‌ಗಳನ್ನು ರದ್ದು

ಮಾಡಿದರೆ ಅವರಿಗೆ ಭಯವಿರುತ್ತದೆ. ಜೊತೆಗೆ 'ಮಾಮೂಲಿ' ಕೊಟ್ಟುಕೊಂಡು, ತೆಗೆದುಕೊಂಡಂತಹವರಿಗೂ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಜನಗಳ ಆರೋಗ್ಯ ದೃಷ್ಟಿಯನ್ನು ಗಮನದಲ್ಲಿರಿಸಿಕೊಳ್ಳಬೇಕೆಂದು ಮಾನ್ಯ ಸಚಿವರಿಗೆ ತಿಳಿಸಬಯಸುತ್ತೇನೆ.

೩–೩೦ ಪಿ.ಎಂ.

ಮಾನ್ಯ ಸಚಿವರು ಕೆಲವು ಕಡೆಗಳಲ್ಲಿ ಆಸ್ಪತ್ರೆಗಳಿಗೆ ಸರ್‌ಪ್ರೈಸ್ ಚೆಕಿಂಗ್ ಹೋಗಿ ಕೆಲವು ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇನ್ನು ಕೆಲವು ಆಸ್ಪತ್ರೆಗಳ ಮೇಲೆ ಇರತಕ್ಕಂಥಾ ಲೋಪದೋಷಗಳ ಬಗ್ಗೆ ಆಕ್ಷನ್ ತೆಗೆದುಕೊಂಡಿದ್ದಾರೆ. ಆದುದರಿಂದ ಈವೊತ್ತಿನ ದಿವಸ ಈ ಆಸ್ಪತ್ರೆಗಳಲ್ಲಿ ಏನು ಒಂದು ದೋಷಾರೋಪಣೆ ಇತ್ತೋ ಅದು ಬಹಳಷ್ಟು ಕಡಿಮೆಯಾಗಿದೆ. ಅದಕ್ಕೋಸ್ಕರವಾಗಿ ಮಾನ್ಯ ಮಂತ್ರಿಗಳಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಇನ್ನು ಈ ಲೆಪ್ರಸಿ ಎರಾಡಿಕೇಷನ್ ಸ್ಕೀಮ್ ಬಗ್ಗೆ ಹೇಳುವುದಾದರೆ ನಮ್ಮ ಶಾಸಕರನ್ನೆಲ್ಲಾ ಕರೆದುಕೊಂಡು ಹೋಗಿ ಈ ಬಗ್ಗೆ ತೆಗೆದಿರತಕ್ಕಂಥಾ ಚಿತ್ರವನ್ನು ತೋರಿಸಿದರು. ಅದನ್ನು ನೋಡಿ ನಮಗೆ ಎಷ್ಟು ಭಯಂಕರವಾಯಿತು ಎಂದರೆ ನಿಜವಾಗಿಯೂ ಇದನ್ನು ಎಲ್ಲರೂ ನೋಡಬೇಕಾದದ್ದೇ; ಎಂದು ಅನಿಸಿತು. ಈ ಬಗ್ಗೆ ಇನ್ನೂ ಹೆಚ್ಚು ಹೆಚ್ಚಾಗಿ ಪಬ್ಲಿಸಿಟಿ ಆಗಬೇಕು. ತಮ್ಮ ಇಲಾಖಾ ವತಿಯಿಂದಾಗಲಿ ತಾಲ್ಲೂಕು ಬೋರ್ಡ್ ವತಿಯಿಂದ ಆಗಲಿ ಇಂಥಾ ಮೂವೀಸ್‌ಗಳನ್ನು ತೆಗೆಸಿದರೆ ಒಳ್ಳೆಯದು. ಈ ಒಂದು ಕುಷ್ಠ ರೋಗದ ಭಯಂಕರ ರೋಗದ ಮೇಲೆ ಇಂಥಾ ಚಿತ್ರಗಳನ್ನು ತೆಗೆಸಿದ್ದೇ ಆದರೆ ಇದರಿಂದ ಹೆಚ್ಚು ಪರಿಣಾಮವಾಗುತ್ತದೆ. ಅಲ್ಲದೆ ಇಂಥಾ ಫಿಲಂಗಳನ್ನು ನೋಡತಕ್ಕಂಥಾ ಜನಗಳ ಮೇಲೂ ಕೂಡ ಹೆಚ್ಚಿನ ಪರಿಣಾಮವಾಗಿ ಇದರ ತಿಳುವಳಿಕೆ ಹೆಚ್ಚಾಗಿ ಬರುವುದರಲ್ಲಿ ಸಂದೇಹವಿಲ್ಲ ಇಂಥಾ ಫಿಲಂ ಅನ್ನು ಪ್ರೊಡ್ಯೂಸನ್ ಮಾಡಿದರೆ, ಇದನ್ನು ಎಲ್ಲಾ ಕಡೆಯೂ ಪ್ರದರ್ಶನ ಮಾಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಿದರೆ ಇದರಿಂದ ಹೆಚ್ಚಿನ ಪ್ರಯೋಜನವಾಗುತ್ತದೆ ಇದರ ಬಗ್ಗೆ ಮಾನ್ಯ ಸಚಿವರು ಗಮನ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವೆಲ್ಲಾ ನೋಡುತ್ತಾ ಇದ್ದೇವೆ. ಈ ಲೆಪ್ರಸಿ ಎರಾಡಿಕೇಷನ್ ಸ್ಕೀಮ್ ಎಲ್ಲಿ ಹೆಚ್ಚಾಗಿ ನೋಡುತ್ತಿದ್ದೇವೆಂದರೆ ಬಸ್‌ಸ್ಟ್ಯಾಂಡ್‌ನಲ್ಲಿ, ಹೆಚ್ಚಾಗಿ ಭಿಕ್ಷುಕರಲ್ಲಿ ಈ ಭಯಂಕರವಾದ ಖಾಯಿಲೆ ಹರಡುತ್ತಾ ಇರುವುದನ್ನು ನೋಡುತ್ತಿದ್ದೇವೆ. ಅಂಥಾವರನ್ನು ನೋಡಿದ ತಕ್ಷಣ ಪೋಲೀಸರಿಗೋ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೋ ತಿಳಿಸಿ ಅವರನ್ನು ಆಸ್ಪತ್ರೆಗೆ ಸೇರಿಸಿ ಸರಿಯಾದ ಟ್ರೀಟ್‌ಮೆಂಟ್ ಕೊಡಿಸುವುದಕ್ಕೆ ತಕ್ಕಂಥಾ ವ್ಯವಸ್ಥೆಯನ್ನು ಮಾಡಬೇಕೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ತಮಗೆ ಹೇಳಬೇಕಾದರೆ ಯಾವನಾದರೂ ಒಬ್ಬ ಭಿಕ್ಷುಕನಿಗೆ ಇಂಥಾ ಖಾಯಿಲೆ ಬಂದರೆ ಅವನ ಜೊತೆಯಲ್ಲಿ ಇನ್ನೂ ೪–೫ ಮಕ್ಕಳು ದುಡ್ಡು ಕೇಳುವುದಕ್ಕೆ ನಿಂತಿರುತ್ತಾರೆ. ಇದರಿಂದ ಆ ಹುಡುಗರಿಗೂ ಸಹ ಆ ಖಾಯಿಲೆ ಹರಡುತ್ತದೆ. ದಯಮಾಡಿ ಈ ಖಾಯಿಲೆಯನ್ನು ತಪ್ಪಿಸುವುದಕ್ಕೆ ಮಾನ್ಯ ಸಚಿವರು ತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಅತಿ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಸ್ವಾಮಿ, ಇನ್ನು ಡಾಕ್ಟರ್ಸ್ ಬಗ್ಗೆ ಕೆಲವು ಮುಖ್ಯವಾದ ವಿಚಾರಗಳನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳಲೇಬೇಕಾಗುತ್ತದೆ. ಮೊದಲನೆಯದಾಗಿ ಹೇಳುವುದೇನೆಂದರೆ ಈ ಡಾಕ್ಟರ್ಸ್‌ಗಳಲ್ಲಿ ಹೆಚ್ಚು ಮಾನವೀಯತೆ ಇರಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ ನಮ್ಮಲ್ಲಿ ನೂರಕ್ಕೆ ೫ ಜನವೋ ಅಥವಾ ೧೦ ಜನವೋ ಅಂಥಾವರು ಇದ್ದಾರೆ ಇಲ್ಲ ಎಂತಲ್ಲ. ಮಾನವೀಯತೆ ದೃಷ್ಟಿಯಿಂದ ಇಂತಹ ಪುಣ್ಯ ಕೆಲಸಗಳನ್ನು ಮಾಡುವ ಪುಣ್ಯ ಜೀವಿಗಳು ಕೆಲವರು ಇದ್ದಾರೆ. ಇನ್ನು ಕೆಲವು ಡಾಕ್ಟರ್ಸ್‌ಗಳು ಹಣ ಸಂಪಾದನೆ ಮಾಡುವುದೇ ಒಂದು ಗುರಿ ಅಂತ ಇಟ್ಟುಕೊಂಡು, ಯಾರ ಮನೆ ಹಾಳಾದರೂ ಆಗಲಿ ಸಾಧ್ಯವಾದಷ್ಟು ಅವರಿಂದ ದುಡ್ಡನ್ನು ಕೀಳಬೇಕು ಅನ್ನುವಂಥಾವರೂ ಇದ್ದಾರೆ. ಒಟ್ಟಿನಲ್ಲಿ ಹೇಳಬೇಕಾದರೆ ಮಾನವೀಯತೆ ದೃಷ್ಟಿಯಿಂದ ಇದರಲ್ಲಿ ಕೆಲಸ ಮಾಡುವ ಡಾಕ್ಟರ್ಸ್ ಸಂಖ್ಯೆ ಬಹಳ ಕಡಿಮೆ. ಮಾನ್ಯ ಸಚಿವರು ಅಂಥಾವರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ತಮಗೆ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ನಮ್ಮ ಭಾಗದಲ್ಲಿ ವೆಂಕಟಾಚಾರ್ ಅನ್ನುವ ಒಬ್ಬ ಡಾಕ್ಟರ್ ಇದ್ದರು ಅವರ ಮಾನವೀಯತೆ ದೃಷ್ಟಿ ಹೇಗಿತ್ತು ಅನ್ನುವುದರ ಬಗೆ ನಾನು ಸ್ವಲ್ಪ ಹೇಳಲೇ ಬೇಕಾಗಿದೆ. ಅವರಿಗೆ ರಿಟೈರ್ಡ್ ಆಗಿ ಮಾಡೇನೂರು ಗ್ರಾಮದಲ್ಲಿ ಸಟಲ್ ಆಗಿದ್ದರು, ಈಗ ಅವರು ತೀರಿ ಹೋಗಿದ್ದಾರೆ. ಅವರು ಇದ್ದಾಗ ಈ ಕಥೆ ನಡೆದುದ್ದು.

ಅವರಿಗೆ ಇಬ್ಬರು ಗಂಡು ಮಕ್ಕಳು. ಒಬ್ಬ ಮಗ ಬೆಂಗಳೂರಿನಲ್ಲಿ ಕೆಲಸದಲ್ಲಿದ್ದಾನೆ. ಅವನಿಗೆ ೫೦೦ ರೂಪಾಯಿ ಸಂಬಳ ಬರುತ್ತದೆ. ಇನ್ನೊಬ್ಬ ಮಗ ಬೇರೆ ಊರಿನಲ್ಲಿದ್ದಾರೆ. ಅವನ ತಾಯಿ ಈ ಮಗ ನನ್ನು ನೋಡುವುದಕ್ಕೆ ಬೆಂಗಳೂರಿಗೆ ಬಂದರು. ಆತ ನಮ್ಮ ತಾಯಿ ಬಂದರಲ್ಲಾ ಅಂತ ಅವರಿಗೆ ೨೦೦ ರೂಪಾಯಿಯ ಒಂದು ಸೀರೆಯನ್ನು ಉಡುವುದಕ್ಕೆ ತಂದುಕೊಟ್ಟ. ಅವರು ವಾಪಸ್ಸು ಊರಿಗೆ ಹೋದಾಗ ಅವರ ಯಜಮಾನರು ಡಾಕ್ಟರ್ ಆಗಿದ್ದವರು ಈ ಸೀರೆ ಎಲ್ಲಿತ್ತು ಯಾರು ತಂದುಕೊಟ್ಟರು ಅಂತ ಕೇಳಿದರು. ಅದಕ್ಕೆ ಅವರು ನಾನು ಬೆಂಗಳೂರಿಗೆ ಹೋಗಿದ್ದೆ ನನ್ನ ಮಗ ತಂದುಕೊಟ್ಟ ಅಂತ ಹೇಳಿದರು. ಅದಕ್ಕೆ ಆ ಡಾಕ್ಟರ್ ಏನು ಹೇಳಿದರು ಎಂದರೆ ನನ್ನ ಮಗನಿಗೆ ಬೆಂಗಳೂರಿನಲ್ಲಿ ಬರತಕ್ಕಂಥಾ ಸಂಬಳ ಕೇವಲ ೫೦೦ ರೂಪಾಯಿ ಮಾತ್ರ ಅಲ್ಲದೆ ಆತನಿಗೆ ಮೂರು ಮಕ್ಕಳು ಇದೆ, ಬರತಕ್ಕಂಥಾ ೫೦೦ ರೂಪಾಯಿ ಸಂಬಳದಲ್ಲಿ ತನ್ನ ಮೂರು ಮಕ್ಕಳನ್ನೂ ಕಟ್ಟಿಕೊಂಡು ಜೀವನ ಮಾಡುವುದಕ್ಕೇ ಸಾಧ್ಯವಿಲ್ಲಾ ಹಾಗಿರುವಾಗ ಅವನಿಂದ ಸೀರೆ ಏತಕ್ಕೆ ತೆಗೆಸಿಕೊಳ್ಳಬೇಕಾಗಿತ್ತು ನಾನು ಇದುವರೆಗೆ ಸೀರೆ ನಿನಗೆ ತೆಗೆದುಕೊಟ್ಟಿರಲಿಲ್ಲಾವೇ, ನಾನೇನಾದರೂ ನಿನ್ನನನ್ನು ಮಣ್ಣುಪಾಲು ಮಾಡಿದ್ದನೇ ಎಂದು ರೇಗಿದ್ದಲ್ಲದೆ ಆತನು ಈ ಸೀರೆ ತೆಗೆದುಕೊಟ್ಟಿರಬೇಕಾದರೆ ಅವನ ಮಕ್ಕಳನ್ನು ಉಪವಾಸ ಇರಿಸಿ ತೆಗೆದು ಕೊಟ್ಟಿರಬೇಕು ಇಲ್ಲವೇ ಯಾವುದಾದರೂ ಲಂಚ ಹೊಡೆದು ಇದನ್ನು ತೆಗೆದು ಕೊಟ್ಟಿರಬೇಕು ಎಂದು ತುಂಬಾ ರೇಗಾಡಿ ನನಗೆ ಅಪಮಾನವಾಯಿತು ಎಂದು ಹೇಳಿ ಆ ಅಮ್ಮನ ಕೈಯಲ್ಲಿ ಒಂದು ತಿಂಗಳ ಕಾಲದವರೆಗೆ ಊಟಕ್ಕೆ ಬಡಿಸಿಕೊಳ್ಳಲಿಲ್ಲಾ. ಕೊನೆಗೆ ಇವೆಲ್ಲಾ ಅವರ ನೆಂಟರಿಷ್ಟರು ಕೇಳಿ ಅವರು ಬಂದು ಹೇಳಿದರು. ನಂತರ ಆ ಅಮ್ಮ ನಾನು ಮಾಡಿದ್ದು ತಪ್ಪಾಯಿತು ಎಂದರೂ ಕೂಡ ಸ್ವಲ್ಪ ಅಸಮಾಧಾನದಿಂದಲೇ ಇದ್ದು ಊಟ ಮಾಡುತ್ತಿದ್ದರು. ಇಂಥಾ ಪುಣ್ಯ ಜೀವಿಗಳು, ಇಂಥಾ ಮಾನವೀಯತೆ ಉಳ್ಳಂಥಾ ಡಾಕ್ಟರು ಅವರಾಗಿದ್ದರು. ಇನ್ನು ಕೆಲವು ಡಾಕ್ಟರುಗಳು ಇದ್ದಾರೆ, ಯಾರಾದರೂ ಪೇಷೆಂಟ್ ಆಪರೇಷನ್‌ಗೆ ಆಸ್ಪತ್ರೆಗೆ ಬಂದರೆ ಅವರಿಗೆ ಅರ್ಧ ಆಪರೇಷನ್ ಮಾಡುತ್ತಿರುವಾಗಲೇ ಅವರಿಗೆ ಆ ಬಗ್ಗೆ ಸರಿಯಾದ ದುಡ್ಡು ಬರದೇ ಹೋದರೆ ಅದು ಅಲ್ಲಿಗೇ ಇರುತ್ತದೆ? ಆ ರೋಗಿಯ ಹೆಂಡತಿ ಮಕ್ಕಳಬವಣೆ ಹಾಗೂ ಯಾತನೆ ಹೇಗೇ ಇರಲಿ, ಅವರು ಕಣ್ಣೀರು ಸುರಿಸುತ್ತಾ ಇದ್ದರೂ ಕೂಡ ದುಡ್ಡು ಕೊಟ್ಟರೆ ಆಪರೇಷನ್ ಮಾಡುವುದು, ಇಂಥಾ ಡಾಕ್ಟರ್ಸ್ ಕೂಡ ಇದ್ದಾರೆ. ಆದುದರಿಂದ ನಾನು ಮಾನ್ಯ ಸಚಿವರಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ ಯಾರು ಉತ್ತಮರಾದ ಡಾಕ್ಟರ್ಸ್ ಇರುತ್ತಾರೋ ಯಾರು ತಮ್ಮ ಜೀವನವನ್ನೇ ಇದಕ್ಕೆ ಮುಡುಪಾಗಿಟ್ಟಿರುತ್ತಾರೋ, ಯಾರಲ್ಲಿ ಮಾನವೀಯತೆ ದೃಷ್ಟಿ ಇದೆಯೋ, ಯಾರು ಬಡವರಿಗೆ ಪ್ರಾಣ ಕೊಟ್ಟು ದೇಶಕ್ಕಾಗಿ ತ್ಯಾಗ ಮಾಡುತ್ತಾರೋ ಅಂಥಾ ಡಾಕ್ಟರ್ಸ್‌ಗಳ ಬಗ್ಗೆ ತಾವು ಅನುಕಂಪ ತೋರಿಸಿ ಒಳ್ಳೆಯದನ್ನು ಮಾಡಿಕೊಡಿ. ನಾನು ಮೊದಲೇ ಹೇಳಿದ ಹಾಗೆ ಯಾರು ವೆಂಕಟಾಚಾರ್ ಅಂತ ಡಾಕ್ಟರ್ ಇದ್ದಾರೋ ಅಂಥಾವರ ಬಗ್ಗೆ ಅನುಕಂಪ ತೋರಿಸಿ. ಯಾರಲ್ಲಿ ಇಂಥಾ ಗುಣಗಳು ಇಲ್ಲವೋ ಅಂಥಾವರ ಬಗ್ಗೆ ಅನುಕಂಪ ತೋರುವುದು ಬೇಡ. ತಮಗೆ ಹೇಳಬೇಕಾದರೆ ಕೆಲವು ಡಾಕ್ಟರ್ಸ್‌ಗಳು ಈ ವರ್ಗಾವಣೆಯಲ್ಲಿ ಎಂತೆಂಥಾ ಕೆಲಸ ಮಾಡುತ್ತಾರೆ ಅನ್ನುವುದು ತಮಗೆ ಗೊತ್ತಿದೆ. ಒಟ್ಟಿನಲ್ಲಿ ಹೇಳುವುದಾದರೆ ಉತ್ತಮವಾದಂಥಾ ಕೆಲಸ ಮಾಡತಕ್ಕಂಥಾ ಡಾಕ್ಟರ್ಸ್‌ಗೆ ತಕ್ಕ ಪ್ರೋತ್ಸಾಹ ಕೊಡಿ, ಯಾರು ಬಡವರ ರಕ್ತ ಹೀರುತ್ತಾರೋ ಅಂಥಾವರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡಿ; ಬೇಕಾದರೆ ಅಂಥಾವರನ್ನು ಡಿಸ್ಮಿಸ್ ಮಾಡಿ. ಬಡಜನಗಳಿಗೆ ಯಾರು ಒಳ್ಳೆಯ ಕೆಲಸ ಮಾಡಿಕೊಡುತ್ತಾರೋ ಅಂಥಾ ಡಾಕ್ಟರ್ಸ್‌ಗೆ ಅನುಕೂಲ ಹಾಗೂ ಅನುಕಂಪ ತೋರಿಸಿ ದರೆ ಅದಕ್ಕಿಂತಲೂ ಒಂದು ಹೆಚ್ಚಿನ ರಕ್ಷಾಕವಚ ಬೇರೊಂದಿಲ್ಲ. ಯಾರು ಗುಣವಂತರು ಇದ್ದಾರೋ ಯಾರಿಗೆ ಕೈಶುದ್ಧಿ ಇರುತ್ತದೋ ಅಂಥಾವರಿಗೆ ಅನುಕೂಲ ಮಾಡಿಕೊಡಿ. ಯಾರು ಬಡವರ ರಕ್ತ ಹೀರುತ್ತಾರೋ ಅಂಥಾವರಿಗೆ ಯಾವ ವಿಧವಾದಂಥಾ ಅನುಕಂಪವನ್ನೂ ತೋರಿಸಬಾರದು. ಬಡವರಿಗೆ ಅನುಕೂಲ ಮಾಡಿಕೊಡುವವರು ಏನು ಇದ್ದಾರೆ ಅಂಥಾವರ ಮೇಲೆ ನಿಮ್ಮ ಆದರ್ಶ ಛಾಯೇ ಬೀಳಬೇಕು ಎಂದು ಹೇಳುತ್ತೇನೆ. ಮಾನ್ಯ ಸಚಿವರು ಇಂಥಾ ಒಳ್ಳೆಯ ಕೆಲಸವನ್ನು ಮಾಡಿದರೆ ನಿಮ್ಮ ಇಲಾಖೆಯ ಮೇಲೂ ಇದರಿಂದ ಪರಿಣಾಮ ಬೀಳುವುದಲ್ಲದೆ ಇಂಥಾ ಒಳ್ಳೆಯ ಕೆಲಸಕ್ಕೆ ಆದ್ಯತೆ ಕೊಟ್ಟಂತಾಗುತ್ತದೆ. ತಮಗೆ ಹೇಳಬೇಕಾದರೆ ಮೆಡಿಕಲ್ ಎಜುಕೇಷನ್ ಡೈರಕ್ಟರ್ ಏನು ಇದ್ದಾರೆ ಅವರು ಬಹಳ ಗುಣವಂತರು, ಒಳ್ಳೆಯ ನೀತಿವಂತರು, ಸತ್‌ಸಂಪನ್ನರು ಹಾಗೂ ನಿಷ್ಠಾವಂತರೂ ಆಗಿದ್ದಾರೆ. ಅಂಥಾವರಿಗೆ ತಾವು ಹೆಚ್ಚು ಪ್ರೋತ್ಸಾಹ ಕೊಡುವುದರಿಂದ ಇಲಾಖೆಗೆ ಹೆಚ್ಚು ಒಳ್ಳೆಯದೂ ಆಗುತ್ತದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾವು ಓದಿ ನೋಡಿದ್ದೇವೆ. ಈ ಡಾಕ್ಟರ್ಸ್‌ಗಳ

ಪ್ರಮೋಷನ್ಸ್ ಬಗ್ಗೆ ಮತ್ತು ವರ್ಗಾವಣೆ ಸಂದರ್ಭದಲ್ಲಿ ಇದೇ ಶಾಸನಸಭೆಯಲ್ಲಿ ಅವರ ಮೇಲೆ ಹತ್ತಾರು ಛಾರ್ಜಸ್ ಮಾಡಿ ಆರೋಪಣೆ ಮಾಡಿ ಭಾಷಣ ಮಾಡಿದುದನ್ನು ಕೇಳಿದ್ದೇವೆ. ಆದರೆ ಕಳೆದ ೬-೭ ತಿಂಗಳುಗಳಿಂದ ಈ ತರಹವಾದ ಕಂಪ್ಲೈಂಟ್ಸ್‌ಗಳು ಯಾವುವೂ ಕೂಡ ನನ್ನ ಕಿವಿಗೆ ಬಿದ್ದಿಲ್ಲ.

ಇಲಾಖೆಯಲ್ಲಿ ಒಳ್ಳೆಯ ಅಡ್ಮಿನಿಸ್ಟ್ರೇಟಿವ್ ಆಫೀಸರ್ಸ್ ಇದ್ದಾರೆ, ಅವರು ನೀತಿವಂತರಾಗಿ, ಗುಣವಂತರಾಗಿದ್ದುಕೊಂಡು ಇಲಾಖೆಗೆ ಕೀರ್ತಿ ತರತಕ್ಕಂಥ ರೀತಿಯಲ್ಲಿ ಒಳ್ಳೆಯ ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆ. ಅಲ್ಲಿ ಬಹಳ ದುಡ್ಡು ಕಾಸು ಇಟ್ಟುಕೊಂಡಿರುವವರು ಮೇಲಿನವರ ಪ್ರಭಾವ ಇರುವವರು ಅಲ್ಲಿ ಯಾವರೀತಿಯಿಂದಲಾದರೂ ಹೋರಾಟ ಮಾಡಿ ಮೊಳೆ ಹೊಡೆದಹಾಗೆ ಅಲ್ಲಿ ಕುಳಿತುಬಿಡುತ್ತಾರೆ ತಮಗೆ ಬೇಕಾದಹಾಗೆ ದುಡ್ಡು ಕಾಸು ಮಾಡಿಕೊಳ್ಳುತ್ತಿರುತ್ತಾರೆ. ಯಾರು ಏನೂ ಮಾಡಿಕೊಳ್ಳದೇ ನೀತಿವಂತರಾಗಿರುತ್ತಾರೊ ಅವರಿಗೆ ಇವರಿಂದ ತೊಂದರೆಯಾಗುತ್ತಿದೆ. ಅಲ್ಲಿರತಕ್ಕಂಥ ಮೆಡಿಕಲ್ ಡೈರೆಕ್ಟರ್‌ರವರು ಬಹಳ ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆ ಅವರಿಗೂ ನನಗೂ ಯಾವ ಸಂಬಂಧವೂ ಇಲ್ಲ ಅವರು ನನಗೆ ಓಟು ಕೊಟ್ಟವರೂ ಅಲ್ಲ. ಅಂತಹ ಉತ್ತಮರಿಗೆ ಮಾನ್ಯ ಸಚಿವರು ಗೌರವನ್ನು ಕೊಡಬೇಕು. ಅವರು ಅಲ್ಲಿಗೆ ಅಡ್ಮಿನಿಸ್ಟ್ರೇಟಿವ್ ಆಫೀಸರ್ ಆಗಿ ಬಂದ ಮೇಲೆ ಯಾವ ಕಂಪ್ಲೈಂಟ್ ಕೂಡ ಬಂದಿಲ್ಲ, ಅವರು ಉತ್ತಮ ರೀತಿಯಲ್ಲಿ ಜನರ ಸೇವೆಯನ್ನು ಮಾಡುತ್ತಾ ಬಂದಿದ್ದಾರೆ, ಒಳ್ಳೆಯ ಅಧಿಕಾರಿಗಳು ಯಾರ್ಯಾರು ಇರುತ್ತಾರೆ ಅವರಿಗೆ ಯಾವ ಒಂದು ನ್ಯಾಯವಾದ ಸ್ಥಾನವನ್ನು ಕೊಡಬೇಕೋ ಅದನ್ನು ಅವರಿಗೆ ಕೊಟ್ಟು ಅವರು ಇನ್ನು ಮುಂದೆ ಕೂಡ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಉತ್ತೇಜನವನ್ನು ಕೊಡಬೇಕು. ಅವರೆಲ್ಲಾ ಒಳ್ಳೆಯ ಕೆಲಸಗಳನ್ನು ಮಾಡುವುದರಿಂದ ಈ ಇಲಾಖೆಗೆ ಒಳ್ಳೆಯ ಹೆಸರೂ ಕೂಡ ಬರುತ್ತದೆ ಮತ್ತು ಜನಗಳಿಗೂ ಕೂಡ ಇನ್ನು ಅವರಿಂದ ಒಳ್ಳೆಯದಾಗುತ್ತದೆ ಈ ಕೆಲಸವನ್ನು ತಾವು ಮಾಡಬೇಕು ಎಂದು ನಾನು ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ಕ್ಯಾಪಿಟೇಷನ್ ವಿಚಾರದಲ್ಲಿ ನಾನು ಒಬ್ಬರ ಹತ್ತಿರ ವಾದ ಮಾಡಿದೆ. ಡಾಕ್ಟರ್ ಆಗಿ ಒಂದು ಕಡೆಗೆ ಹೋದಮೇಲೆ, ಅಲ್ಲಿಗೆ ಹೋದಕೂಡಲೇ ಹೆಚ್ಚು ದುಡ್ಡು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಾರಲ್ಲ ಎಂದು ಹೇಳಿದೆ. ಒಂದುಸೀಟಿಗೆ ಒಂದುಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರಲ್ಲ ಅದಕ್ಕೆ ಏನು ಹೇಳುತ್ತೀರಿ ಎಂದು ಕೇಳಿದರು. ಒಂದು ಮನೆಯವರು ಅವನನ್ನು ಡಾಕ್ಟರ್ ಓದಿಸಲು ಇಷ್ಟು ಖರ್ಚು ಮಾಡಿದ್ದಾರೆ. ಆದ್ದರಿಂದ ದುಡ್ಡು ಹೊಡೆಯುತ್ತಾರೆ ಎನ್ನತಕ್ಕಂಥ ವಿಚಾರ ಬಂತು. ೧ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಇಡೀ ದೇಶಕ್ಕೆ ಅವನನ್ನು ಡಾಕ್ಟರ್ ಆಗಿ ಪ್ರೊಡ್ಯೂಸ್ ಮಾಡಿದಮೇಲೆ ಅವನು ಮತ್ತೆ ಇಡೀ ದೇಶದ ದುಡ್ಡನ್ನು ಹೊಡೆಯುವುದಕ್ಕೆ ಕಾರಣವೆಂದರೆ ಈ ಕ್ಯಾಪಿಟೇಷನ್ ಫೀ. ಕೊನೆಯ ಪಕ್ಷ ಈ ಕ್ಯಾಪಿಟೇಷನ್ ಫೀಯನ್ನು ತಾವು ರದ್ದು ಮಾಡಿ. ಕ್ಯಾಪಿಟೇಷನ್ ಫೀಯನ್ನು ತೆಗೆದುಕೊಳ್ಳದಿದ್ದರೆ ಅಂಬೇಡ್ಕರ್ ಮೆಡಿಕಲ್ ಕಾಲೇಜಿನಂತಹ ಕಾಲೇಜುಗಳು ನಡೆಯುವುದಾದರೂ ಹೇಗೆ ಎಂದು ಕೆಲವರು ಹೇಳಬಹುದು. ಅದಕ್ಕೆ ನಾನು ಹೇಳುವುದೇನೆಂದರೆ ಅಂತಹ ಕಾಲೇಜುಗಳಿಗೆ ಹೆಚ್ಚು ಸಬ್ಸಿಡಿಯನ್ನು ಕೊಡಿ. ತಲೆತಲಾಂತರದಿಂದ ಬೇರೆಯವರ ಸೇವೆಯನ್ನು ಮಾಡಿಕೊಂಡು ಬಂದಂಥ ಜನ ಇವತ್ತು ಒಂದು ಗೂಡಿ ಬಂದು ನಮ್ಮದೇ ಆದ ಸಂಸ್ಥೆಯನ್ನು ನಾವು ಕಟ್ಟಿ ಬೆಳೆಸುತ್ತೇವೆ. ಎಂದು ಹೇಳಿದಾಗ ಅವರಿಗೆ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ನೆರವನ್ನು ಕೊಡಬೇಕಾಗುತ್ತದೆ, ಏಕೆಂದರೆ ಅವರು ಮೊದಲಿನಿಂದಲೂ ಎಲ್ಲರಿಗಿಂತ ಈ ಸಮಾಜದಲ್ಲಿ ಕಡೆಗಣಿಸಲ್ಪಟ್ಟಂಥ ಜನ. ದಾವಣಗೆರೆ ಮೆಡಿಕಲ್ ಕಾಲೇಜಿಗೆ ಕೊಟ್ಟಂಥ ರಿಯಾಯಿತಿಯನ್ನೇ ಈ ಅಂಬೇಡ್ಕರ್ ಮೆಡಿಕಲ್ ಕಾಲೇಜಿಗೆ ಕೊಡಬೇಕು ಅಂತ ಅಲ್ಲ ಅದಕ್ಕಿಂತ ಹೆಚ್ಚಿನ ರಿಯಾಯಿತಿಯನ್ನು ಅವರಿಗೆ ಕೊಡಬೇಕು. ಹಣದ ಪ್ರಭಾವ ಇರತಕ್ಕಂಥವರನ್ನು ಮತ್ತು ಹಿಂದುಳಿದಿರತಕ್ಕಂಥವರನ್ನು ಒಂದೇ ತಕ್ಕಡಿಗೆ ಹಾಕಿ ತೂಗಿದರೆ ಯಾವ ನ್ಯಾಯವನ್ನೂ ದೊರಕಿಸಿಕೊಟ್ಟಹಾಗೆ ಆಗುವುದಿಲ್ಲ. ಇಂತಹ ಕಾಲೇಜುಗಳಿಗೆ ಸರ್ಕಾರದವರು ಹೆಚ್ಚು ಹಣವನ್ನು ಕೊಡಬೇಕು ಮತ್ತು ಅಂತಹ ಕಾಲೇಜುಗಳು ಗೌರ್ನಮೆಂಟ್‌ನಿಂದಲೇ ನಡೆಯಲಿ. ಮತ್ತೆ ಬೇರೆ ಬೇರೆ ಮೆಡಿಕಲ್ ಕಾಲೇಜುಗಳಲ್ಲಿ ಕೂಡ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳತಕ್ಕಂಥಾದ್ದನ್ನು ಅಬಾಲಿಷ್ ಮಾಡಿ. ಕ್ಯಾಪಿಟೇಷನ್ ಫೀಯನ್ನು ತೆಗೆದುಕೊಳ್ಳಬೇಡಿ ಎಂದು ಕಟ್ಟುನಿಟ್ಟಾದ ಆಜ್ಞೆಯನ್ನು ಮಾಡಿ, ಅದಕ್ಕೆ ಒಂದು ವ್ಯವಸ್ಥೆಯನ್ನು ಮಾಡದೇ ಹೋದರೆ ಪ್ರವೇಟ್ ಮೆಡಿಕಲ್ ಕಾಲೇಜುಗಳವರು ದುಡ್ಡು ಹೊಡೆಯುವುದನ್ನು ತಪ್ಪಿಸುವುದು ಕಷ್ಟವಾಗುತ್ತದೆ. ನಮ್ಮ ಕೆಂಪೇಗೌಡ ಮೆಡಿಕಲ್ ಕಾಲೇಜಿಗೆ ಸರ್ಕಾರದವರು ಸಬ್ಸಿಡಿ ಕೊಟ್ಟರೆ ಕೊಡಲಿ, ಅವರು ಕೊಡದಿದ್ದರೂ ಕೂಡ ನಾವಂತೂ ಅದನ್ನು ಮ್ಯಾನೇಜ್ ಮಾಡುತ್ತೇವೆ. ಇನ್ನು ಹಾಸನದಲ್ಲಿ ಕೃಷ್ಣ ಔಟ್ ಪೇಷೆಂಟ್

ಹಾಸ್ಪಿಟಲ್ ಎಂದು ಇದೆ. ಅಲ್ಲಿ ೩ ಸ್ಲಂಗಳು ಇದೆ ಅದರ ಪಕ್ಕದಲ್ಲೇ ಇರತಕ್ಕಂಥ ಆಸ್ಪತ್ರೆ ಇದು. ಈ ಆಸ್ಪತ್ರೆ ಅಲ್ಲಿ ಆಗದೇ ಇದ್ದರೆ ಆ ಭಾಗದ ಜನರಲ್ ಡಿಸ್ಟ್ರಿಕ್ಟ್ ಆಸ್ಪತ್ರೆಗೆ ಬರಬೇಕಾಗಿತ್ತು. ಈ ಡಿಸ್ಟ್ರಿಕ್ಟ್ ಆಸ್ಪತ್ರೆಗೆ ಅಲ್ಲಿಂದ ೩ ಮೈಲಿ ದೂರ ಆಗುತ್ತದೆ. ಇದನ್ನು ನೋಡಿದಂಥ ಒಬ್ಬ ದಾನಿಗಳು ಬಡಜನರೆಲ್ಲಾ ಅಲ್ಲಿಗೆ ಕಷ್ಟಪಟ್ಟುಕೊಂಡು ಹೋಗುತ್ತಾರೆ. ನನ್ನ ಹೆಸರಿನಲ್ಲಿ ಇಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಿಕೊಡುತ್ತೇನೆಂದು ಹೇಳಿ ಈ ಒಂದು ಆಸ್ಪತ್ರೆಯನ್ನು ಕಟ್ಟಿಸಿ ಕೊಟ್ಟರು. ಅಲ್ಲಿ ಇರತಕ್ಕಂಥ ಅವ್ಯವಸ್ಥೆಯ ಬಗ್ಗೆ ನಾವು ಇಲ್ಲಿ ಈ ಹಿಂದೆಯೇ ಮಾನ್ಯ ಸಚಿವರ ಗಮನವನ್ನು ಸೆಳೆದಿದ್ದೇನೆ. ಅಲ್ಲಿ ಡಾಕ್ಟರುಗಳು. ನರ್ಸ್‌ಗಳು ಕುಳಿತುಕೊಳ್ಳುವುದಕ್ಕೆ ಒಂದು ಸರಿಯಾದ ಕುರ್ಚಿ ಇಲ್ಲ. ಮುರುಕಲು ಕುರ್ಚಿ ಇದೆ. ಒಂದು ಹಳೆಯ ಟೇಬಲ್ ಇದೆ. ಇಷ್ಟನ್ನು ಬಿಟ್ಟರೆ ಅಲ್ಲಿ ಇನ್ನೇನೂ ಇಲ್ಲ. ಸರಿಯಾದ ಔಷಧಗಳನ್ನು ಅಲ್ಲಿಗೆ ಒದಗಿಸಿಲ್ಲ. ಮೆಡಿಕಲ್ ಡಿಪಾರ್ಟ್‌ಮೆಂಟ್‌ನವರು ಟಿಂಚರನ್ನು ಕೊಡುತ್ತಾರೆ. ಮುನಿಸಿಪಾಲಿಟಿಯವರು ಬ್ಯಾಂಡೇಜನ್ನು ಕೊಡುತ್ತಾರೆ. ಇಷ್ಟರಲ್ಲೇ ನಡೆಯುತ್ತಿದೆ. ಅಲ್ಲಿ ಮಿಡ್ ವೈಫ್‌ಗಳು ಇಲ್ಲ. ಅಲ್ಲಿರತಕ್ಕಂಥವರೆಲ್ಲಾ ಬಡಜನರು. ಅಂತಹ ಜನರ ಮಧ್ಯೆ ತೆರೆದಿರತಕ್ಕಂಥ ಆ ಆಸ್ಪತ್ರೆಗೆ ಅವಶ್ಯಕವಾಗಿ ಬೇಕಾಗಿಂಥ ಔಷಧಗಳನ್ನು ಕೊಡಲಿಲ್ಲ ಎಂದರೆ ಯಾವ ದೇವರು ತಾನೇ ಇದನ್ನು ಮೆಚ್ಚುತ್ತಾನೆ ? ಅಲ್ಲಿ ೨೦೦ ಪೇಷಂಟ್‌ಗಳು ಪ್ರತಿದಿವಸ ಔಷಧಕ್ಕಾಗಿ ಬರುತ್ತಾರೆ. ಅವರಿಗೆ ಕೊನೆಯಪಕ್ಷದ ೨೦೦ ರೂಪಾಯಿಗಳ ಔಷಧಿಯನ್ನಾದರೂ ಕೊಡಬಾರದೇ ? ಸರ್ಕಾರದವರೇ ಆ ಆಸ್ಪತ್ರೆಯನ್ನು ವಹಿಸಿಕೊಂಡು ನಡೆಸುವುದಾದರೆ ಆ ಬಡಜನರಿಗೆ ತುಂಬಾ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಸರ್ಕಾರದವರೇ ಆ ಆಸ್ಪತ್ರೆಯನ್ನು ವಹಿಸಿಕೊಳ್ಳಬೇಕೆಂದು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮಾನ್ಯ ಆರೋಗ್ಯ ಸಚಿವರು ಅಧಿಕಾರಕ್ಕೆ ಬಂದಮೇಲೆ ಈ ಪ್ರೈಮರಿ ಹೆಲ್ತ್ ಸೆಂಟರ್ಸ್‌ಗೆ ಔಷಧಗಳಿಗಾಗಿ ಕೊಡುತ್ತಿದ್ದಂಥ ಹಣವನ್ನು ೫೦೦೦ ರೂಪಾಯಿಗಳಿಂದ ೮೦೦೦ ರೂಪಾಯಿಗಳಿಗೆ ಏರಿಸಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಹಾಗೆಯೇ ತಾಲ್ಲೂಕು ಆಸ್ಪತ್ರೆಗಳು ಏನಿವೆ ಅವಕ್ಕೆ ಕೂಡ ಹೆಚ್ಚಿನ ರೀತಿಯಲ್ಲಿ ಔಷಧಗಳನ್ನು ಒದಗಿಸಿಕೊಡಬೇಕು ಮತ್ತು ಡಿಸ್ಟ್ರಿಕ್ಟ್ ಆಸ್ಪತ್ರೆಗಳಿಗೂ ಕೂಡ ಕೊಡತಕ್ಕಂಥ ಔಷಧಗಳನ್ನು ಹೆಚ್ಚು ಮಾಡಬೇಕು. ಹಿಂದೆ ಇವಕ್ಕೆ ೨೫ ಸಾವಿರ ರೂಪಾಯಿಗಳು ಔಷಧಗಳನ್ನು ಕೊಡುತ್ತಿದ್ದರು. ಈಗ ಖಾಯಿಲೆಯವರು ಸಾವಿರಾರು ಜನರು ಬರುತ್ತಾರೆ. ಕೊನೆಯಪಕ್ಷ ಅವರಿಗೆ ೪೦-೫೦ ಸಾವಿರ ರೂಪಾಯಿಗಳ ಔಷಧಗಳನ್ನು ಕೊಡಬೇಕು ಮತ್ತು ಈ ದಿಶೆಯಲ್ಲಿ ಈ ಆಸ್ಪತ್ರೆಗಳೆಲ್ಲಾ ಒಳ್ಳೆಯ ಕೆಲಸ ಮಾಡಬೇಕು ಎಂದು [ಹೇಳಬಯಸುತ್ತೇನೆ ಈಗ ಪ್ರತಿಯೊಂದು ತಾಲ್ಲೂಕಿನಲ್ಲಿ ಕೂಡ ಇರತಕ್ಕಂಥ ಆಸ್ಪತ್ರೆಗಳಿಗೆ ೫೦ ಬೆಡ್ಡೆಡ್ ಹಾಸ್ಪಿಟಲ್. ದರ್ಜೆಗೆ ಏರಿಸುವ ಅವಶ್ಯಕತೆ ಇದೆ. ಇದನ್ನು ಮಾನ್ಯ ಸಚಿವರು ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಹೆಚ್ಚಿನ ರೀತಿಯಲ್ಲಿ ಅವಕ್ಕೆಲ್ಲಾ ಔಷಧಗಳನ್ನು ಕೊಟ್ಟು ಅಲ್ಲಿಯ ಜನಗಳಿಗೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಒಂದು ಮಾತನ್ನು ನಾನು ಇಲ್ಲಿ ಹೇಳಿಬಿಡುತ್ತೇನೆ. ಈ ವಿಚಾರದಲ್ಲಿ ಸದರನ್ ಸ್ಟೇಟ್‌ಗಳ ೧೯೭೧ ಮತ್ತು ೧೯೮೧ರ ಸೆನ್ಸಸ್ ಅನ್ನು ತೆಗೆದು ನೋಡಿದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಪಾಪ್ಯುಲೇಷನ್ ಗ್ರೋತ್ ೨ ಪರ್ಸೆಂಟ್‌ನಷ್ಟು ಜಾಸ್ತಿಯಾಗಿದೆ. ಅಂದರೆ ಕರ್ನಾಟಕ ರಾಜ್ಯದಲ್ಲಿ ಈ ಫ್ಯಾಮಿಲಿ ಪ್ಲಾನಿಂಗ್ ಯಶಸ್ವಿಯಾಗುತ್ತಾ ಇಲ್ಲ. ಹಿಂದೆ ಒಂದು ಕಾಲದಲ್ಲಿ ದಕ್ಷಿಣದ ರಾಜ್ಯಗಳೆಲ್ಲಾ ನಮ್ಮ ಕರ್ನಾಟಕ ರಾಜ್ಯ ಇದರಲ್ಲಿ ಒಳ್ಳೆಯ ಹೆಸರನ್ನು ಮತ್ತು ಪ್ರಶಸ್ತಿಯನ್ನು ಪಡೆದಂಥ ರಾಜ್ಯ ಇವತ್ತು ಕೊನೆಗೆ ಹೋಗಿದೆ. ಈ ಫ್ಯಾಮಿಲಿ ಪ್ಲಾನಿಂಗ್ ಯೋಜನೆಯಲ್ಲಿ ಹೆಣ್ಣುಮಕ್ಕಳಿಗೆ ಮಾಡುವಂಥ ಆಪರೇಷನ್ಸ್ ಹೆಚ್ಚು ಸಕ್ಸಸ್ ಆಗುತ್ತಾ ಇಲ್ಲ. ಈ ಆಪರೇಷನ್‌ನಲ್ಲಿ ಹೊಸ ವಿಧಾನ ಬಂದಿರುವ ಬಗ್ಗೆ ಮಾನ್ಯ ಸಚಿವರು ಆಗಲೇ ಹೇಳಿದರು. ಆ ಹೊಸ ವಿಧಾನವನ್ನು ಅನುಸರಣೆ ಮಾಡುವುದರ ಜೊತೆಗೆ, ಅಮೆರಿಕಾದಲ್ಲಿ ತೋಳಿಗೆ ಆಪರೇಷನ್ ಮಾಡಿ ಮಾತ್ರೆಗಳನ್ನು ಕೊಡುತ್ತಾರಂತೆ ಅದನ್ನು ತೆಗೆದುಕೊಂಡರೆ ೫ ವರ್ಷಗಳ ಕಾಲ ಮಕ್ಕಳೇ ಆಗುವುದಿಲ್ಲ ಎಂದು ನಾನು ಕೇಳಿದ್ದೇನೆ ಹೀಗೆ ಅನೇಕ ವಿಧದಲ್ಲಿ ಸಂಶೋಧನೆಗಳು ನಡೆದು ಅತ್ಯಾಧುನಿಕವಾಗಿ ಪ್ರಾಣಾಪಾಯವಿಲ್ಲದೇ ಆಪರೇಷನ್ ಮಾಡತಕ್ಕಂಥ ವಿಧಾನವನ್ನು ಜ್ಞಾನಿಗಳು ಕಂಡುಹಿಡಿದಿದ್ದಾರೆ ಅದನ್ನೆಲ್ಲಾ ತಿಳಿದುಕೊಂಡು ಅದನ್ನು ಪ್ರಚಾರಕ್ಕೆ ತರಬೇಕು ಎಂದು ಹೇಳುತ್ತೇನೆ. ಈಗ ಆಪರೇಷನ್ಸ್‌ನಲ್ಲಿ ಹಳೆಯ ವಿಧಾನಗಳನ್ನೇ ಅನುಸರಿಸುತ್ತಿರುವುದರಿಂದ ಅದು ಅಷ್ಟೊಂದು ಪರಿಣಾಮಕಾರಿಯಾಗಿಲ್ಲ. ಒಂದು ಉದಾಹರಣೆಯನ್ನು ಹೇಳಬೇಕೆಂದರೆ

ನಮ್ಮ ಸಂಬಂಧೀಕರಲ್ಲಿ ಒಬ್ಬರಿಗೆ ೪ ಸಾರಿ ಆಪರೇಷನ್ ಆಯಿತು. ಈಗ ಐದನೇ ಸಾರಿ ಆಪರೇಷನ್ ಆಗಬೇಕಾಗಿದೆ. ಅವರು ತಕ್ಕಮಟ್ಟಿಗೆ ಸ್ಥಿತಿವಂತರಾದ್ದರಿಂದ ೧೦-೧೨ ಸಾವಿರ ಖರ್ಚಾಯಿತು. ಬಡವರಿಗೆ ಇದು ಗೊತ್ತಾಗಿಬಿಟ್ಟರೆ ಆಪರೇಷನ್ ಮಾಡಿಸಿಕೊಳ್ಳುವುದಕ್ಕೇ ಹೆದರುತ್ತಾರೆ. ಕೆಲವರು ಬಹಳ ಚೆನ್ನಾಗಿ ಆಪರೇಷನ್ಸ್ ಮಾಡುತ್ತಾರೆ. ಆದರೆ ಅವರಿಗೆ ಸಾಕಷ್ಟು ದುಡ್ಡು ಕೊಡಬೇಕು. ಸಾಕಷ್ಟು ದುಡ್ಡು ಕೊಡದೇ ಹೋದರೆ ಅನಾಹುತಗಳು ಆಗುತ್ತವೆ. ಅಂತಹ ಡಾಕ್ಟರುಗಳೂ ಇದ್ದಾರೆ. ಡಾಕ್ಟರುಗಳು ಸರಿಯಾದರೀತಿಯಲ್ಲಿ ಆಪರೇಷನ್ಸ್ ಮಾಡುವಬಗ್ಗೆ ಸೂಚನೆಯನ್ನು ಕೊಡಬೇಕು. ಈ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ನಮ್ಮ ರಾಜ್ಯದಲ್ಲ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಚಾರ ಆಗಬೇಕು. ಇಲ್ಲದಿದ್ದರೆ ಇನ್ನು ಹತ್ತಾರು ವರ್ಷಗಳಲ್ಲಿ ಜನಸಂಖ್ಯೆ ಎಕ್ಸ್‌ಪ್ಲೋಡ್ ಆಗುತ್ತದೆ. ಜನಸಂಖ್ಯೆ ಹೆಚ್ಚಾದಂತೆಲ್ಲಾ ಇನ್ನು ಹತ್ತು ವರ್ಷಗಳಲ್ಲಿ ಜನರು ಬೀದಿಬೀದಿಯಲ್ಲಿ ಅಲೆಯಬೇಕಾಗುತ್ತದೆ. ಆದ್ದರಿಂದ ಈಗಿನಿಂದಲೇ ಈ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಹೆಚ್ಚು ಪ್ರಚಾರ ಕಾರ್ಯಕ್ರಮವನ್ನು ತೆಗೆದುಕೊಂಡು ಮಾಡಬೇಕು. ಮಾನ್ಯ ಸಚಿವರಾದ ಅಬ್ದುಲ್‌ಸಮದ್‌ರವರು ಇದರಲ್ಲಿ ಕೆಲವೊಂದು ಮೆತೆಡ್‌ಗಳನ್ನು ಅನುಸರಣೆ ಮಾಡುವುದರಿಂದ ಅನಾನುಕೂಲಗಳಾಗುತ್ತವೆ ಎಂದು ಹೇಳಿದರು. ಈಗಾಗಲೇ ವಿಜ್ಞಾನಿಗಳು ಅದರ ನ್ಯೂನತೆಗಳನ್ನೆಲ್ಲಾ ತಿಳಿದುಕೊಂಡು ಆಧುನಿಕವಾದ ಮೆತೆಡ್‌ಗಳನ್ನು ಕಂಡುಹಿಡಿದಿದ್ದಾರೆ. ಅದನ್ನು ಪ್ರಚಾರಕ್ಕೆ ತಂದು ಜನಗಳಿಗೆ ತಿಳುವಳಿಕೆ ಹೇಳಿ ಮಾಡುವುದರ ಜೊತೆಗೆ ಕ್ಯೂರ್ ಆಗದೇ ಇರತಕ್ಕಂಥ ಡಿಸೀಸಸ್ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕು. ಲಿಪ್ರಸಿ ಪೇಷಯೆಂಟ್ಸ್ ಏನು ಇದ್ದಾರೆ ಅವರಿಗೆ ಬಲವಂತವಾಗಿಯಾದರೂ ಚಿಕಿತ್ಸೆಗೆ ಒಳಪಡಿಸಿ ಗುಣಮುಖರಾಗುವಂತೆ ಮಾಡಬೇಕು. ಏಕೆಂದರೆ ಅವರಲ್ಲಿರತಕ್ಕಂಥ ರೋಗ ಅವರ ಮಕ್ಕಳಲ್ಲಿ ಹುಟ್ಟಬಾರದು. ಮಾನ್ಯ ಸಚಿವರು ಬಹಳ ಹುಮ್ಮಸ್ಸನ್ನು ಇಟ್ಟುಕೊಂಡು ಈ ಇಲಾಖೆಯಲ್ಲಿ ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಇನ್ನು ಮುಂದೆ ಕೂಡ ಇದೇ ಹುಮ್ಮಸ್ಸನ್ನು ಇಟ್ಟುಕೊಂಡು ಇಡೀ ರಾಜ್ಯಕ್ಕೇ ಮಾದರಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಂಡು ಎಲ್ಲರ ವಿಶ್ವಾಸಕ್ಕೆ ಪಾತ್ರರಾಗಲಿ ಎಂದು ಹಾರೈಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಂತಹ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI QUAMARUL ISLAM (Gulbarga).—As the Hon'ble Deputy Speaker has requested me to take minimum time, I don't want to take much time and also become so many of my friends have already spoken on public Health. But I want to take up the issue of medical education.

(KUMARI S. PRAMILA in the Chair)

I will take up first the Medical Education because Public Health Department and Health and Family Welfare Services are all dependent on doctors. If you want to treat the patients and if you want to maintain the Public Health Department we require a number of doctors,—may be post-graduates, dental doctors and doctors in other system of medicine. Now what we are seeing here from this report is, the population and doctor proportion is very high. This is the main reason why this department is unable to control the diseases. The diseases mentioned under many sub-heads of this report, have been controlled. They have been able to control small-pox through the National Small-Pox Eradication Programme. But so many other diseases they are not able to control. The two things which are very important here are, firstly the hospitals are not maintained properly, the instruments that are used for surgical purpose, are not proper and the treatment and behaviour of the

doctors with the patients are not proper. In a number of hospitals, Visitors' Board is not there. In every family, we have seen, for treatment they have to go to hospitals. It is an unfortunate thing, we have come across in many hospitals that even the milk and bread which are to be supplied to the patients, are controlled by the Secretaries of the hospitals who are very much interested in the supply of quantity, but the quality supplied is not good. Also, if you go to any hospital in any emergency case it is very difficult to get blood for the patients and many times it is very difficult to get so many other medicines, because we have seen that medicine if which are supplied by the Government to the hospitals tc be given to patients are sold out openly in so many medical shops. The Ambulance which is there in the hospitals for emergency cases, it is an unfortunate thing, when the Hon'ble Minister Visited Gulbarga, that ambulance was used by the officials for the purpose of going to I. B. where the Hon'ble Minister was staying. These are the facts, These ambulances are supposed to be used for patients, but many times it is used by the staff members of the hospital and some other people. The main reason is, this department is not having any check or control over these things. The department has utterly failed to give the required medicine and also this department is not having check over these hospitals and they are not caring for the maintance of the hospitals.

Now I will come to the medical education. In this report, when I was going through medical education, on which I wanted to speak, I find the information is incomplete; you may all remember that on the first day of the last Session when there was demand from the Opposition about the agitation of the medical students and farmers, and there was also an Adjournment Motion, all the parties including ruling party, said that they were all not opposed to starting of new medical colleges. The members of this House were witness to the assurance given by the Chief Minister When I raised a question as to why not a college be given to the minorites, the Chief Minister said not only one college but there would be two colleges. After that assurance, when there are a number of colleges in the list (both Government and private colleges), I am not able to see any one college granted for the minorities. I know there are a number of applications from different societies of minorities to start medical college. But here in the list two colleges have been added—one is Dr. Ambedkar Medical Colleges and the other is Kempe Gowda Medical College. I must appreciate that these two

communities were given and previously Chritians were given the St. John's Medical College and for others, there are Kasturba Medical College, J.J.M. Medical College, M.R. Medical College, J.N. Medical Coll ge and M.S. Ramaiah Medical College. I am sorry, I want to put a question through you Madam why this Hon'ble Minister has not given a medical college for minorities till today when an assurance was given in this House? Why is he delaying this matter? What is the reason for the dealy in not permitting or not issuing orders for these colleges which are pending the Hon'ble Minister's disposals? An assurance has already been given in this House and no opposition party objected for the starting of new medical colleges. But the only point is it should be screened whether the Society is a proper one and whether it will be in a position to run this cellege. In this House I assured that this community is capable of fulfiling all these rules and regulations or whatever conditions that may be laid. But what is the reason for the delay in issuing the orders? I want to know from the Hon'ble Minister in his reply, specifically about the reason for not issuing the order. There was clearance from the Chief Minister and an assurance was given in this House. You can just go through the proceedings of the last Session, where the Hon'ble Chief Minister has not only said that, there will be not one college, but there will be to colleges because our community population is more.

(MR. DEPUTY SPEAKER IN THE CHAIR)

Why are we interested in this college? It is because there is a discrimination. There are Four Government Medical Colleges and the total number of admissions was only 450. Last year it was 860 and now it has become 700. What is the percentage of intake of Muslim Students in them? I think it is less than 1% and if you take the previous years it even comes to 0.5%. There are many colleges where you can see not even a single muslim student. The population of muslims in Karnataka as per the last census is 11.9%. As per the latest census I hope iu will come to more than 16% and out of this population what is the percentage of intake of muslims in there colleges?

SRI C. A. CHANDRE GOWDA.—Your production is more.........

SRI QAMARUL ISLAM.—That is why we want more persons to be admitted. But actually if you go through the census of muslims, it is a fact that the fertility of women in Gulbarga, which is my constituency, is 47% as per the provisional report. It is not the fault of

the people there. It is a God gift and it is maximum there. I don't want to criticise this matter between God and women, whom I respect because women are very respected. There is a saying that *Make Pier ke niche jannath hai*". So I respect woman. I am not coming in the way; it is only our fault. The fertility in women is more, so the production is more.

Now in this list there are four post-graduate degree colleges. Sir, you are also coming from Hyderabad-Karnataka area. Bidar district stands 19th in education. There is also a post graduate centre given to Gulbarga. I want to know from the Hon'ble Minister from the last three years how many muslims have been admitted there . There are four Government and four private Medical Colleges in which post-graduate courses are also going on. I want to know from the Hon'ble Minister how many muslims-minorities, Scheduled Caste and Schoduled Tribes and Backward Class people have been given seats there. I think there is one muslim and one SC. I think Backward Class has not been given. I am sure out of 28 seats, 25 seats have been give to one particular community in Gulbarga When post graduation was started by S.K. Society we were proud that Gulbarga is also having post-graduation centre. But how much was the intake

If we take the ratio of professors, Assistant Professors, Lecturers and Asst. tutors, I think it is 0.1%

4-00 P.M.

In many departments of the Postgraduation education the percentage of our community is nil. Hardly one lecturer is there who is a retired professor of Osmania University. That is all the representation given to the minorities in medical education in Karnataka. By this, we can easily imagine and come to the conclusion that continuous discrimination is being made to these weaker sections of the society in the field of medical education and they have not been given any opportunity to take up medical education.

SRI C.A. CHANDRE GOWDA.—Could you tell us the strengh of the muslims in K.S.R.T.C. ?

SRI QAMARUL ISLAM.—Sir, of course, when Sri Mahammad Ali was the Transport Minister the strength was more. But I want to you to inform that out of 300 persons who have been removed from the service by the K.S.R.T.C. nearly 250 of them were muslims. Whom ever Sri Mahammad Ali had appointed, they have all gone after he was defeated. This is the position of those who depend on individuals. All these postsof conductors and drivers are temporary and they can be removed atany time and I don't want my

community people to become onlyconductors and drivers. The hon. member Sri Chandre Gowda pointed out certain appoi tments which were temporary. All those temporary people have been removed and now the representation of my community in the K.S.R.T.C. is nil. If you take over all percentage, the total strength of muslims will not be more than 3 or 4. I am ready to prove this. If it is more than 5 percent or 4 percent or even 3 percent I will retire from this Assembly. Sri Mahammad Ali appointed only some conductors and drivers on a temporary basis and that too only in Gulbarga division. He has not done anything to muslim community though he was a Cabinet Minister. Now at least we have been bringing the facts to the notice of the House and the Government. Hon'ble Minister is sitting here.

An assurance was given by the Hon'ble Chief Minister that a college would be given, to be run by our community and it is inwriting but it is very susprising to note that so far no order is issued in this behalf. Applications for admission to medical education have been invited by various medical colleges and the last date is 15th July. A notification has appeared in the Press also. Before the last date of admission we had hoped that a college would be given to our community as a whole and we were eagerly waiting for that. I do not know why there is so much delay.

SRI MALLUR ANANDA RAO.—Sir, I may be permitted to say a few words. Sir, the allotment of seats in medical colleges is governed by reservation rules. Reservation and all other things are there. It is rather based on Havanur Commission's report. But whoever runs a medical college, whether by Lingayats Vokkaligas, Scheduled Castes or Muslims, the students belonging to all communities will be admitted irrespective of their caste and creed as per the reservation rules. Muslims, as a minority, will also get admission into those collages. In that case, how muslims are denied of the seats?

SRI QAMARUL ISLAM.—Sri, My friend Sri, Mallur Anand Rao says that all the medical colleges are governed by the reservation rules. I apprecitea his saying that. Now I want to put a question. Last year, when applications were called for by the Postgraduate centre of H.K.E. Society, out of 28 applicants 25 were lingayats. Year before last, out of 25, 22 were lingayats and before that also all belonged to lingayat community only. I want to know whether they have follwed the reservation rules? If they have not followed the rules, how they are in existence? In Government medical colleges students will be admitted according to the reservation rules. I have nothing to say about Government run medical colleges. No discrimination is

being made in Government colleges. In Government medical colleges students will be admitted according to merit. Here what I want to say is all medical colleges be it run by privite or Government, should be governed by same rules. Sir, this is a period of competition. We also want to compete with other communities. We do not want that somebody should get the degree and our community people should not get that. When private medical colleges are giving seats to their own community students I request the Government that if a medical college is given to our community, 50 per cent of the seats could be reserved only for muslims in order to alleviate inadequate representation given to this minority community in the field of medical education. Even if a college is given it will take 20 to 25 years for our community students to compete with others. By the time our boys come to the stage of Postgraduation, others would have completed even Doctorate and other research courses.

Sir, before I conclude I would like to say some thing about Unani medical colleges, Sir, the Government has constituted a State Level Advisory Committee for Unani medicines. The Advisory Committee had also visited Gulbaraga and I also spoke with the Chairman and members of the Committee when it had come to Gulbarga. Sir, the Deputy Commissioner of Gulbrga has allotted five acres of land for starting a new unani college. That land is situated at Gulbarga-Aland road where leprosy center is also there. This land is far away from the city. If that college and hospital are started these poor people may not avail this facility because they cannot spend Rs. 3 or 4 as conveyance charges for going to this hospital. Therefore, I request the Hon'ble Minister to select some other place situated in the heart of the city so that poor people could avail of the facility. Sir, there is a land in the heart of the city and it belongs to a poor person and he is ready to sell that land. If the Government negotiates with that person it will be very helpful. Otherwise constructing again a college and hospital, that too at a far off place, will be inconvenient to the public.

So, our request is to start a college. Majority of boys are here and they can get their admissions very easily. So, let the college commence there only. The land which has already been proposed is a fit and convenient place in all respects. Now, the Government has to pay and let that land be purchased and let the College and Hospital come into existence in that place, which is in the heart of the City. Thank you.

† Sri M. Abdul Lathif.— Sir, I rise to support the demand brought before the House by the Hon. Minister for Health and Family Welfare Services. I would like to speak first on the alarming expansion of human numbers. Our population is increasing by leaps and bounds and we have reached a stage where our future of the human race does not appear to be safe. It is assessed that some 12,000 years ago, the entire population of the world was as much we have in a City like Calcutta; So, it was just about 10 millions. I would like to narrate a parable by which we can understand where we stand. There is one lily in one pond with only one leaf and that has the capacity to multiply itself into with in a period of one day. That is, first day 2 leaves and second day it will multiply into 4 leaves; third day 8 leaves; fourth day it will multiply into 16, like that it will go on multiplying. On the twentyninth day half of the pond was full. By such multiplication the entire pond was full on the thirtieth day. So, the implication of this is that we, the human race as such is on the 29th day of this multiplication and the 30th day will come very soon. According to Scientists, human beings have inhabitated this planet 2½ millions years ago. It was estimated that the population would be one billion as on 1830 and for every hundred years there would be an addition of one billion people. Based on that calculation, in the year 1995, the total addition to population would be Six billion. So, this rapid multiplication is not safe for human race. This is causing intolerable stress on human society, and all the present day ills can be traced to this abnormal growth. So, there is also ecological disturbance. When I went through the Annual Report of 1980-81, no mention has been made with regard to the fundamental aspect i.e., multiplication of human numbers. I would like to ask the Minister whether any target was fixed, if so, what was the achievement ? No doubt, some friends have said that there is a considerable reduction in population, but still in view of these facts, I want to know what was the target and what exactly was the achievement? In the Report nothing has been mentioned about it.

According to your own Department, there are some vacancies but still they have not been filled up. These are in the case of parat medical and even ministerial staff. Recruitment itself has been abolished. If you do not agree with the concept of Recruitmens Committees, you ought to have find out some alternative way to fill up vacancies. Work is not going on properly on account of shortage of these staff. You must find out a way either by Recruitment Committee or though some other way so that there are no vacancies and work would not suffer.

Now, I would like to speak a few words about the Board of visitors. Last year, while speaking on this demand I have requested the Government to constitute a Board of Visitors to see that a sort of check is imposed on the working of hospitals. But, for the last 18 months these Boards have not been constituted. It is only in Bangalore that a Board has been constituted under the Chairmanship of Kum. Pramila. But, in most of the hospitals in the State these Boards have not been constituted. Therefore I request the Hon. Minister to constitute the Boards of Visitors at his earliest convenience so that some sort of check could be established on the management of hospitals.

Sir, we talk so much of indigenous system of medicine and we read so much about their encouragement in news papers. Recently, a new batch has passed the unani system of madicine and now they are all fulfledged doctors. But, their employment is help up. On enquiry I found that there are some economy measures and they appointments could not be made just on account of that only. A the Hon. Finance Minister is here, I would crave his attention that these acts of economy measures should not fall on these babies. This is just a first batch and my information is that this file is running hither and theither for the last 2 to three months. There are so many unani dispensaries, but no doctor is posted there. I would request the Finance Minister, through you, to sanction appointments of these fresh doctors, and see that these economy measures would not come in the way of their appointments.

Sir, coming to the Medical Education, I have my own comments. I am one of those who feel that we need more colleges since the number of student population is rapidly increasing. Our population is increasing by leaps and bounds. The medical needs are also increasing. Therefore, in conformity with the increase we must have more doctors. We must encourage opening of new colleges The colleges that we have at present are not sufficient to cope with the demand. We must train still more doctors. We have got sufficient number of graduates. If we speak of unemployment, then there are thousands and thousands of M.A., M.Sc., B.A. B.Sc. degree holders. When such is the case, why not the Government encourage medical education? A doctor will be atleast of some use to his neighbours or wherever he lives.

The hon. Member Sri Qumarul Islam pleaded for a college to be given to minorities. I would not plead the establishment of a college on a communal basis. The society as such consists of minorities,

backward communities, forward communities *etc. etc.* We all belong to one society and the society has to think of weaker sections. The society should think of uplifting the weaker sections. If a section of the society is weak, the entire society will be affected by that weakness. It is the duty of the forward communities to see that these weaker sections are also elevated to their position in the society.

In Kolar, we have a hospital with a bed strength of 750. We have a Government Hospital, Mission Hospital and a Sanatorium too. I am not opposed to capitation fee. Why not the Government export education when we give so much of incentives, encouragement to exporters ? If the Hon. Minister for Health thinks in terms of establishing a college purely for foreigners to export education, it will be a healthy idea. We will be able to establish goodwill in other countries. There will be few ambassadors educated in our country If at all the Government wants to open a college, I humbly request the Government that Kolar be selected for the establishment of a fresh college.

Then, my local problem is that there is a T.B. Sanatorium which is a very good hospital. I have been on its Board of Directors Unfortunately, there have been no promotions to the officials since its inception. The present situation is that there will be frequent strikes. Even there was a time when all the patients threw their beds and took a march to the office of the Deputy Commissioner to lodge some complaint. Recently when the Hon. Minister for Health visited that Hospital, we found a doctor drunk. At present, the Hospital is in a very bad condition. I would request the Government that the entire staff excluding Class-IV be transferred and a new batch be posted so that Hospital could function smoothly.

There is an application pending before the Health Department for the establishment of a P.H. Unit at Vadagur in Kolar taluka. They have got lands, a building and have deposited necessary funds. The sanction of the Government to open this Unit is awaited. I hope and trust that the Government will sanction it shortly.

A Philonthropist has deposited a sum of Rs. one lakh for the establishment of a Maternity Home at Kolar. It is pending with the Government for its approval. I would request the Hon. Minister for Health to see that it is sanctioned early.

At the end, I would like to make a couple of suggestions to the Government. Sir, so many instances have been reported of manufacturing sub-standard drugs. Why not the Government think of starting a public sector Drug Manufacturing Unit ? I think, it will solve most of the problems. Some drugs commonly used could be

manufactured in that Unit. It will be also helpful to check the inflation or increase in prices at odd intervals and quality could as well be assured.

Another thing is that it has become a convention in the Health Department to surrender huge sums of money at the end of the year. The Department awakes in the eleventh hour. Is it fair on their part to acquire so mush money and then surrender it ? I would request the Government to please look into it and see that atleast it is not surrendered in future If they do not require the amount, let them not take it. The amount could be utilised for other better purposes such as, construction of Janata Houses or for giving basic amenities to the general public.

With these few words, I thank the Chair for giving me this opportunity to speak.

† ಶ್ರೀಮತಿ ಪ್ರಮೀಳ (ಚಾಮರಾಜಪೇಟೆ),—ಮಾನ್ಯ ಉಪಾಧ್ಯಕ್ಷರೇ, ನಿನ್ನೆಯಿಂದ ಇಲ್ಲಿಯ ಯವರೆಗೆ ಪುರುಷರ ಸಾಮ್ರಾಜ್ಯ ಆಯಿತು, ಕೊನೆಯದಾಗಿ ಮಹಿಳೆಯರಿಗೆ ಅವಕಾಶ ಕೊಟ್ಟಿದ್ದೀರಿ, ಅದಕ್ಕೆ ತಮಗೆ ಅಭಿನಂದನೆಗಳು. ಎಲ್ಲ ಮಹಿಳಾ ಸದಸ್ಯರೂ ನಮ್ಮಗಳ ಪರವಾಗಿ ನೀವೇ ಮಾತನಾಡಿ ಎಂದು ಹೇಳಿದ್ದಾರೆ. ಆದ್ದರಿಂದ ಅವರ ಕಾಲವನ್ನು ನಾನೇ ತಗೆದುಕೊಂಡು ಮಾತನಾಡಲು ಅವಕಾಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಗುಲ್ಬರ್ಗದಿಂದ ಬಂದಂತಹ ಮಾನ್ಯ ಸದಸ್ಯರು ಮಾತನಾಡುತ್ತಾ ಅಂಕಿ ಅಂಶಗಳನ್ನು ನೋಡಿದಾಗ ೧೯೭೧ರಲ್ಲಿ ಅಲ್ಪ ಸಂಖ್ಯಾತರು ಶೇಕಡ ೧೧ರಷ್ಟು ಮಂದಿ ಇದ್ದರೆ ಇವತ್ತಿನ ದಿವಸ ಶೇಕಡ ೧೬ಕ್ಕಿಂತಲೂ ಹೆಚ್ಚಾಗಿದ್ದಾರೆ ಎಂದರು. ನನಗೆ ತಿಳಿದಿದೆ ೧೮ ಪರ್ಸೆಂಟ್ ಆಗಿದೆ ಎಂದು. ಇನ್ನೂ ಕೆಲವು ಕಡೆ ೩೦ ಪರ್ಸೆಂಟ್ ಆಗಿದೆ ಎಂದು ತಿಳಿದಿದ್ದೇನೆ. ಕರ್ನಾಟಕದಲ್ಲಿ ಯಾವುದಾದರೂ ಒಂದು ಇಲಾಖೆ ಚನ್ನಾಗಿ ಕೆಲಸ ಮಾಡಿದೆ ಎಂದರೆ ಅದು ಆರೋಗ್ಯ ಇಲಾಖೆ. ಅದು ತನ್ನ ಇಲಾಖೆಯಲ್ಲಿ ಅಲ್ಪ ಸಂಖ್ಯಾತರಿಗೂ ಸೇವೆ ಸಲ್ಲಿಸಲು ಅವಕಾಶ ನೀಡಿದೆ ಎಂದರೆ ತಪ್ಪಾಗಲಾರದು. ಆದರೆ ಈ ಸಂದರ್ಭದಲ್ಲಿ ಮಾನ್ಯ ಆರೋಗ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎಂದು ಏನು ಹೇಳುತ್ತೀರಿ ಅವನ್ನು ಯಾರಿಗಾಗಿ ಇಟ್ಟಿದ್ದೀರಿ ಎಂದು. ಕುಟುಂಬ ಕಲ್ಯಾಣ ಯೋಜನೆ ಹಿಂದುಗಳಿಗೆ ಮಾತ್ರವೇ ಅಥವಾ ಎಲ್ಲ ಜಾತಿಯವರಿಗೂ ಅನ್ವಯಿಸುತ್ತದೆಯೇ ಎಂದು ಕೇಳುತ್ತೇನೆ. ಈ ಯೋಜನೆಯನ್ನು ನಿಮ್ಮ ಸಮಾಜದಲ್ಲಿರತಕ್ಕವರಿಗೂ ಮನಸ್ಸುಮಾಡಿ ಅನ್ವಯ ಆಗುವ ಹಾಗೆ ಮಾಡಬೇಕೆಂದು ಮಾನ್ಯ ಆರೋಗ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ. ನಿಮ್ಮ ಹೃದಯ ಒಳ್ಳೆಯದು, ನೀವು ಮನಸ್ಸು ಮಾಡಿದರೆ ಆಗುತ್ತದೆಂದು ತಿಳಿದಿದ್ದೇನೆ. ಮಾನ್ಯ ಕ್ವಮರಲ್‌ರವರು ಹೇಳಿದ ಹಾಗೆ ಈ ಸಮಸ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಇದೇ ರೀತಿ ಈ ಯೋಜನೆಯನ್ನು ಅಲ್ಪ ಸಂಖ್ಯಾತರಿಗೆ ಅನ್ವಯಿಸದೆ ಹಿಂದುಗಳಿಗೆ ಮಾತ್ರ ಅನ್ವಯಿಸಿದರೆ ಪ್ರಾಯಶಃ ಕರ್ನಾಟಕದಲ್ಲಿ ಒಂದಲ್ಲ ಒಂದು ದಿವಸ ಹಿಂದೂಗಳೇ ಇಲ್ಲದೆ ಕೇವಲ ಅಲ್ಪಸಂಖ್ಯಾತರೇ ಹೆಚ್ಚುವ ಪ್ರಮೇಯ ಬರಬಹುದು. ಆದುದರಿಂದ, ಈ ಇಲಾಖೆ ನಿಜವಾಗಿ ಇರುವುದಾದರೆ ಕಡ್ಡಾಯವಾಗಿ ಪ್ರತಿಯೊಂದು ಜಾತಿ ಕುಲ ಕೋಮುಗಳಿಗೂ ಭೇದವಿಲ್ಲದೆ ಈ ಯೋಜನೆಯನ್ನು ಅನ್ವಯ ಮಾಡಬೇಕು ಅದನ್ನು ಬಿಟ್ಟು ಕೇವಲ ಹಿಂದುಗಳಿಗೆ ಅನ್ವಯ ಮಾಡುತ್ತೇವೆಂದರೆ ಪ್ರಯೋಜನವಾಗುವುದಿಲ್ಲ. ನಮ್ಮನ್ನು ಈ ರೀತಿ ಡಿಸ್‌ಕ್ರಿಮಿನೇಟ್ ಮಾಡಿದ್ದಾರೆಂದು ಕ್ವಮರಲ್ ಸಾಹೇಬರು ಹೇಳಿದರು. ಎಲ್ಲಿ ಹೇಗೆ ಮಾಡಿದ್ದಾರೆಂದರೆ, ಅವರಿಗೆ ಈ ಯೋಜನೆಯನ್ನು ಅನ್ವಯಿಸದೆ ಕೇವಲ ಹಿಂದುಗಳಿಗೆ ಅನ್ವಯಿಸಿ ಡಿಸ್‌ಕ್ರಿಮಿನೇಟ್ ಮಾಡಿದ್ದಾರೆ.

೪-೩೦ ಪಿ.ಎಂ.

ಆದ್ದರಿಂದ.........

ಶ್ರೀ ಜಿ.ಕೆ. ತಕ್ಕೇದ್.—ಒಂದು ನಿಮಿಷ ತಾವು ಈಲ್ಡ್ ಆದರೆ ನಾನು ಮಾತನಾಡುತ್ತೇನೆ.

ಶ್ರೀಮತಿ ಪ್ರಮೀಳ.—ನಾನು ಈಲ್ಡ್ ಆಗುವುದಿಲ್ಲ.

ಶ್ರೀ ಅಬ್ದುಲ್ ಲತೀಫ್.—ಒಂದೇ ಒಂದು ನಿಮಿಷ ತಾವು ಈಲ್ಡ್ ಆದರೆ......

ಶ್ರೀಮತಿ ಪ್ರಮೀಳ.—ನಾನಾಗುವುದಿಲ್ಲ. ಅಧ್ಯಕ್ಷರು ನನಗೆ ೧೦ ನಿಮಿಷ ಹೆಚ್ಚಿಗೆ ಕೊಡುವುದಾದರೆ ಈಲ್ಡ್ ಆಗುತ್ತೇನೆ.

ಶ್ರೀ ಅಬ್ದುಲ್ ಲತೀಫ್.—ಒಂದೇ ಒಂದು ನಿಮಿಷದಲ್ಲಿ ಹೇಳುತ್ತೇನೆ. Sir, this is a wrong concepsion that Muslims are far behind in Family Planning and that their population is increasing. It is a wrong notion and I would like to correct it. If you take a sample survey of any town, any city, any village, we stand on the same-footing as other communities. A sample survey was conducted in Kolar three years ago and the Christians stood first and the Muslims came second. So, this wrong notion may be avoided.

ಶ್ರೀಮತಿ ಪ್ರಮೀಳ.—ನಾನು ಕೇವಲ ಅಲ್ಪಸಂಖ್ಯಾತರೆಂದರೆ......

ಶ್ರೀ ಜಿ.ಕೆ. ತಕ್ಕೇದ್.— ಒಂದು ನಿಮಿಷ ದಯವಿಟ್ಟು ಈಲ್ಡ್ ಆಗಿ.

ಶ್ರೀಮತಿ ಪ್ರಮೀಳ.—ನಾನು ಮಾತನಾಡುವುದಕ್ಕೆ ನಿಂತರೆ ಏನಾಗುತ್ತದೆ ಇವರಿಗೆ ?

ಶ್ರೀ ಶೀರ್ನಾಳಿ ಚಂದ್ರಶೇಖರ್.—ಒಬ್ಬಳು ಹೆಣ್ಣುಮಗಳ ಮೇಲೆ ಇಷ್ಟು ಜನ ಏತಕ್ಕೆ ಧಾಳಿ ಮಾಡುತ್ತಾರೆ? ದಯವಿಟ್ಟು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿ.

ಶ್ರೀಮತಿ ಪ್ರಮೀಳ.—ಈ ಸಭೆಯಲ್ಲಿ ನಾನು ನಿಂತರೆ ಏನಾಗುತ್ತದೋ ಇವರಿಗೆ ಗೊತ್ತಿಲ್ಲ.

SRI P.K. RANGANATHA.—Sir, as we all know, a Hindu can marry once. But a Musilm is allowed to marry five or six times. So, whose population will be more ?

ಶ್ರೀ ಜಿ.ಕೆ. ತಕ್ಕೇದ್....ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಪ್ರಮೀಳಾದೇವಿಯವರು ಈ ರಾಜ್ಯದಲ್ಲಿ ಒಂದು ದಿವಸ ಎಲ್ಲರೂ ಮುಸಲ್ಮಾನರಾಗಬಹುದು ಎಂದು ಹೇಳಿದ್ದಾರೆ. ಮುಸಲ್ಮಾನರು ಫ್ಯಾಮಿಲಿ ಪ್ಲಾನಿಂಗ್ ಅನುಸರಿಸುತ್ತಿಲ್ಲ ಎಂದು ಹೇಳಿದ್ದಾರೆ. ೧೧ ವರ್ಷದ ಹಿಂದೆ ಫ್ಯಾಮಿಲಿ ಪ್ಲಾನಿಂಗ್ ಪ್ರಾರಂಭವಾದಾಗ ನಾನು ಮೊದಲು ಮಾಡಿಸಿಕೊಂಡಿದ್ದೇನೆ.

ಶ್ರೀ ಶೀರ್ನಾಳಿ ಚಂದ್ರಶೇಖರ್. —ಈ ನೆಪದಲ್ಲಿ ಪಬ್ಲಿಸಿಟಿ ತೆಗೆದುಕೊಳ್ಳುತ್ತಿದ್ದಾರೆ. ಶ್ರೀವ ನಾನ್ ತಕ್ಕೇದ್ ಅವರಿಗೆ ೧೨ ಮಕ್ಕಳಿದ್ದಾರೆ. ಬಹುಶಃ ೧೨ ಮಕ್ಕಳಾದ ಮೇಲೆ ಫ್ಯಾಮಿಲಿ ಪ್ಲಾನಿಂಗ್ ಮಾಡಿಸಿಕೊಂಡಿರಬಹುದು.

ಶ್ರೀ ರಾಜೂಗೌಡ.—೧೧ ವರ್ಷದ ಹಿಂದೆ ಫ್ಯಾಮಿಲಿ ಪ್ಲಾನಿಂಗ್ ಮಾಡಿಸಿಕೊಂಡೆ ಎಂದು ತಕ್ಕೇದ್ ಅವರು ಹೇಳುತ್ತಿದ್ದಾರೆ. ಆದರೆ ಅವರಿಗೆ ೯ ವರ್ಷದ ಮಗು ಇದೆ.

ಶ್ರೀ ಜಿ.ಕೆ. ತಕ್ಕೇದ್.—ನಾನು ಹೇಳುವುದಿಷ್ಟೆ. ನಮ್ಮ ಜಿಲ್ಲೆಯಲ್ಲಿ ಸರ್ವೆ ಮಾಡಿ ನೋಡಿ.

ಶ್ರೀಮತಿ ಪ್ರಮೀಳ.—ಮಾನ್ಯ ಸದಸ್ಯರಾದ ಅಬ್ದುಲ್ ಲತೀಫ್ ಅವರು ಹೇಳಿದ್ದನ್ನು ನಾನು ಖಂಡಿತ ಒಪ್ಪುತ್ತೇನೆ. ನಾನು ಕಮ್ಯುನಿಟಿ ಪಾಪುಲೇಷನ್ ಹೆಚ್ಚುತ್ತಿರುವುದು ಕೇವಲ ಮುಸಲ್ಮಾನರಲ್ಲಿ ಮಾತ್ರ ಎಂದು ಹೇಳಲಿಲ್ಲ. ಕ್ರಿಶ್ಚಿಯನ್ನರೂ ಕೂಡ ಫ್ಯಾಮಿಲಿ ಪ್ಲಾನಿಂಗ್ ಮಾಡಿಸಿಕೊಳ್ಳುತ್ತಿಲ್ಲ. ಅಷ್ಟೇ ಅಲ್ಲ, ಮಾನ್ಯ ಮಂತ್ರಿಗಳಿಗೆ ಗೊತ್ತಿದೆ ಷೆಡ್ಯೂಲ್ಡ್ ಟ್ರೈಬ್‌ಜನವರಿಗೆ ಫ್ಯಾಮಿಲಿ ಪ್ಲಾನಿಂಗ್

ಆಪರೇಷನ್ ಮಾಡಬಾರದು ಎಂದು ನಿರ್ದೇಶನ ಇದೆ. ಅಂದ ಮೇಲೆ ಫ್ಯಾಮಿಲಿ ಪ್ಲಾನಿಂಗ್ ಅಲ್ಪ ಸಂಖ್ಯಾತರಿಗೆ, ಷೆಡ್ಯೂಲ್ಡ್ ಟ್ರೈಬ್‌ನವರಿಗೆ ಇಲ್ಲ; ಷೆಡ್ಯೂಲ್ಡ್ ಕ್ಯಾಸ್ಟ್ ಕಡಿಮೆಯಾಗುತ್ತಾ ಹೋಗಬೇಕು, ಷೆಡ್ಯೂಲ್ಡ್ ಟ್ರೈಬ್ ಹೆಚ್ಚಾಗುತ್ತಾ ಹೋಗಬೇಕು ಎಂದರೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಫ್ಯಾಮಿಲಿ ವೆಲ್‌ಫೇರ್ ಮಾಡಬೇಕೆನ್ನುವುದಾದರೆ ಇಡೀ ಕರ್ನಾಟಕದಲ್ಲಿರತಕ್ಕ ಎಲ್ಲಾ ಜನಾಂಗದವರಿಗೂ ಅನ್ವಯ ಮಾಡಬೇಕು. ನಾನು ಒಂದು ಪ್ರಶ್ನೆ ಕೇಳುತ್ತೇನೆ. ನಿಮ್ಮ ಆರೋಗ್ಯ ಇಲಾಖೆಯಲ್ಲಿ ಫ್ಯಾಮಿಲಿ ವೆಲ್‌ಫೇರ್ ಯೋಜನೆಯನ್ನು ಅನುಸರಿಸುತ್ತಿದ್ದಾರೆಯೇ ? As a sample. I am requesting you to kindly hold a survey. ನಿಮ್ಮ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಫ್ಯಾಮಿಲಿ ಪ್ಲಾನಿಂಗ್ ಅಡಾಪ್ಟ್ ಮಾಡಿದ್ದಾರಾ ? ಅವರಿಗೆ ಎಷ್ಟು ಮಕ್ಕಳಿವೆ ಎಂಬ ಬಗ್ಗೆ ಸರ್ವೆ ಮಾಡಿ. ಯಾರು ಇದನ್ನು ಮಾಡಬೇಕೆಂದು ಹೇಳುತ್ತಾರೋ ಅವರೇ ವಯಲೇಟ್ ಮಾಡುತ್ತಿದ್ದಾರೆ. ಅಲ್ಲಿ ಕೆಲಸ ಮಾಡುವವರಿಗೆ ಹೆತ್ತು ಮಕ್ಕಳಿದೆ. ಮಾನ್ಯ ಸದಸ್ಯರಾದ ಅಬ್ದುಲ್ ಲತೀಫ್ ಅವರು ಹೇಳಿದ್ದರಿಂದ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಕಡಿಮೆ ಮಕ್ಕಳು ಇರಬೇಕು ಎಂದು ನಮ್ಮ ಜನಾಂಗದಲ್ಲಿ ಮಾತುಕತೆ ಆಗಿದೆ ಎಂದು ಹೇಳುತ್ತಾರೆ. ಆದರೆ ನಿಮ್ಮ ಜನಾಂಗದಲ್ಲಿ (ಮುಸಲ್ಮಾನ್) ನಾಲ್ಕು ಜನಕ್ಕಿಂತ ಹೆಚ್ಚು ಮಕ್ಕಳಾದರೆ ಆರ್ಥಿಕ ಸಹಾಯ ಕೊಡುತ್ತೇವೆಂದು ಹೇಳುತ್ತಿರಲ್ಲ ಏತಕ್ಕೆ ? ಹೆಚ್ಚು ಜನ ಮಕ್ಕಳಾದರೆ ಹೆಚ್ಚು ಹಣ ಕೊಡುತ್ತೇವೆ ಎಂದರೆ ಹೆಚ್ಚು ಮಕ್ಕಳನ್ನು ಪಡೆಯಲು ಬಯಸುತ್ತಾರೆ. ಫ್ಯಾಮಿಲಿ ಪ್ಲಾನಿಂಗ್ ಖಂಡಿತ ಇಂಪ್ಲಿಮೆಂಟಾಗುವುದಿಲ್ಲ. ಆದ್ದರಿಂದ ಎಲ್ಲಾ ಜನಾಂಗದವರು ಸೌಹಾರ್ದದಿಂದ ಮನಸ್ಸು ಮಾಡಿ ಅವರವರ ಜನಾಂಗದವರ ಮನಸ್ಸನ್ನು ಒಪ್ಪಿಸಿ ಕುಟುಂಬ ಯೋಜನೆಯನ್ನು ಜಾರಿಗೆ ತರದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಜನರಲ್ಲಿ ಸ್ಫೋಟವಾಗುತ್ತದೆ. ಅದಕ್ಕೆ ದಯವಿಟ್ಟು ಅವಕಾಶ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ. Health hezard ಬಗ್ಗೆ ಒಂದು ರಿಪೋರ್ಟನ್ನು ನೀವು ಕೊಟ್ಟಿದ್ದೀರಿ. ಮಾನ್ಯ ಅಧ್ಯಕ್ಷರೇ, ವಿಧಾನಸೌಧದಲ್ಲಿರುವ ರೂಂ. ನಂ. ೧೧೭ರ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ. ಅದು ವಿದ್ಯಾ ಇಲಾಖೆಗೆ ಸಂಬಂಧಿಸಿದ್ದು ಎಂದು ಹೇಳಬಹುದು. ಆದರೂ ಆರೋಗ್ಯಕ್ಕೆ ಸಂಬಂಧ ಪಟ್ಟಿರುವುದರಿಂದ ಹೇಳುತ್ತಿದ್ದೇನೆ. ವಿಧಾನ ಸೌಧದ ಅಂಡರ್‌ಗ್ರೌಂಡಿನಲ್ಲಿ Department of Archieves ಇದೆ. ಅಲ್ಲಿ ಒಂದು ವರ್ಷದಲ್ಲಿ ನಾಲ್ಕು ಜನರು ಸತ್ತಿದ್ದಾರೆ. ಅದರ ಬಗ್ಗೆ ಏನಾದರೂ ಮಾಹಿತಿಯನ್ನು ತರಿಸಿಕೊಂಡಿದ್ದಾರೆಯೇ ಎಂದು ಕೇಳುತ್ತಿದ್ದೇನೆ. ಅಲ್ಲಿ ರೆಕಾರ್ಡ್‌ಗಳನ್ನು ಇಟ್ಟಿದ್ದಾರೆ. ಅದರ ಮೇಲೆ ಧೂಳು ತುಂಬಿ Napthalene, chemical inhalement-ನಿಂದ ಅಲ್ಲಿ ಕೆಲಸ ಮಾಡುವವರಿಗೆ ಕ್ಯಾನ್ಸರ್ ರೋಗ ಬಂದಿದೆ. ಯಾರು ಸತ್ತಿದ್ದಾರೆ ಎಂಬುದಕ್ಕೆ ಬೇಕಾದರೆ ಹೆಸರನ್ನು ಕೂಡ ಹೇಳುತ್ತೇನೆ. ನಾಲ್ಕನೇ ದರ್ಜೆ ನೌಕರರಾಗಿದ್ದ ಶ್ರೀ ತಿರುಪ್ಪಾನ್ ಎಂಬುವರು ಈ ಖಾಯಿಲೆಯಿಂದ ಮೃತಪಟ್ಟಿದ್ದಾರೆ. ಕೇವಲ ೨೫ ದಿವಸಗಳಲ್ಲಿ ಅಲ್ಲಿ ಡೆಪ್ಯುಟೇಷನ್ ಮೇಲೆ ಹೋಗಿದ್ದ ಅಕೌಂಟ್ ಸೂಪರಿಂಟೆಂಡೆಂಟ್‌ರವರು ಸತ್ತಿದ್ದಾರೆ. ಇದನ್ನು ಹೇಳುವುದಕ್ಕೆ ದುಃಖವಾಗುತ್ತದೆ. ಈಗಿರತಕ್ಕ ಡೈರೆಕ್ಟರ್‌ರವರೂ ಕೂಡ ಖಾಯಿಲೆಯಿಂದ ನರಳುತ್ತಿದ್ದು ಇವತ್ತೇನಾಗುತ್ತದೋ, ನಾಳೆ ಏನಾಗುತ್ತದೋ ಎನ್ನುವ ಸ್ಥಿತಿಯಲ್ಲಿದ್ದಾರೆ. ಹೆಲ್ತ್ ಹೆಜಾರ್ಡ್ ಬಗ್ಗೆ ಡಿಪಾರ್ಟ್‌ಮೆಂಟಿನವರು ಸರ್ವೇ ಮಾಡಿ ತಕ್ಷಣ ಇದನ್ನು ಷಿಫ್ಟ್ ಮಾಡಿ ಎಂದು ೬ ತಿಂಗಳ ಹಿಂದೆಯೇ ರಿಪೋರ್ಟ್ ಕೊಟ್ಟಿದ್ದರೂ ಬೇರೆ ಕಡೆಗೆ ವರ್ಗಾಯಿಸಿಲ್ಲ. ಬೇರೆ ವೆಂಟಿಲೇಷನ್ ಇರುವ ಕಡೆ ಬದಲಾವಣೆ ಮಾಡಿ ಎಂದು ಅವರು ಹೇಳಿದ್ದರೂ ಕ್ರಮ ತೆಗೆದುಕೊಂಡಿಲ್ಲ. ನಾಲ್ಕು ಜನರು ಒಂದು ವರ್ಷದಲ್ಲಿ ಆಹುತಿಯಾಗಿದ್ದಾರೆಂದರೆ ಪ್ರಾಯಶಃ ಮುಂದಿನ ಸಾರಿ ನಾವು ಸೇರುವ ಹೊತ್ತಿಗೆ ಇನ್ನೂ ಎಷ್ಟು ಜನ ಸಾಯುತ್ತಾರೋ ಗೊತ್ತಿಲ್ಲ. ಇದರ ಬಗ್ಗೆ ಗಮನ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದೊಂದೇ ಇಲಾಖೆಯಲ್ಲಿ. ಹೆಲ್ತ್ ಹೆಜಾರ್ಡ್ ಫ್ಯಾಕ್ಟರಿಯಲ್ಲಿ ಆಗುತ್ತಿದೆ. ಹೊಸಕೋಟೆ ಫ್ಯಾಕ್ಟರಿಯಲ್ಲಿ ಇದು ಆಗುತ್ತಿರುವ ಬಗ್ಗೆ ಪತ್ರಿಕೆಗಳಲ್ಲೂ ಬಂದಿರುವುದನ್ನು ಓದಿದ್ದೇನೆ. ಹೆಲ್ತ್ ಹೆಜಾರ್ಡ್ ಬಗ್ಗೆ ಇಲಾಖೆಯವರು ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡಿಲ್ಲ. ರಾಯಚೂರು ಭಾಗದಲ್ಲಿ ಅಶುದ್ಧವಾದ ನೀರನ್ನು ಕುಡಿದು ಜನರು ಅನುಭವಿಸುತ್ತಿರುವ ಕಷ್ಟವನ್ನು ರಾಯಚೂರಿನಿಂದ ಬಂದಿರತಕ್ಕ ಸದಸ್ಯರು ಹೇಳುತ್ತಾರೆಂದು ನಾನು ಭಾವಿಸಿದ್ದೆ. ಅಲ್ಲಿ ಅಶುದ್ಧವಾದ ನೀರನ್ನು ಕುಡಿದು ಹಳ್ಳಿಯ ಯುವಕರು ಮುದುಕರಾದಂತೆ ಕಾಣುತ್ತಿದ್ದಾರೆ. ವಯಸ್ಸಿನಲ್ಲಿರತಕ್ಕ ಯುವಕ ಯುವತಿಯರು ಮುದುಕರಾಗುತ್ತಿದ್ದಾರೆ. ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕವರಿಗೆ, ವಿಧಾನಸೌಧದಲ್ಲಿ

ರುವ ವ್ಯಕ್ತಿಗಳಿಗೆ ಈ ಪರಿಸ್ಥಿತಿ ಒದಗಿ ಬಂದಿರುವಾಗ ಆರೋಗ್ಯದ ಬಗ್ಗೆ ಆರೋಗ್ಯ ಇಲಾಖೆಯವರು ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ಒಂದು ಕ್ಷಣ ಯೋಜಿಸಿ ನೋಡ ಬೇಕಾದುದು ನಮ್ಮ ಕರ್ತವ್ಯ. ಬೆಂಗಳೂರಿನಲ್ಲಿ ಕೆಲವು ದಿನಗಳ ಹಿಂದೆ ಕಾಮಾಲೆ ರೋಗ ಬಂದಿದ್ದಾಗ ಪತ್ರಿಕೆಗಳಲ್ಲಿ ಬಂದಿದ್ದನ್ನು ನೋಡಿ ಜಲಮಂಡಲಿಯವರು ತಪ್ಪು ಮಾಡಿದ್ದಾರೆ ಎಂದು ಅಂದು ಕೊಂಡಿದ್ದೆ. ಜಲಮಂಡಲಿಯವರು ಅಶುದ್ಧವಾದ ನೀರನ್ನು ಸರಬರಾಜು ಮಾಡುತ್ತಿರುವುದರಿಂದ ಎಲ್ಲರಿಗೂ ಖಾಯಿಲೆ ಬಂದಿದೆ ಎಂದು ಅನೇಕ ಸದಸ್ಯರು ಹೇಳಿದ್ದನ್ನು ನಾನು ಕೇಳಿದ್ದೇನೆ. ಇಲಾಖಾ ವರದಿಯನ್ನು ಕೂಡ ಕೊಟ್ಟಿದ್ದೀರಿ. ಇದರಲ್ಲಿ ಏನು ಹೇಳಿದ್ದಾರೆಂದರೆ ವಾಟರ್ ಪೊಲ್ಯೂಷನ್ ಬಗ್ಗೆ ನೋಡಲು ಒಂದು ಇಲಾಖೆ ಇದೆ ಎಂದು ಹೇಳಿದ್ದಾರೆ. Karnataka State Board for Prevention and control of water pollution ಎಂದಿದೆ. ಅದಕ್ಕೆ ಅಧ್ಯಕ್ಷರಿದ್ದಾರೆ, ಸದಸ್ಯರಿದ್ದಾರೆ. ೧೯೭೪ರಿಂದ ಇದನ್ನು ಜಾರಿಗೆ ತಂದಿದ್ದಾರೆ. ಆದರೆ ರಿಪೋರ್ಟ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ. ವಾಟರ್ ಪೊಲ್ಯೂಷನ್ ಆಗತಕ್ಕದ್ದು ಬೋರ್ಡಿಗೆ ಮಾತ್ರ ಸಂಬಂಧಪಟ್ಟಿದ್ದಲ್ಲ ಎಂದು ಹೇಳಿದ್ದಾರೆ.

ರಾಜ್ಯದಲ್ಲಿರುವ ೨೪೭ ಮುನಿಸಿಪಾಲಿಟಿಗಳು ಮತ್ತು ನಗರಸಭೆಗಳೂ ಕೂಡ ಇದರಲ್ಲಿ ಭಾಗಿಗಳಾಗಿವೆ ಎಂದು ವರದಿಯ ೪೯ನೇ ಪುಟದಲ್ಲಿ ಹೇಳಿದ್ದಾರೆ;—

> "Out of 247 Municipalities/Corporations, only a few, Such as Bangalore, Mangalore. Mysore have got primary treatment facilities but even these are not sufficient for treating the sewage/sullage to the standards prescribed by the Board requiring secondary treatment units to be put by them."

ಹಾಗಿದ್ದರೆ, ನಿಮ್ಮ ಇಲಾಖೆ ಏನು ಮಾಡುತ್ತಿತ್ತು? ರಾಜ್ಯದಲ್ಲಿರುವ ೨೪೭ ಮುನಿಸಿಪಾಲಿಟಿಗಳಿಗೆ ಮತ್ತು ಬೆಂಗಳೂರು ಹಾಗೂ ಮೈಸೂರು ನಗರಸಭೆಗಳಿಗೆ ಈ ಬೋರ್ಡ್‌ನಿಂದ ನೋಟಿಸ್ ಕೊಟ್ಟಿದ್ದಾರೆಯೆ? ನಿಯಂತ್ರಿಸುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚನೆ ಕೊಟ್ಟಿದ್ದಾರೆಯೆ? ಕೊಡದಿದ್ದರೆ ೧೯೭೪ನೇ ಇಸವಿಯಿಂದ ಈ ಮಂಡಲಿ ಏನು ಮಾಡುತ್ತಿತ್ತು ಎಂದು ನಾನು ಕೇಳಬಯಸುತ್ತೇನೆ. ಆರೋಗ್ಯ ಇಲಾಖೆಯಲ್ಲಿ ಇಂಥಾ ಒಂದು ಮಂಡಲಿ ಇದ್ದೂ ಕೂಡ ಬೆಂಗಳೂರಿನ ಜನತೆ ಕಲುಷಿತ ನೀರನ್ನು ಕುಡಿಯುತ್ತಿರುವುದು ಬಹಳ ದುರ್ದೈವದ ವಿಚಾರ. ಇನ್ನು ಮುಂದಾದರೂ ಮುನಿಸಿಪಾಲಿಟಿ ಮತ್ತು ನಗರಸಭೆಗಳಿಗೆ ಸೂಚನೆ ಕೊಟ್ಟು ಮುಂದೆ ಹೀಗಾಗದಂತೆ ಮಂಡಲಿ ನೋಡಿಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಬೆಂಗಳೂರಿನಲ್ಲಿರುವ ಸ್ಯಾನಿಟೋರಿಯಂ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಸ್ಯಾನಿಟೋರಿಯಂನಲ್ಲಿ ನಡೆದಿರುವ ಖರೀದಿ ಬಗ್ಗೆ ಇಲ್ಲಿ ನಾನು ಹೇಳಲೇಬೇಕಾಗಿದೆ. ಅಲ್ಲಿಗೆ ಸುಮಾರು spittoon ಗಳನ್ನು ಖರೀದಿ ಮಾಡಿದ್ದಾರೆ. ಇವುಗಳ ಬೆಲೆ ಮಾರುಕಟ್ಟೆಯಲ್ಲಿ ಸುಮಾರು ಆರು ಅಥವಾ ಆರೂವರೆ ರೂಪಾಯಿಗಳಿರಬಹುದು. ಆದರೆ, ಬೆಂಗಳೂರು ನಗರದ ಸ್ಯಾನಿಟೋರಿಯಂನವರು ಕೊಟೇಷನ್ ಕರೆದ ಹಾಗೆ ನಾಮಕಾವಸ್ಥೆ ಮಾಡಿ, ಒಂದು spittoon ಗೆ ಅರವತ್ಮೂರೂವರೆ ರೂಪಾಯಿಗಳಿಗೆ ಒದಗಿಸುತ್ತೇನೆಂದು ಹೇಳಿದ್ದ ಕೊಟೇಷನ್ ಅನ್ನು ಒಪ್ಪಿಕೊಂಡು ಅದರಂತೆ ಹಣವನ್ನೂ ನೀಡಿದ್ದಾರೆ. ಇದು ಯಾರ ಬೊಕ್ಕಸಕ್ಕೆ ದಂಡ ಎಂದು ನಾನು ಕೇಳುತ್ತೇನೆ. ಬಹುಶ; ಇದೇ ರೀತಿ ಕರ್ನಾಟಕದಲ್ಲಿರುವ ಎಲ್ಲ ಆಸ್ಪತ್ರೆಗಳಲ್ಲೂ ನಡೆಯುತ್ತಿರಬಹುದು. ಆದುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಗಮನ ಹರಿಸಿ, ತನಿಖೆ ಮಾಡಿಸಿ, ಇದಕ್ಕೆ ಯಾರ್ಯಾರು ಕಾರಣಕರ್ತರಾಗಿದ್ದಾರೆ ಅವರೆಲ್ಲರನ್ನೂ ಕೆಲಸದಿಂದ ತೆಗೆದು ಹಾಕುವುದಕ್ಕೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು. Drugs Control Department ಹೆಸರಿಗೆ ಮಾತ್ರ ಇದೆ ಎಂದು ಕಾಣುತ್ತದೆ. ಇದು ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. ರೋಗಿಗಳು ಹೆಚ್ಚುತ್ತಾ ಇರುವುದಕ್ಕೆ ಮತ್ತು ಸಾಯುತ್ತಿರುವುದಕ್ಕೆ ಇದೇ ಕಾರಣವೆಂದು ನಾನು ಅಪಾದನೆ ಮಾಡುತ್ತೇನೆ. ಎರಡು ಔಷಧಿಗಳನ್ನು ನಾನು

ಉದಾಹರಣೆಗಾಗಿ ಇಲ್ಲಿಗೆ ತಂದಿದ್ದೇನೆ ಅವುಗಳೇ chloromycitin and teramycin. ಈ ಮಾತ್ರೆಗಳನ್ನು ಬೆಂಗಳೂರಿನಲ್ಲಿ ಸಾರ್ವಜನಿಕವಾಗಿ ಸುಮಾರು ೨೭ ಪೈಸೆಯಂತೆ ಮಾರಲಾಗುತ್ತಿದೆ. ನನ್ನ ಬಳಿ ಇರುವ ಮಾತ್ರೆಗಳು ೨೫೦ ಎಂಜಿ ಇದ್ದು, ಇವುಗಳನ್ನು ತಯಾರಿಸಲು ಉಪಯೋಗಿಸಿರುವ ವಸ್ತುಗಳನ್ನು ನೋಡಿದರೆ ಇದು ಬಹಳ ಬೆಲೆ ಇರಬೇಕೆನ್ನಿಸುತ್ತದೆ. ಬೇರೆ ಕಂಪನಿಗಳು ಇದೇ ಮಾತ್ರೆಯನ್ನು ಹೆಚು ಬೆಲೆಗೆ ಮಾರುತ್ತಿರುವಾಗ ಈ ಕಂಪೆನಿ ಮಾತ್ರ ೨೭ ಪೈಸೆಗೆ ಒಂದು ಮಾತ್ರೆಯಂತೆ ಮಾರುತ್ತಿದೆ. ಆದರೆ, ಅಷ್ಟು ಬೆಲೆ ಈ ಮಾತ್ರೆಯನ್ನು ಕೊಡುವುದಕ್ಕೆ ಖಂಡಿತ ಯಾರಿಗೂ ಸಾಧ್ಯವಿಲ್ಲ. ಒಂದು ವೇಳೆ ಕೊಡುತ್ತಿದ್ದರೂ ಅದು ೨೫೦ ಎಂಜಿ ಇರಲಿಕ್ಕೆ ಸಾಧ್ಯವಿಲ್ಲ. ಇಲ್ಲಾ ಬೇರೆ ಕಂಪೆನಿಗಳವರು ಹೆಚ್ಚು ಬೆಲೆ ಇದೇ ಮಾತ್ರೆಯನ್ನು ಮಾರುತ್ತಿರಬಹುದು ಅಥವಾ ಈ ಮಾತ್ರೆಯಲ್ಲಿ ತಿಳಿಸಿರುವಷ್ಟು ಪ್ರಮಾಣದಲ್ಲಿ ವಸ್ತುಗಳನ್ನು ಬಳಸದಿರಬಹುದು. ಅಂತೂ ಯಾವುದಾದರಲೊಂದು ತಪ್ಪಿದ್ದು ಸಾರ್ವಜನಿಕರಿಗೆ ಮೋಸ ಮಾಡಲಾಗುತ್ತಿದೆ ಎಂದು ಅರ್ಥವಾಗುತ್ತದೆ. ಇದೇ ರೀತಿ ಪ್ರತಿಯೊಂದು ಟಾನಿಕ್‌ನಲ್ಲೂ. ಮಾತ್ರೆಯಲ್ಲೂ ಮತ್ತು ಕಾಪ್ಸುಲ್‌ಗಳಲ್ಲೂ ಮೋಸ ನಡೆಯುತ್ತಿದೆ. ಇದರಿಂದ ರೋಗ ಇನ್ನು ಹೆಚ್ಚಾಗುವ ಸಂಭವವಿರುತ್ತದೆಯೇ ಹೊರತು ಕಡಿಮೆ ಯಾಗುವ ಸಾಧ್ಯತೆಗಳಿರುವುದಿಲ್ಲ. ಆದುದರಿಂದ, Drugs Control Department ಏನು ಮಾಡುತ್ತಿದೆ ಎಂದು ಕೇಳುತ್ತೇನೆ. ಮಾತ್ರೆಗಳ ಮತ್ತು ಇತರ ಔಷಧಿಗಳ ತಯಾರಿಕೆ ಮತ್ತು ಮಾರಾಟದಲ್ಲಿ ಒಂದು ದೊಡ್ಡ ರ್‍ಯಾಕೆಟ್ ಇದೆ. ಈ ಮಾತ್ರೆಗಳನ್ನು ತಿಂದ ಮನುಷ್ಯ ಬದುಕುವುದಕ್ಕೆ ಸಾಧ್ಯವಿಲ್ಲ ಅಥವಾ ಜ್ವರ ವಾಸಿಯಾಗುವುದಕ್ಕೂ ಸಾಧ್ಯವಿಲ್ಲ. ಎರಡು ಪ್ರತ್ಯೇಕ ಪ್ಯಾಕೆಟ್ಟುಗಳಲ್ಲಿ ಸೀಲ್ ಆಗಿರುವ ಈ ಮಾತ್ರೆಗಳನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಈ ಮಾತ್ರೆಗಳನ್ನು ಕೊಂಡದ್ದಕ್ಕಾಗಿ ನನ್ನ ಬಳಿ ರಸೀದಿ ಕೂಡ ಇದೆ. ಅದನ್ನು ಬೇಕಾದರೆ ಕೊಡುವುದಕ್ಕೆ ತಯಾರಾಗಿದ್ದೇನೆ. ಆದುದರಿಂದ, ಇದರ ಬಗ್ಗೆ ತನಿಖೆ ಮಾಡಿ, ಇಂತಹ ಮಾತ್ರೆಗಳು ಮಾರುಕಟ್ಟೆಗೆ ಬರುವುದನ್ನು ತಡೆಗಟ್ಟಲು ಆದೇಶ ನೀಡಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥಿಸುತ್ತೇನೆ.

ಇನ್ನೊಂದು ಬಹಳ ದುಃಖಕರವಾದ ವಿಷಯವನ್ನು ನಾನಿಲ್ಲಿ ಪ್ರಸ್ತಾಪ ಮಾಡಬೇಕಾಗಿದೆ ನಮ್ಮ ದೇಶದಲ್ಲಿ ಪ್ರತಿಭಾವಂತ ವೈದ್ಯರಿರುವುದೇ ಕಡಿಮೆ. ಬಹಳ ಜನ ಹೊರದೇಶಗಳಿಗೆ ಪಲಾಯನ ಮಾಡಿದ್ದಾರೆ. ದೇಶದ ಹಿತದೃಷ್ಟಿಯಿಂದ ನಮ್ಮ ದೇಶದಲ್ಲೇ ಉಳಿದ ಇಲ್ಲಿನ ಜನರಿಗೆ ಒಳ್ಳೆಯದನ್ನು ಮಾಡಬೇಕೆಂದು ಕೆಲವು ವೈದ್ಯರು ಇಲ್ಲೇ ಉಳಿದಿದ್ದಾರೆ. ಅಂಥವರಲ್ಲಿ ಡಾ. ಶೆಣೈ ಡಾ. ದಾಸ್ ಮತ್ತು ಡಾ. ವಿಠಲ್ ಪ್ರಮುಖರು. ಇಂಥಾ ಪ್ರತಿಭಾವಂತ ವೈದ್ಯರುಗಳನ್ನು ಇಲ್ಲೇ ಇಟ್ಟುಕೊಳ್ಳುವುದರಿಂದ ದೇಶಕ್ಕೂ ಒಳ್ಳೆಯದು ಸರ್ಕಾರಕ್ಕೂ ಒಳ್ಳೆಯದು. ಶ್ರೀ ದಾಸ್ ಅವರನ್ನು ವರ್ಗ ಮಾಡಿದ ಸಂದರ್ಭದಲ್ಲಿ ಅವರು ವಾಲಂಟರಿ ರಿಟೈರ್‌ಮೆಂಟ್‌ಗೆ ಅರ್ಜಿ ಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ. ಅವರ ವಾಲಂಟರಿ ರಿಟೈರ್‌ಮೆಂಟ್ ಅರ್ಜಿಯನ್ನು ಅಂಗೀಕರಿಸಿದರೆ ಕರ್ನಾಟಕದ ಜನತೆಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಇಂದು ಇವರ ಅನೇಕ ಜನ ವಿದ್ಯಾರ್ಥಿಗಳು ವಿದೇಶಗಳಲ್ಲಿ ಕೀರ್ತಿ ತಂದಿದ್ದಾರೆ. ಇಂಥವರನ್ನು ನಿವೃತ್ತರಾಗುವ ಕಾಲದಲ್ಲಿ ಕಷ್ಟಕ್ಕೀಡು ಮಾಡುವುದು ಸರಿಯಲ್ಲ. ಒಂದು ವೇಳೆ ಅಂಥಾ ಪರಿಸ್ಥಿತಿ ಒದಗಿದ್ದೇ ಆದರೆ ಅದರಿಂದ ದೇಶಕ್ಕೂ ಒಳ್ಳೆಯದಾಗುವುದಿಲ್ಲ. ವಿದ್ಯಾರ್ಥಿಗಳಿಗೂ ಒಳ್ಳೆಯದಾಗುವುದಿಲ್ಲ. ಆಸ್ಪತ್ರೆಗೂ ಒಳ್ಳೆಯದಾಗುವುದಿಲ್ಲ. ಇಂಥವರ ಸೇವೆ ನಮಗೆ ಅಗತ್ಯ ಮತ್ತು ಅನಿವಾರ್ಯ. ಇಂಥವರನ್ನು ವರ್ಗ ಮಾಡುವುದು ಒಳ್ಳೆಯದಲ್ಲವೆಂದು ಹೇಳುತ್ತೇನೆ. ಮಾನ್ಯ ವಿಶ್ವನಾಥ್ ಅವರು ಮಹಿಳಾ ವೈದ್ಯೆ ಶ್ರೀಮತಿ ಇಂದಿರಾ ಅವರ ಬಗ್ಗೆ ಹೇಳಿದರು. ಅಂಥವರನ್ನೂ ಕೂಡ ವರ್ಗ ಮಾಡುವುದರಿಂದ ಜನರಿಗೆ ಅನಾನುಕೂಲವಾಗುತ್ತದೆ. ಯಾರಿಗೂ ಒಳ್ಳೆಯದಾಗುವುದಿಲ್ಲ. ಆದುದರಿಂದ, ಮಾನ್ಯ ಸಚಿವರು ಇದನ್ನು ಪರಿಶೀಲಿಸಬೇಕೆಂದು ಪ್ರಾರ್ಥಿಸುತ್ತೇನೆ.

ಬೆಂಗಳೂರಿನಲ್ಲೊಂದು ರಕ್ತ ನಿಧಿ ಕೇಂದ್ರವಿದೆ. ಹಾಗೆಯೇ ಬೇರೆ ಕಡೆ ಕೂಡ ಇರಬಹುದು. ಈ ರಕ್ತ ನಿಧಿ ಕೇಂದ್ರದಲ್ಲಿ ಏನು ಮಾಡುತ್ತಿದ್ದಾರೆಂದರೆ, ರಕ್ತದಲ್ಲಿರುವ ಪ್ಲಾಸ್ಮ ಎನ್ನುವ ವಸ್ತುವನ್ನು ಅದು ನಿರುಪಯೋಗಿ ಎಂದು ಎಸೆಯುತ್ತಿದ್ದಾರೆ. ಆದರೆ, ಪ್ರತಿಭಾವಂತ ವೈದ್ಯರು ಇದನ್ನು ಅಪಘಾತ ಮತ್ತು ಬೆಂಕಿ ಅನಾಹುತಕ್ಕೀಡಾದ ರೋಗಿಗಳಿಗೆ ಉಪಯೋಗಿಸಬಹುದೆಂದು ಹೇಳುತ್ತಾರೆ. ಆದುದರಿಂದ ಅದನ್ನು ಸರಿಯಾಗಿ ಉಪಯೋಗ ಮಾಡದೆ ನಿರುಪಯೋಗಿ ಎಂದು ಎಸೆಯುತ್ತಿರುವುದರಲ್ಲಿ ಅರ್ಥವೂ ಇಲ್ಲ. ಅದನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ನಮ್ಮ ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ.

ಇನ್ನು, ವಿಕ್ಟೋರಿಯಾ ಆಸ್ಪತ್ರೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಅದೃಷ್ಟ ಮಾನ್ಯ ಮೊಯಿಲಿಯವರು ಇಲ್ಲೇ ಇದ್ದಾರೆ. ವಿಕ್ಟೋರಿಯಾ ಆಸ್ಪತ್ರೆ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ಮಾಡಿ, ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಉದ್ಘಾಟನೆ ಕೂಡ ಮಾಡಿದ್ದಾರೆ. ಇದಕ್ಕಾಗಿ, ಪ್ರತ್ಯೇಕ ಕಟ್ಟಡ ನಿರ್ಮಾಣ ವಿಭಾಗ ಬೇಕೆಂದು ಲೋಕೋಪಯೋಗಿ ಇಲಾಖೆಯವರು ಪ್ರತಿ ದಿವಸ ಕೇಳುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದ ಫೈಲು ಇನ್ನೂ ಲೋಕೋಪಯೋಗಿ ಇಲಾಖೆಯಲ್ಲಿದೆಯೋ ಅಥವಾ ಹಣಕಾಸು ಇಲಾಖೆಯಲ್ಲಿದೆಯೋ ನಮಗೆ ಗೊತ್ತಿಲ್ಲ. ಇದಕ್ಕಾಗಿ ಒದಗಿಸಿರುವ ಹಣವನ್ನು ಇನ್ನೂ ಮೂರು ನಾಲ್ಕು ತಿಂಗಳೊಳಗೆ ಉಪಯೋಗಿಸಿಕೊಳ್ಳದಿದ್ದರೆ ಲ್ಯಾಪ್ಸ್ ಆಗುತ್ತದೆ. ಆದುದರಿಂದ, ಹಣ ಲ್ಯಾಪ್ಸ್ ಆಗದ ಹಾಗೆ ನೋಡಿ, ಮಾಸ್ಟರ್ ಪ್ಲಾನ್ ಬೇಗ ಕಾರ್ಯಗತವಾಗುವು ವಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಇನ್ನು, ಬಡ್ಜೆಟ್‌ನಲ್ಲೇ ದೊಡ್ಡ ಲೋಪವಿದೆ ಎಂದು ನನಗನ್ನಿಸುತ್ತದೆ. ಇದರ ಬಗ್ಗೆ ಆರೋಗ್ಯ ಇಲಾಖೆಯವರು ಹಲವಾರು ವರ್ಷಗಳಿಂದ ಗಮನ ಹರಿಸಿಲ್ಲವೆಂದು ತಿಳಿದು ನನಗೆ ಬಹಳ ಆಶ್ಚರ್ಯವಾಯಿತು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕಳೆದ ೫-೬ ವರ್ಷಗಳಿಂದ ಟ್ಯೂಬ್‌ಲೈಟುಗಳನ್ನು ಅಳವಡಿಸಿಲ್ಲ. ಅಲ್ಲಿ ಸರಿಯಾಗಿ ಗಾಳಿ ಮತ್ತು ಬೆಳಕು ಸೌಲಭ್ಯವಿಲ್ಲ, ಸುಣ್ಣ ಬಣ್ಣ ಕೂಡ ಸರಿಯಾಗಿ ಹೊಡೆದಿಲ್ಲ; ನಾನು ವಿಕ್ಟೋರಿಯಾ ಆಸ್ಪತ್ರೆಯ ಸಂದರ್ಶಕ ಸಮಿತಿಯ ಅಧ್ಯಕ್ಷೆಯಾದ ಮೇಲೆ ಈ ಬಗ್ಗೆ ಕೇಳಿದಾಗ, ಏನು ಮಾಡುವುದು, Maintenanc Grants ನಮಗೆ ಕೊಟ್ಟೇ ಇಲ್ಲ. ಇನ್ನು ಹೇಗೆ ನಾವು maintain ಮಾಡುವುದು ಎಂದು ಅಲ್ಲಿನ ಅಧಿಕಾರಿಗಳು ಹೇಳಿದರು. ಇಡೀ ಕರ್ನಾಟಕದಲ್ಲಿರುವ ಎಲ್ಲ ಆಸ್ಪತ್ರೆಗಳನ್ನೂ ಮೇಂಟೇನ್ ಮಾಡಲು ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆಂದು ನಾನು ಕೇಳಿದೆ. ಆದರೆ, ಐದು ಲಕ್ಷ ರೂಪಾಯಿಗಳು ವಿಕ್ಟೋರಿಯಾ ಆಸ್ಪತ್ರೆಗೆ ಅದು ಒಂದು ವರ್ಷಕ್ಕೆ ಬೇಕಾಗುತ್ತದೆ. ಅಂಥಾದ್ದರಲ್ಲಿ ಇಡೀ ರಾಜ್ಯಕ್ಕೇ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿದರೆ ಅದು ಸಾಕೆ? ಕ್ಷ-ಕಿರಣ ಯಂತ್ರ ಕೆಟ್ಟು ಹೋದರೆ ಅವನ್ನು ದುರಸ್ತು ಮಾಡಿಸುವುದಕ್ಕೆ ಹಣವಿರುವುದಿಲ್ಲ. ಟ್ಯೂಬ್‌ಲೈಟ್ ಒಡೆದರೆ ಅದನ್ನು ಬದಲಾಯಿಸಲು ಹಣವಿಲ್ಲವೆಂದರೆ ರೋಗಿಗಳಿಗೆ ಇನ್ನೇನು ಸೌಲಭ್ಯವನ್ನು ನಾವು ನೀಡಿದಂತಾಗುತ್ತದೆ ಎಂದು ಕೇಳಬಯಸುತ್ತೇನೆ. ಆದುದರಿಂದ ಇನ್ನು ಮುಂದಾದರೂ ಇವನ್ನೆಲ್ಲ ಸರಿಪಡಿಸಿ, ಪ್ರತಿಯೊಂದು ಆಸ್ಪತ್ರೆಗೂ ಮೇಂಟೇನೆನ್ಸ್‌ಗೆ ಎಷ್ಟು ಬೇಕೋ ಅಷ್ಟನ್ನು ಬಡ್ಜೆಟ್ಟಿನಲ್ಲಿ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ, ಮಹಿಳಾ ವೈದ್ಯೆ ಶ್ರೀಮತಿ ಅನ್ನಪೂರ್ಣ ಅವರು ಎಂ.ಡಿ ಗೆ ಸೀಟು ಸಿಗದಿದ್ದಾಗ ಶ್ರೇಷ್ಟ ನ್ಯಾಯಾಲಯಕ್ಕೆ ರಿಟ್ ಹೋಗಿ ಅಲ್ಲಿಂದ ಅವರಿಗೆ ಸೀಟನ್ನು ಕೊಡಬೇಕೆಂದು ಆದೇಶ ತಂದರು. ಆದರೆ, ನಿರ್ದೇಶಕರು ನ್ಯಾಯಾಲಯದಿಂದ ಆದೇಶ ಬಂದರೆ ಏತಕ್ಕೆ ಕೊಡಬೇಕೆಂದು ಹೇಳಿ, ಕಳೆದ ಒಂದೂವರೆ ವರ್ಷದಿಂದ ಸರ್ಕಾರದ ಖರ್ಚಿನಲ್ಲಿ ಡಿಪ್ಲೋಮಾ ಓದುತ್ತಿದ್ದ ಶ್ರೀಮತಿ ಉಮಾದೇವಿ ಎನ್ನುವ ಹುಡುಗಿಗೆ ಡಿಪ್ಲೋಮಾ ಬಿಡಿಸಿ, ಕರೆದುಕೊಂಡು ಬಂದು ಎಂ.ಡಿ. ಗೆ ಸೀಟು ಕೊಟ್ಟಿದ್ದಾರೆ. ಇದರ ಔಚಿತ್ಯವೇನು? ನ್ಯಾಯಾಲಯದಿಂದ ಆದೇಶ ಬಂದಾಗ, ಒಂದುವರೆ ವರ್ಷದಿಂದ ಡಿಪ್ಲೋಮಾ ಮಾಡುತ್ತಿದ್ದ ಹುಡುಗಿಯನ್ನು ಆಕೆಗೂ ಮೆರಿಟ್ ಇದೆ ಎಂದು ಕರೆದುಕೊಂಡು ಬಂದು ಸೀಟು ಕೊಟ್ಟಿರುವುದರಿಂದ ಸರ್ಕಾರದ ಹಣ ವ್ಯರ್ಥವಾಗುವುದಿಲ್ಲವೆ? ಇಬ್ಬರಿಗೂ ಅನುಕೂಲವಾಗುತ್ತಿದ್ದ ಸಂದರ್ಭದಲ್ಲಿ ಒಬ್ಬರಿಗೆ ಕೊಟ್ಟು ಇನ್ನೊಬ್ಬರಿಗೆ ಕೊಡದೆ ಇರುವ ಹಾಗೆ ಮಾಡಿರುವುದರ ಔಚಿತ್ಯವಾದರೂ ಏನು? ಇದರ ಬಗ್ಗೆ ಮಾನ್ಯ ಸಚಿವರು ಯೋಚನೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಡೆಂಟಲ್ ಕಾಲೇಜು ಬಗ್ಗೆ ಒಂದು ಮಾತು ಹೇಳುತ್ತೇನೆ.

ಉಪಾಧ್ಯಕ್ಷರು.—ತಾವು ಬೇಗ ಮುಗಿಸಬೇಕು......

ಶ್ರೀಮತಿ ಎಸ್. ಪ್ರಮೀಳಾ.—ಇನ್ನು ಮೂರು ನಿಮಿಷದಲ್ಲಿ ಮುಗಿಸುತ್ತೇನೆ. ಜಾಸ್ತಿ ತೆಗೆದುಕೊಳ್ಳುವುದಿಲ್ಲ. ಮಾನ್ಯ ಅಧ್ಯಕ್ಷರೇ ಡೆಂಟಲ್ ಟೆಕ್ನೀಷಿಯನ್ಸ್‌ಗೆ ೧೯೮೦ರಲ್ಲಿ ತೆಗೆದುಕೊಂಡಿದ್ದಾರೆ, ಸರ್ಕಾರದ ಆಜ್ಞೆಯಂತೆ ಅವರಿಗೆ ೭೫ ರೂಪಾಯಿ ಸ್ಟೈಫಂಡ್ ಕೊಡಬೇಕು ; ಆದರೆ, ಇಲ್ಲಿ ಇದುವರೆವಿಗೂ ಕೊಟ್ಟಿಲ್ಲ, ಏತಕೋಸ್ಕರ ಕೊಟ್ಟಿಲ್ಲ ? ಇದಕ್ಕೆ ಯಾರು ಅಡ್ಡಿ ಬರುತ್ತಿದ್ದಾರೆ ? ಅಧಿಕಾರಿಗಳು

ಏನಾದರೂ ಅಡ್ಡಿ ಬರುತ್ತಿದ್ದರೆ, ಅಂತವರ ಮೇಲೆ ತಕ್ಷಣ ಕ್ರಮ ಏತಕ್ಕೆ ತೆಗೆದುಕೊಂಡಿಲ್ಲವೆಂದು ಕೇಳು ತ್ತೇನೆ. ಸ್ವಾಮಿ, ಸ್ಟೈಫಂಡ್ ಕೊಡದೇ ಹೋದರೆ ಟೆಕ್ನೀಷಿನ್ಸ್ ಯಾವರೀತಿ ಕೆಲಸ ಮಾಡುತ್ತಾರೆಂಬು ದನ್ನು ತಾವು ಯೋಚನೆ ಮಾಡಬೇಕು.

ಮಾನ್ಯ ಅಧ್ಯಕ್ಷರೇ, ಆಕ್ಯುಪೇಷನ್ ತೆರೋಫಿ, ಫೀಸಿಯೋ ತೆರೋಫಿ ಇನ್ನಿತರ ಕೋರ್ಸುಗಳು ಡಾ॥ ಆಫೀಸ್‌ರವರು ಇದ್ದಾಗ ಇದ್ದವು, ಇವತ್ತು ಇವೆಲ್ಲವನ್ನು ಮುಚ್ಚಿದ್ದಾರೆ. ನನ್ನ ಸ್ವಂತ ಅನುಭವ ದಿಂದ ಹೇಳುತ್ತಿದ್ದೇನೆ. ಇವತ್ತು ಇಂಥ ಡಿಪಾರ್ಟ್‌ಮೆಂಟುಗಳನ್ನು ಮಾಡಿದ್ದರ ಔಚಿತ್ಯವೇನು ? ಮುಚ್ಚಿದ್ದರ ಔಚಿತ್ಯವೇನು ? ಒಳ್ಳೆಯ ಡಿಪಾರ್ಟ್‌ಮೆಂಟ್‌ಗಳಾದ ಆಕ್ಯುಪೇಷನ್ ತೆರೋಫಿ, ರಿಯಾಬಿ ಟೇಷನ್ ತೆರೋಫಿ ಕೋರ್ಸ್ಸುಗಳನ್ನು ತೆಗೆಯುವುದಕ್ಕೆ ಅವಕಾಶ ಕೊಡಬೇಕೆಂದು ಒತ್ತಾಯ ಮಾಡು ತ್ತೇನೆ. ಸ್ವಾಮಿ, ಆಸ್ಪತ್ರೆಗಳಲ್ಲಿರತಕ್ಕ ಡಿಪಾರ್ಟ್‌ಮೆಂಟ್ ನರ್ಸ್‌ಗಳು ಯೂನಿಫಾರಂ ಹಾಕಿಕೊಂಡು ಮುಷ್ಕರ ಮಾಡತಕ್ಕ ಪರಿಸ್ಥಿತಿ ಬರುತ್ತೆ ಎಂದು ಹೇಳುತ್ತೇನೆ. ೧೯೭೪ರಿಂದ ನರ್ಸಿಂಗ್ ಕೌನ್ಸಿಲ್‌ವನ್ನು ಪುನರಚಿಸಿಲ್ಲ, ಇದಕ್ಕೆ ಕಾರಣವೇನು ? ನರ್ಸಿಂಗ್ ಕೌನ್ಸಿಲ್‌ಗೆ ಸೂಪರಿಂಟೆಂಡಿಂಗ್ ಪೋಸ್ಟ್ ಮಾಡಿಲ್ಲ, ಖಾಲಿ ಇರತಕ್ಕ ಜಾಗಗಳನ್ನು ಭರ್ತಿ ಮಾಡಿಲ್ಲ. ೭೪ನೇ ಇಸವಿಯಿಂದ ರೀ ಪರಿಯಂಟೇಷನ್ ಕೋರ್ಸ್ ಕೂಡ ನಿಲ್ಲಿಸಿದ್ದಾರೆ. ಇದಕ್ಕೆ ಕಾರಣ ಏನು ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ವಾರ್ಡ ಬಾಯ್ಸ್‌ಗಳಿಗೆ ರೋಗಿಗಳಿಗೆ ಯಾವ ರೀತಿ ಟ್ರೀಟ್‌ಮೆಂಟ್ ಮಾಡಬೇಕೆಂಬುದು ಗೊತ್ತಿಲ್ಲ. ಇವರಿಗಾಗಿ ಮೂರು ತಿಂಗಳ ತರಭೇತಿ ಕೋರ್ಸ್ಸು ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ. ರೋಗಿಗಳಿಗೆ ಸಂಬಂಧಪಟ್ಟಂತೆ, ಅಮೇರಿಕಾದಲ್ಲಿ ಪೇಷೆಂಟ್ ರೈಟ್ ಆಕ್ಟ್ ಜಾರಿಗೆ ತಂದಿದ್ದಾರೆ. ಇತ್ತೀಚೆಗಂತೂ ರೋಗಿಗಳನ್ನು ಡಾಕ್ಟರುಗಳು ಸರಿಯಾಗಿ ನೋಡಿಕೊಳ್ಳುವುದಿಲ್ಲವೆಂಬ ದೂರು ದಿನ ಬೆಳಿಗ್ಗೆ ಕೇಳುತ್ತಿದ್ದೇವೆ. ಇತ್ತೀಚೆಗೆ ಡೆಂಟಲ್ ಕಾಲೇಜಿನಲ್ಲಿ ಆದಂತ ಅನುಭವವನ್ನು ನೋಡಿದಮೇಲೆ ಇಂಥ ಒಂದು ಆಕ್ಟ್ ಅವಶ್ಯಕತೆ ಇದೆ ಎಂದು ನಮಗನಿಸುತ್ತದೆ. ರೋಗಿಗಳ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವ ಸಲುವಾಗಿ, ಅವರ ಪ್ರಾಣವನ್ನು ರಕ್ಷಣೆ ಮಾಡುವ ಸಲುವಾಗಿ ಇಂಥ ಒಂದು ಕಾನೂನು ತಂದರೆ, ವೈದ್ಯರುಗಳು ರೋಗಿಗಳನ್ನು ಚನ್ನಾಗಿ ನೋಡಿಕೊಳ್ಳುತ್ತಾರೆ, ನರ್ಸುಗಳು ಕೂಡ ರೋಗಿಗಳಿಗೆ ಒಳ್ಳೆಯ ಉಪಚಾರ ಮಾಡುತ್ತಾರೆ. ಯಾವ ರೋಗಿಗೆ ಯಾವ ಔಷದಿ ಕೊಡಬೇಕು, ಎನ್ನುವ ಬಗ್ಗೆ ವೈದ್ಯರುಗಳು ಎಚ್ಚರಿಕೆಯಿಂತಿರುತ್ತಾರೆ. ಇದರಿಂದ ರೋಗಿಗಳು ಸಾಯುವುದು ತಪ್ಪುತ್ತೆ. ಮಾನ್ಯ ಸಚಿವರು ಈ ವಿಚಾರದಲ್ಲಿ ಒಂದು ಕಾನೂನು ತರಿಬೇಕೆಂದು ಹೇಳಿ, ನನಗೆ ಮಾತ ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ. ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಆರ್. ರಾಜು ಗೌಡ (ಹನೂರು).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಆರ್ಥಿಕ ಸಚಿವರು ಸದನದಮುಂದೆ ಮುಂಡಿಸಿರತಕ್ಕಂಥ ಬೇಡಿಕೆಯನ್ನು ಸಮರ್ಥಿಸುತ್ತಾ, ಒಂದೆರಡು ಮಾತುಗಳನ್ನು ಆಡಲಿಕ್ಕೆ ಇಚ್ಛಿಸುತ್ತೇನೆ. ಒಂದು ರಾಷ್ಟ್ರದ, ಒಂದು ರಾಜ್ಯದ ನಿಜವಾದ ಆಸ್ತಿ ಯಾವುದೆಂದರೆ ಆಯಾಯಾ ದೇಶಗಳಲ್ಲಿರತಕ್ಕ. ರಾಜ್ಯಗಳಲ್ಲಿರತಕ್ಕ ಸುಂದರವಾದ ಮಹಡಿಯ ಮನೆಗಳಯಲ್ಲ, ದೊಡ್ಡ ದೊಡ್ಡ ಕಾರ್ಖಾನೆಗಳಲ್ಲ. ವಜ್ರ ವೈಢೂರ್ಯಗಳಲ್ಲ. ದೇಶದ ಸಂಪತ್ತನ್ನು ಪ್ರಾಮಾಣಿಕವಾಗಿ ಉಳಿಸಿ ಕೊಳ್ಳುವಂತ ರೈತರು ಮತ್ತು ಕಾರ್ಮಿಕ ವರ್ಗ ನಿಜವಾದ ಆಸ್ತಿ. ಸರ್ಕಾರದವರು ಈ ಒಂದು ವರ್ಗದ ಜನಗಳ ಮೇಲೆ ವಿಶೇಷವಾದ ಗಮನಹರಿಸಬೇಕು ಕೇವಲ ದೊಡ್ಡ ದೊಡ್ಡ ಪಟ್ಟಣಗಳಿಗೆ, ನಗರಗಳಿಗೆ, ತಾಲ್ಲೂಕು ಕೇಂದ್ರಗಳಿಗೆ ವೈದ್ಯಕೀಯ ಸೌಲಭ್ಯವನ್ನು ಸೀಮಿತಗೊಳಿಸದೆ, ರಾಜ್ಯದಲ್ಲಿನ ಹಳ್ಳಿಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಬೇಕೆಂದು ಒತ್ತಾಯ ಮಾಡುತ್ತೇನೆ. ಸ್ವಾಮಿ, ವಿಕ್ಟೋರಿಯಾ ಆಸ್ಪತ್ರೆಗೆ ಒಂದು ದಿವಸಕ್ಕೆ ಎರಡು ಸಾವಿರ ಜನ ಹೊರ ರೋಗಿಗಳು ಬರುತ್ತಾ ರೆಂದು ಹೇಳುತ್ತೀರಿ, ನಾನು ಕೇಳುತ್ತೇನೆ. ಎರಡು ಸಾವಿರ ರೋಗಿಗಳನ್ನು ವೈದ್ಯರುಗಳು ಪರೀಕ್ಷೆ ಮಾಡುವುದಕ್ಕಾಗುತ್ತದೆಯೆ ? ಎಷ್ಟು ಕಾಲವನ್ನು ತೆಗೆದುಕೊಳ್ಳುತ್ತಾರೆ ? ಹೊರ ರೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದೆಯೆ ? ನನ್ನ ದೊಂದು ಸಲಹೆ, ಸಣ್ಣಪುಟ್ಟ ಕಾಯಿಲೆಗಳಿಗಾಗಿ ಗ್ರಾಮಾಂತರದಿಂದ ಬರತಕ್ಕ ಜನತೆಯನ್ನು ತಡೆಗಟ್ಟಿ, ಅಂತ ಕಾಯಿಲೆಗಳಿಗೆ ಗ್ರಾಮಾಂತರ ಮಟ್ಟದಲ್ಲಿಯೇ ಚಿಕಿತ್ಸೆ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳು ತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕಮ್ಯೂನಿಟಿ ಹೆಲ್ತ್ ಸೆಂಟರ್‌ಗಳಲ್ಲಿ ಚಿಕಿತ್ಸೆ ನೀಡುವಂತ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈ ರೀತಿ ಮಾಡುವುದರಿಂದ ನಗರಗಳಿಗೆ ಬರತಕ್ಕ ರೋಗಿಗಳ

ಸಂಖ್ಯೆಯನ್ನು ಕಡಿಮೆ ಮಾಡಬಹುದೆಂದು ಹೇಳುತ್ತೇನೆ. ನಗರ ಪ್ರದೇಶಗಳಲ್ಲಿ, ಮತ್ತು ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ, ಹೊರರೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡಿದರೆ, ಒಳ ರೋಗಿಗಳ ಬಗ್ಗೆ ಹೆಚ್ಚಿನ ನಿಗಾ ಕೊಡಲು ವೈದ್ಯರುಗಳಿಗೆ ಅನುಕೂಲವಾಗುತ್ತದೆ. ಇದರಿಂದ ಒಂದು ವಾರ ಇರತಕ್ಕ ಒಳರೋಗಿ, ೨೪ ಗಂಟೆಯಲ್ಲಿ ಉಪಚಾರ ಪಡೆದು ಕಾಯಿಲೆ ವಾಸಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಹೊರರೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ೧೯೮೦-೮೧ನೇ ಇಸವಿಯಲ್ಲಿ ಆರೋಗ್ಯ ಇಲಾಖೆ ಮಹತ್ವದ ಕಾರ್ಯಗಳನ್ನು ಮಾಡಿದೆಯೆಂದು ಹೇಳುತ್ತೇನೆ. ಅನೇಕ ಕಾರ್ಯಕ್ರಮಗಳನ್ನು ಸಾಧನೆ ಮಾಡಿದ್ದಾರೆ. ಸಾಧನೆಗಳ ಪ್ರತಿಷ್ಠೆ ನಿಜವಾಗಿಯೂ ಸಮದ್ ಸಾಹೇಬರಿಗೆ ಸಲ್ಲಬೇಕು. ಇದರಲ್ಲಿರತಕ್ಕ ದೊಡ್ಡಪಟ್ಟಿಯನ್ನು ಹೇಳದೆ ಮುಖ್ಯವಾಗಿರತಕ್ಕ ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ೮೦-೮೧ರಲ್ಲಿ ಸುಮಾರು ೩೧ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿದ್ದಾರೆ. ೧೦೦ ಎ. ಎನ್. ಎಂ. ಉಪ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದಾರೆ. ೨೨ ವೈದ್ಯಕೀಯ ಆಸ್ಪತ್ರೆಗಳಲ್ಲಿರತಕ್ಕ ಹಾಸಿಗೆಗಳ ಸಂಖ್ಯೆಯನ್ನು ೩೦ ರಿಂದ ೫೦ಕ್ಕೆ ಹೆಚ್ಚಿಸಿದ್ದಾರೆ; ೬೧ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡಿದ್ದಾರೆ. ಮಲೇರಿಯಾ ರೋಗಕ್ಕೆ ಹೊಸ ರೀತಿಯಾ ಚಿಕಿತ್ಸೆಕೊಡುವ ವಿಧಾನವನ್ನು ಕಂಡುಹಿಡಿದು, ಮಲೇರಿಯಾ ನಿಯಂತ್ರಣ ಮಾಡಲು ೧೩ ಜಿಲ್ಲಾ ಕೇಂದ್ರದ ಆಸ್ಪತ್ರೆಗಳಲ್ಲಿ ಸಿಬ್ಬಂದಿಯನ್ನು ಹೆಚ್ಚಿಸಿದ್ದಾರೆ. ಹಾಸನದಲ್ಲಿ ಅರ್ಬನ್ ಮಲೇರಿಯಾ ಸೆಂಟರ್‌ನ್ನು ವಿಸ್ತರಿಸಲಾಗಿದೆ. ಗುಲ್ಬರ್ಗದಲ್ಲಿ ಕಾಲರಾ ಕಂಬ್ಯಾಕ್ಟ್ ಸ್ಕೀಂನ್ನು ಮಂಜೂರು ಮಾಡಿದ್ದಾರೆ. ಕಾಲರಾ ನಿಯಂತ್ರಣಕ್ಕಾಗಿ ೧೦೫ ಪ್ರಾಥಮಿಕ ಕೇಂದ್ರಗಳಿಗೆ, ೧೩ ಜಿಲ್ಲಾ ಆಸ್ಪತ್ರೆಗಳಿಗೆ ಉಪಕರಣಗಳನ್ನು ಒದಗಿಸಿದ್ದಾರೆ ಇದರ ನಿವಾರಣೆಗಾಗಿ ಕೇಂದ್ರದಿಂದ ಬರತಕ್ಕ ಸಂಪೂರ್ಣವಾದ ಹಣವನ್ನು ಯಾವುದೇರೀತಿಯಲ್ಲಿ ಲ್ಯಾಪ್ಸ್ ಆಗದಹಾಗೆ ಉಪಯೋಗಿಸಿಕೊಂಡು ಹೆಚ್ಚಿನಮಟ್ಟದಲ್ಲಿ ಜನತೆಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಅಂದತ್ವಕ್ಕೆ ಮುಖ್ಯವಾದ ದೋಷ 'ಎ' ಅನ್ನಾಂಗ ಕೊರತೆಯಿರುವುದು. ಇದರ ನಿವಾರಣೆಗೆ, ನುಗ್ಗೆ ಸೊಪ್ಪು, ನುಗ್ಗೆಕಾಯಿ ಹೆಚ್ಚು ಉಪಯೋಗಿಸುವುದರಿಂದ ಅಂಧತ್ವ ನಿವಾರಣೆ ಮಾಡಬಹುದು. ಇವತ್ತು ರಾಜ್ಯದಲ್ಲಿ ೩೦-೪೦ ಸಾವಿರ ಮಕ್ಕಳು ಈ ಬೇನೆಗೆ ತುತ್ತಾಗಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ವ್ಯವಸ್ಥಿತವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

೫—೦೦ ಪಿ. ಎಂ.

ಅಧ್ಯಕ್ಷರೆ, ಕುಷ್ಠ ರೋಗವನ್ನು ನಿಯಂತ್ರಣ ಮಾಡಲಿಕ್ಕೆ ನೂರಕ್ಕೆ ನೂರರಷ್ಟು ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ. ಆದರೂ ಕೂಡ ತಾವು ರಾಜ್ಯದಲ್ಲಿ ಎಷ್ಟು ಜನ ಕುಷ್ಠ ರೋಗಿಗಳು ಇದ್ದಾರೆ ಎನ್ನುವುದನ್ನು ಪತ್ತೆ ಹಚ್ಚಿ ಪರಿಪೂರ್ಣವಾಗಿ ಅವರಿಗೆ ವೈದ್ಯಕೀಯ ಸೌಲಭ್ಯವನ್ನು ಕೊಡಲಿಕ್ಕೆ ಏತಕ್ಕೆ ಸಾಧ್ಯವಾಗಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಇದಕ್ಕೆ ನಮ್ಮ ರಾಜ್ಯ ಸರ್ಕಾರದವರು ಏನೂ ಹಣವನ್ನು ಖರ್ಚು ಮಾಡುತ್ತಾ ಇಲ್ಲ. ಇದಕ್ಕೆ ಆಗತಕ್ಕ ಖರ್ಚು ಕೇಂದ್ರ ಸರ್ಕಾರದವರೇ ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರ ಕೊಡತಕ್ಕ ಹಣವನ್ನು ಉಪಯೋಗಿಸಿಕೊಂಡು ಎಷ್ಟು ಜನ ಈ ಕುಷ್ಠ ರೋಗದಲ್ಲಿ ನರಳುತ್ತಿದ್ದಾರೆ ಅವರನ್ನು ಪರೀಕ್ಷೆ ಮಾಡಿಸಿ ಅವರಿಗೆ ಸರಿಯಾದಂಥ ರೀತಿಯಲ್ಲಿ ವೈದ್ಯಕೀಯ ಚಿಕಿತ್ಸೆ ಕೊಟ್ಟು ಈ ರೋಗವನ್ನು ನಿಯಂತ್ರಣ ಮಾಡಲಿಕ್ಕೆ ಸಾಧ್ಯವಿಲ್ಲವೇ ಎಂದು ತಮ್ಮಲ್ಲಿ ಪ್ರಶ್ನೆ ಹಾಕಬೇಕಾಗಿದೆ. ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ವರ್ಷ ಸ್ವಲ್ಪ ಸಂಖ್ಯೆಯನ್ನು ಜಾಸ್ತಿ ಮಾಡಿರಬಹುದು. ಆದರೂ ಕೂಡ ಇನ್ನೂ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕುಷ್ಠ ರೋಗಿಗಳು ನಮ್ಮ ವೈದ್ಯಕೀಯ ಸೌಲಭ್ಯದಿಂದ ಹೊರಗೆ ನಿಂತಿದ್ದಾರೆ. ಅವರೆಲ್ಲರಿಗೂ ತಾವು ವೈದ್ಯಕೀಯ ಸೌಲಭ್ಯವನ್ನು ಕೊಡಲಿಕ್ಕೆ ಏರ್ಪಾಡು ಮಾಡಬೇಕು. ಈಗ ಕೇಂದ್ರ ಸರ್ಕಾರ ಈ ಬಗ್ಗೆ ಸಾಕಷ್ಟು ಹಣ ಕೊಡುತ್ತಿರುವುದರಿಂದ, ಈ ಕಷ್ಠ ರೋಗ ಹೆಚ್ಚು ಹರಡದಂತೆ ತಡೆಗಟ್ಟಲಿಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಆರೋಗ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಸಂಚಾರಿ ಆಸ್ಪತ್ರೆಗಳ ವಿಷಯದ ಬಗ್ಗೆ ಎರಡು ಮೂರು ವಿಷಯಗಳನ್ನು ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಸ್ವಾಮಿ, ತಾವು ಕೇವಲ ಮೂರು ಡಿವಿಜನ್‌ಗಳಲ್ಲಿ ಮಾತ್ರ ಈ ಒಂದು ಸಂಚಾರಿ ಆಸ್ಪತ್ರೆ

ಗಳ ವ್ಯವಸ್ಥೆಯನ್ನು ಮಾಡಿದ್ದೀರಿ. ತಾವು ಅಷ್ಟು ಮಾತ್ರ ಮಾಡಿದರೆ ಸಾಲದು. ಅದು ತಾಲ್ಲೂಕು ಮಟ್ಟದಿಂದ ಹಳ್ಳಿಗಳ ಮಟ್ಟದವರೆಗೂ ಆ ಪದ್ಧತಿ ಜಾರಿಗೆ ಬರಬೇಕು ಏಕೆಂದರೆ ಹೆಚ್ಚಿಗೆ ರೋಗಿಗಳು ಬರತಕ್ಕದ್ದು ಗ್ರಾಮಾಂತರ ಪ್ರದೇಶಗಳಿಂದ. ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ರೋಗಿಗಳನ್ನು ಅಲ್ಲಿಯೇ ತಡೆಗಟ್ಟುವುದಾದರೆ, ಜಿಲ್ಲಾಮಟ್ಟದಲ್ಲಿ, ತಾಲೂಕುಮಟ್ಟದಲ್ಲಿ ವೈದ್ಯಕೀಯ ಸೌಲಭ್ಯವನ್ನು ಕೇವಲ ಜಾಸ್ತಿ ಕಾಯಿಲೆ ಇರತಕ್ಕಂತಹವರಿಗೆ ಮಾತ್ರ ನೀಡಲಿಕ್ಕೆ ಸಾಧ್ಯವಾಗುತ್ತದೆ. ಗ್ರಾಮಾಂತರ ಪ್ರದೇಶದ ಜನರೆಲ್ಲರೂ ಜಿಲ್ಲಾಮಟ್ಟಗಳಿಗೆ ಬಂದು ಸೇರಿಕೊಂಡರೆ ಆಗ ಎಲ್ಲಾ ರೋಗಿಗಳನ್ನು ನೋಡಲಿಕ್ಕೆ ಬಹಳ ಕಷ್ಟವಾಗುತ್ತದೆ. ಆದುದರಿಂದ, ತಾಲೂಕು ಮಟ್ಟದಲ್ಲಿ ಮತ್ತು ಗ್ರಾಮಮಟ್ಟದಲ್ಲಿ ರೋಗಿಗಳನ್ನು ತಡೆಗಟ್ಟಲಿಕ್ಕೆ ತಾಲೂಕು ಮಟ್ಟದಿಂದ ಗ್ರಾಮಾಂತರ ಪ್ರದೇಶಗಳ ಮಟ್ಟದವರೆಗೂ ಸಂಚಾರಿ ಆಸ್ಪತ್ರೆಗಳ ವ್ಯವಸ್ಥೆಯನ್ನು ಮಾಡಬೇಕಂದು ಮಾನ್ಯ ಆರೋಗ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನೂ ತಾಲೂಕು ಮಟ್ಟದಲ್ಲಿ ವಿಸಿಟರ್ಸ್ ಕಮಿಟಿಯನ್ನು ಮಾಡುವ ಬಗ್ಗೆ ಹೇಳಿದ್ದೀರಿ. ಇದು ಬಹಳ ಒಳ್ಳೆಯದು. ಪ್ರತಿಯೊಂದು ತಾಲೂಕು ಕೇಂದ್ರದಲ್ಲಿರತಕ್ಕ ಒಬ್ಬ ಡಾಕ್ಟರ್ ತಾನು ಇರತಕ್ಕ ಜಾಗದಿಂದ ಸುತ್ತ ೫ ಕಿಲೋ ಮೀಟರ್ ಇರತಕ್ಕಂತಹ ಹಳ್ಳಿಗಳಿಗೆ ಒಂದು ವಾರಕ್ಕೆ ಎರಡು ಮೂರು ಸಾರಿ ಭೇಟಿ ಕೊಟ್ಟು ಅಲ್ಲಿರತಕ್ಕ ರೋಗರುಜಿನಗಳನ್ನು ಪತ್ತೆ ಹಚ್ಚಿ ಎಳೆಯ ವಯಸ್ಸಿನಲ್ಲಿಯೇ ರೋಗವನ್ನು ತಡೆಗಟ್ಟಲಿಕ್ಕೆ ಸಾಧ್ಯವಿದೆ. ಈ ರೀತಿ ಗ್ರಾಮ ಮಟ್ಟದಲ್ಲಿ ಹೋಬಳಿ ಮಟ್ಟದಲ್ಲಿ ಇರತಕ್ಕ ರೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡಿದರೆ ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಚೆನ್ನಾಗಿ ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ. ಇನ್ನು ತಾಲೂಕು ಮಟ್ಟದಲ್ಲಿ ವಿಸಿಟರ್ಸ್ ಕಮಿಟಿ ಮಾಡಲು ಏನು ತೀರ್ಮಾನ ಮಾಡಿದ್ದೀರಿ ಅದನ್ನು ಬೇಗ ಮಾಡುವುದು ಒಳ್ಳೆಯದು ತಾವು ಆದಷ್ಟು ಬೇಗ ಈ ಕಮಿಟಿ ಮಾಡುವುದರಿಂದ ಅಲ್ಲಿರತಕ್ಕ ಡಾಕ್ಟರುಗಳು ಯಾವರೀತಿಯಲ್ಲಿ ಕೆಲಸ ಮಾಡುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಈ ಸಂದರ್ಭದಲ್ಲಿ ನಾನು ತಮಗೆ ಒಂದು ನಿದರ್ಶನ ಹೇಳಬೇಕು ಎಂದರೆ ನಮ್ಮ ಭಾಗದಲ್ಲಿ ಒಬ್ಬ ಡಾಕ್ಟರು ಇದ್ದಾರೆ ಅವರ ಹೆಸರನ್ನು ಹೇಳುವುದು ಬೇಡ. ಆತ ದುಡ್ಡು ಸಂಪಾದನೆ ಮಾಡುವುದೆಲ್ಲ ಕೆಲಸ. ಆತ ಏನು ಮಾಡುತ್ತಾನೆ ಎಂದರೆ ಜನರನ್ನು ಆಕರ್ಷಣೆ ಮಾಡಲಿಕ್ಕೆ ಅದೆಂತದೋ ಒಂದು ಮಿಷಿನ್ ಇಟ್ಟುಕೊಂಡಿದ್ದಾನೆ. ಯಾರೇ ರೋಗಿಗಳು ಬರಲಿ ನಿಮಗೆ ಹೃದಯ ಪರೀಕ್ಷೆ ಮಾಡಬೇಕೆಂದು ಹೇಳಿ, ಮನೆಗೆ ಕರೆದುಕೊಂಡು ಹೋಗಿ ಹಾಸಿಗೆಯ ಮೇಲೆ ಮಲಗಿಸಿ ಏನೋ ಕೈಗೆ ಕಟ್ಟಿಬಿಟ್ಟು ಸುಮಾರು ೪೦ – ೫೦ ರೂಪಾಯಿ ಕಿತ್ತುಕೊಳ್ಳುತ್ತಾರೆ. ಆತ ಆಸ್ಪತ್ರೆಯಲ್ಲಿದ್ದುಕೊಂಡು ಕೆಲಸ ಮಾಡುವುದು ಬಿಟ್ಟು ಈ ರೀತಿಯ ದುರ್ವ್ಯವಹಾರ ಮಾಡುತ್ತಿದ್ದಾನೆ. ಆದುದರಿಂದ, ತಾವು ವಿಸಿಟರ್ಸ್ ಕಮಿಟಿ ಮಾಡಿದರೆ ಡಾಕ್ಟರುಗಳು ಮಾಡತಕ್ಕ ಅವ್ಯವಹಾರವನ್ನು ಪತ್ತೆ ಹಚ್ಚಿ ಸಮಿತಿಯಲ್ಲಿ ಪ್ರಸ್ತಾಪ ಮಾಡತಕ್ಕ ಸನ್ನಿವೇಶ ಬರುತ್ತದೆ. ಈಗ ನಡೆಯುತ್ತಿರುವ ಅವ್ಯವಹಾರಗಳಿಗೆ ಮಾನ್ಯ ಸಚಿವರು ಅವಕಾಶ ಕೊಡಬೇಡಿ, ಈ ಅವ್ಯವಹಾರಗಳನ್ನು ನಿಲ್ಲಿಸಬೇಕಾದರೆ ತಾವು ಕೂಡಲೇ ತಾಲೂಕು ಮಟ್ಟದಲ್ಲಿ ವಿಸಿಟರ್ಸ್ ಕಮಿಟಿಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಎಕ್ಸ್‌ರೇ ಮೆಷಿನ್, ಹಾಗೂ ವೈದ್ಯಕೀಯ ಉಪಕರಣಗಳನ್ನು ರಿಪೇರಿ ಮಾಡತಕ್ಕಂಥ ಒಂದು ಘಟಕವನ್ನು ಮಂಜೂರು ಮಾಡಿರತಕ್ಕದ್ದು, ಕಲಬೆರಕೆ ಆಹಾರವನ್ನು ತಡೆಗಟ್ಟಲು ಒಂದು ಸಂಕಲ್ಪ ಮಾಡಿ ಕ್ರಮ ಕೈಗೊಂಡಿರತಕ್ಕದ್ದು ಬಹಳ ಸಂತೋಷ. ಇನ್ನು ಹೊರರೋಗಿಗಳು ಕೊಡಬೇಕಾಗಿದ್ದಂಥ ಇಪ್ಪತ್ತೈದು ಪೈಸೆಗಳ ಬಗ್ಗೆ ಮನ್ನಾ ಮಾಡಿದ್ದೀರಿ ಇದು ಬಹಳ ಸಂತೋಷದ ವಿಚಾರ. ಆದರೆ ಒಂದು ವಿಷಯದ ಬಗ್ಗೆ ಮಾತ್ರ ತಾವು ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಬೇಕಾಗಿದೆ. ಯಾರೂ ದಾನಿಗಳು ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೌಲಭ್ಯಕ್ಕಾಗಿ ಕಟ್ಟಡಗಳನ್ನು ಪೂರ್ಣವಾಗಿ ಕಟ್ಟಿಸಿಕೊಟ್ಟಿದ್ದಾರೋ ಅಂತಹ ಒಂದು ಕಟ್ಟಡಗಳಿಗೆ ತಾವು ಪ್ರತಿ ದಿನ ೨೦—೨೫ ರೂಪಾಯಿ ಶುಲ್ಕವನ್ನು ವಸೂಲು ಮಾಡತಕ್ಕದ್ದರ ಬಗ್ಗೆ ನಾನು ಹಿಂದೆ ತಮ್ಮ ಗಮನವನ್ನು ಸೆಳೆದಿದ್ದೆ. ತಾವು ಕೂಡ ನಮ್ಮ ಕಡೆ ಅನೇಕ ಸಾರಿ ಪ್ರವಾಸ ಬಂದಾಗ ಶುಲ್ಕವನ್ನು ಕಡಿಮೆ ಮಾಡಬೇಕೆಂದು ಹೇಳಿದಾಗ ಒಪ್ಪಿಕೊಂಡಿದ್ದಿರಿ. ನಾನು ಕಳೆದ ಸಾರಿಯೂ ಕೂಡ ಡಿಮ್ಯಾಂಡಿನ ಮೇಲೆ ಮಾತನಾಡುವಾಗ ಈ ಅಂಶವನ್ನು ವ್ಯಕ್ತಪಡಿಸಿದ್ದೆ. ಇದೇ ಸದನದಲ್ಲಿ ತಾವು ಶುಲ್ಕವನ್ನು ಕಡಿಮೆ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಿರಿ. ಇವೊತ್ತು ತಾಲೂಕು ಮಟ್ಟದಲ್ಲಿರತಕ್ಕ ಜನ ೨೦—೨೫ ರೂಪಾಯಿ ಶುಲ್ಕವನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ರೋಗಿಗಳ ಸಂಖ್ಯೆ ಜಾಸ್ತಿ ಇದ್ದರೂ ಕೂಡ ಈ ದುಡ್ಡನ್ನು ಕೊಡತಕ್ಕ ಒಂದು ಕಷ್ಟದಿಂದ ಆ ಕಟ್ಟಡ

ಗಳಿಗೆ ಯಾವತ್ತೂ ಕೂಡ ಬೀಗ ಹಾಕಿರುತ್ತದೆ. ನಿಜವಾಗಿಯೂ ಆ ದಾನಿಗಳು ಯಾವ ಉದ್ದೇಶ ಕ್ಕೋಸ್ಕರ ಕಟ್ಟಡಗಳನ್ನು ಕಟ್ಟಿಸಿದರೋ ಅವರ ಉದ್ದೇಶ ನೆರವೇರಂತಿಲ್ಲ. ಆದುದರಿಂದ, ದಯ ಮಾಡಿ ಈ ಒಂದು ಶುಲ್ಕವನ್ನು ಕಡಿಮೆ ಮಾಡಲಿಕ್ಕೆ ಮಾನ್ಯ ಆರೋಗ್ಯ ಸಚಿವರು ಪ್ರಯತ್ನ ಮಾಡಬೇ ಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಹಳ್ಳಿಗಾಡುಗಳಲ್ಲಿರತಕ್ಕ ಕೇವಲ ಮೂರು ಪರ್‌ಸೆಂಟ್ ಸೋಲಿಗ ಕೋಮಿನವರು ಏನು ಇದ್ದಾರೆ ಅವರಿಗೆ ಸರಿಯಾಗಿ ವೈದ್ಯಕೀಯ ಸೌಲಭ್ಯ ದೊರಕುವಂತೆ ಏರ್ಪಾಡು ಮಾಡಬೇಕು. ತಾವು ದಕ್ಷಿಣ ಕನ್ನಡದಲ್ಲಿ ಮಾತ್ರ ಈ ಟ್ರೈಬಲ್ಸ್‌ಗೆ ಆಫ್ ಪ್ಲ್ಯಾನ್ ಅಂತ ಅಲ್ಲಿ ಮಾತ್ರ ವೈದ್ಯಕೀಯ ಸೌಲಭ್ಯ ದೊರಕಿಸುತ್ತಿದ್ದೀರಿ. ತಾವು ಪ್ರತಿಯೊಂದು ತಾಲೂಕಿಗೂ ವೈದ್ಯಕೀಯ ಸೌಲಭ್ಯ ವನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಪ್ರತಿಯೊಂದು ತಾಲೂಕಿನಲ್ಲಿಯೂ ಇದ್ದಾರೆ ಸ್ವಾಮಿ, ನನ್ನ ತಾಲೂಕಿನಲ್ಲಿ ಅತಿ ಹೆಚ್ಚಿನ ಜನಸಂಖ್ಯೆಯಲ್ಲಿ ಸೋಲಿಗರು ಇದ್ದಾರೆ. ಕಳೆದ ವರ್ಷ ಕೂಡ ನಾನು ಕೇಳಿದ್ದೆ. ನಮ್ಮ ಭಾಗದಲ್ಲಿ ಸುತ್ತಮುತ್ತ ಅವರೇ ಇದ್ದಾರೆ ದಯಮಾಡಿ ತಾವು ಅಲ್ಲಿಗೆ ಒಂದು ಪಿ. ಹೆಚ್. ಯು. ಕೊಡಬೇಕೆಂದು ಕೇಳಿಕೊಂಡಿದ್ದೆ. ತಮಗೂ ಕೂಡ ಕೊಡಲಿಕ್ಕೆ ಮನಸ್ಸು ಇದೆ. ತಾವು ದಯಮಾಡಿ ಆ ಜನರಿಗೂ ಕೂಡ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಡಾಕ್ಟರುಗಳ ಮಾನವೀಯತೆಯ ಬಗ್ಗೆ ಅನೇಕ ಜನರು ಮಾತನಾಡಿದ್ದಾರೆ. ಈಗ ಕುಷ್ಠ ರೋಗದ ಆಸ್ಪತ್ರೆ ಜನರಲ್ ಆಸ್ಪತ್ರೆಯ ಕಾಂಪೌಂಡ್ ಒಳಗೆ ಏನಿದೆ ಅದನ್ನು ಬದಲಾಯಿಸ ಬೇಕು. ಕುಷ್ಠರೋಗ ಆಸ್ಪತ್ರೆ, ಜನರಲ್ ಆಸ್ಪತ್ರೆ ಒಂದೇ ಕಡೆ ಇರುವುದು ಒಳ್ಳೆಯದಲ್ಲ. ಕುಷ್ಠ ರೋಗ ಆಸ್ಪತ್ರೆಯನ್ನು ಊರಿನಿಂದ ಹೊರಗೆ ಹಾಕತಕ್ಕ ವ್ಯವಸ್ಥೆಯನ್ನು ಮಾಡಬೇಕು. ನನ್ನ ತಾಲೂಕಿನಲ್ಲಿ ಈ ಒಂದು ವ್ಯವಸ್ಥೆ ಆಗಿಲ್ಲ. ದಯಮಾಡಿ ಕುಷ್ಠರೋಗದ ಆಸ್ಪತ್ರೆಯನ್ನು ಊರಿನಿಂದ ಹೊರಗೆ ಹಾಕಲಿಕ್ಕೆ ಏರ್ಪಾಡು ಮಾಡಬೇಕೆಂದು ಮಾನ್ಯ ಆರೋಗ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಿಗೆ ಡಾಕ್ಟರುಗಳು ಬರಲಿಕ್ಕೆ ಇಷ್ಟಪಡುವುದಿಲ್ಲ. ಎಲ್ಲರೂ ಸಿಟಿ ಯಲ್ಲಿಯೇ ಇರಬೇಕು, ಪಟ್ಟಣದಲ್ಲಿಯೇ ಇರಬೇಕು ಎಲ್ಲಾ ಸೌಲಭ್ಯಗಳು ನಮಗೆ ಇಲ್ಲಿ ಸಿಕ್ಕುತ್ತವೆ ಎಂದು ಹೇಳುವುದು ಇದೆ. ಅದಕ್ಕಾಗಿಯೇ ನಾನು ಹಿಂದೆ ಒಂದು ಸಲಹೆಯನ್ನು ಕೊಟ್ಟಿದ್ದೆ. ಗ್ರಾಮಾಂತರ ಪ್ರದೇಶಗಳಿಗೆ ಹಾಕತಕ್ಕ ಡಾಕ್ಟರುಗಳಿಗೆ ಹದಿನೈದು ಪರ್‌ಸೆಂಟ್ ಜಾಸ್ತಿ ಹಣ ಕೊಡುವಂತೆ ಏರ್ಪಾಡು ಮಾಡಬೇಕೆಂದು ತಿಳಿಸಿದ್ದೆ. ಈಗ ತಮಗೆ ಉದಾಹರಣೆ ಹೇಳಬೇಕು ಎಂದರೆ ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಂದು ವರ್ಷದಿಂದಲೂ ಒಬ್ಬ ಲೇಡಿ ಡಾಕ್ಟರು ಇಲ್ಲ ಅವರು ಏತಕ್ಕೆ ಬರುವುದಿಲ್ಲ ಎಂದರೆ ಅವರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಯಾವುದೇ ಬೆನಿಫಿಟ್ ಇರುವುದಿಲ್ಲ, ಅದಕ್ಕೋಸ್ಕರ ಅವರು ಇಷ್ಟಪಡುವುದಿಲ್ಲ. ಆದಂದರಿಂದ, ಗ್ರಾಮಾಂತರ ಪ್ರದೇಶಗಳಿಗೆ ಹೋಗತಕ್ಕ ಡಾಕ್ಟರುಗಳಿಗೆ ಸ್ವಲ್ಪ ಇನ್‌ಸೆಂಟೀವ್ ಜಾಸ್ತಿ ಮಾಡಿ ಅಲ್ಲಿ ಡಾಕ್ಟರುಗಳು ಸರಿಯಾಗಿ ಕೆಲಸ ನಿರ್ವಹಿ ಸಲಿಕ್ಕೆ ಅನುಕೂಲಮಾಡಿಕೊಡಬೇಕೆಂದು ಹೇಳುತ್ತೇನೆ. ಇವೊತ್ತು ಕೂಡ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಮಕ್ಕಳು ಅಂಧತ್ವಕ್ಕೆ ಒಳಗಾಗಿದ್ದಾರೆ. ಈಗ ತಾವು ಏನೊಂದು ಹೊಸ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ, ಮಕ್ಕಳ ವೈಹಿಕ ಪರೀಕ್ಷೆ ಮಾಡಬೇಕೆಂದು ಅದು ಸಮರ್ಪಕವಾಗಿ ಆಗುತ್ತಿಲ್ಲ. ಸ್ಕೂಲುಗಳಲ್ಲಿರತಕ್ಕ ೧೦–೧೫ ವರ್ಷದ ಮಕ್ಕಳುಗಳಿಗೆ ಆಗಾಗ್ಗೆ ವೈದ್ಯ ಪರೀಕ್ಷೆ ಮಾಡಿದಾಗ ಏನಾದರೂ ಸಣ್ಣಪುಟ್ಟ ಕಾಯಿಲೆ ಬಂದಿದ್ದರೆ ಅದನ್ನು ಆಗಲೇ ಕಂಡುಹಿಡಿದು ಸರಿಪಡಿಸಿದರೆ ಸರಿಯಾಗುತ್ತಿತ್ತು, ಈಗ ಅದರ ಬಗ್ಗೆ ಸರಿಯಾಗಿ ವ್ಯವಸ್ಥೆ ಆಗಿಲ್ಲ. ಸುಮ್ಮನೆ ನೆಪ ಮಾತ್ರಕ್ಕೆ ಮಾತ್ರ ಯೋಜನೆ ಜಾರಿ ಯಲ್ಲಿದೆ. ಇನ್ನು ತಾವು ವಿಸಿಟರ್ಸ್ ಕಮಿಟಿಗಳನ್ನು ನೇಮಕ ಮಾಡಿದರೆ ನಾಳೆ ವೈದ್ಯರು ನಾವು ಎಲ್ಲರೂ ಕುಳಿತುಕೊಂಡು ಏನು ಮಾಡಲಿಕ್ಕೆ ಸಾಧ್ಯವಿದೆ ಯಾವ ಯಾವ ಡಾಕ್ಟರು ಯಾವ ಯಾವ ಆಸ್ಪತ್ರೆಯಲ್ಲಿ ಯಾವರೀತಿ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ನೋಡಲಿಕ್ಕೆ ಅನುಕೂಲವಾಗುತ್ತದೆ. ತಾವು ಕಮಿಟಿಗಳನ್ನು ನೇಮಿಸುವಾಗ ಆ ಕಮಿಟಿಗಳಿಗೆ ಸ್ವಲ್ಪ ಪವರ್ ಡೆಲಿಗೇಟ್ ಮಾಡಬೇಕೆಂದು ಹೇಳುತ್ತೇನೆ. ಇನ್ನು ಹೊರ ರೋಗಿಗಳ ಜನಸಂದಣಿಯನ್ನು ಜಿಲ್ಲಾ ಆಸ್ಪತ್ರೆಗಳಲ್ಲಿ ಕಡಿಮೆ ಮಾಡಲಿಕ್ಕೆ, ತಾಲೂಕು ಆಸ್ಪತ್ರೆಗಳಲ್ಲಿ ಕಡಿಮೆ ಮಾಡಲಿಕ್ಕೆ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರಿ ಆಸ್ಪತ್ರೆಗಳ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. DEPUTY SPEAKER. —The Hon'ble Member Sri D.V. Waingakar has been allotted five minutes.

SRI WAINGAKAR —Sir, I require 10 minintes at the most.

MR. DEPUTY SPEAKER.—May I know the time required by the Hon'ble Minister for Health, for his reply ?

SRI A. K. ABDUL SAMAD.—Sir, I may require more than one hour. Atleast make it, 90 minutes. If I have to give individual reply, require more than one hour or if I have to give only a sum and substance reply, I will try to conclude in one hour.

MR. DEPUTY SPEAKER.—I was therefore insisting on the Hon'ble Members to please stick on to their timings allotted.

SRI C. M ARUMUGHAM.—Let the Hon'ble Minister reply tomorrow

SRI Y. RAMAKRISHNA.—It is already postponed by a day. Let us sit for one more hour today only. It has already taken two days and let us not postpone it for the third day.

MR. DEPUTY SPEAKER.—It is better to be business-like and try to finish this demand as early as possible.

SRI C. M. ARUMUGHAM.- Mr. Deputy Speaker, yesterday we took this demand and discussed on it for one hour and it is continuing today. This demand pertaining to Health Department is an important one and lot of imp rtant subjects will have to be discussed. The Government will have to reply on many points. Of course, in the interest of business transaction, you want to restrict us. It may not be possible. It is not good also. When the Minister wants ninety minutes for his reply, my submission is that we shall discuss this demand till 6 'O' clock and tomorrow we will sit at 12.00 noon. Let the Minister give his reply tomorrow.

SRI B. BHASKER SHETTY.—We will sit at 12.00 noon tomorrow.

ಉಪಾಧ್ಯಕ್ಷರು —ನಾಳೆ ೧೨ ಗಂಟೆಗೆ ಸಭೆ ಸೇರಬಹುದಲ್ಲವೆ?

SRI C. M. ARUMUGHAM.—Why Mr. Bhaskar Shetty is so rigid? Let us have some adjustments

MR. DEPUTY SPEAKER.—I am prepared. I have to protect the interests of the m mbers including the hon. Minister who has to bring the policy to the notice of members through this House and other things are there......

SRI C. M. ARUMUGHAM.—It is a good thing. You are supporting the members. You are always doing it.

MR. DEPUTY SPEAKER —Tomorrow let us meet at 12.00 noon.

ಶ್ರೀ ಡಿ. ವಿ. ವೈಗಾಂಕರ್ (ಕಾರವಾರ) —ಸನ್ಮಾನ್ಯ ಉಪ ಸಭಾಧ್ಯಕ್ಷರೆ, ಮಾನ್ಯ ಆರೋಗ್ಯ ಮಂತ್ರಿಗಳು ಇವತ್ತಿನ ದಿವಸ ಈ ಸದನದ ಮುಂದೆ ತಮ್ಮ ಬೇಡಿಕೆಗಳನ್ನು ಏನು ಮಂಡಿಸಿದ್ದಾರೆ ಇದಕ್ಕೆ ನನ್ನ ಸಮ್ಮತಿಯನ್ನು ಸೂಚಿಸಿ ಕೆಲವು ವಿಷಯಗಳನ್ನು ಮಾತ್ರ ಹೇಳಬಯಸುತ್ತೇನೆ. ನನಗೆ ಕೊಟ್ಟಿರತಕ್ಕಂಥ ೧೦ ನಿಮಿಷಗಳಲ್ಲಿ ನಾನು ಮಾತನಾಡಬೇಕಾದಂಥ ಅಂಶ ಕೇವಲ ಒಂದೇ ಒಂದು, ಆದರೂ ಅದು ಬಹಳ ಮಹತ್ವಪೂರಿತವಾದುದು. ಇದುವರೆಗೆ ಮಾತನಾಡಿದ ಶ್ರೀಮತಿ ಪ್ರಮಿಳಾರವರಾಗಲಿ, ಅಥವಾ ಬೇರೆ ಇನ್ನು ಯಾವ ಸದಸ್ಯರೇ ಆಗಲಿ ಹೇಳದೇ ಇರತಕ್ಕ ಒಂದೇ ಒಂದು ವಿಷಯವನ್ನು ಮಾತ್ರ ನಾನು ಇಲ್ಲಿ ಹೇಳಬಯಸುತ್ತೇನೆ. ತಾವು ನಮಗೆ ಪೂರೈಸಿರಿತಕ್ಕ ಪುಸ್ತಕದ ೪೦ನೇ ಪುಟದಲ್ಲಿ Karnataka State Board for Prevention and Control of Water Pollution......ಎಂದ ಒಂದು ಅಂಶ ಇದೆ. ಇದರ ಬಗ್ಗೆ ಮಾತ್ರ ನಾನು ನಾಲ್ಕು ಮಾತುಗಳನ್ನು ಹೇಳುತ್ತಿದ್ದೇನೆ. ವಾಟರ್ ಪೊಲ್ಯೂಷನ್ ಮತ್ತು ಏರ್ ಪೊಲ್ಯೂಷನ್ ಬಗ್ಗೆ ತಾವು ಈ ಸದನಕ್ಕೆ ಏನು ಮಾಹಿತಿಯನ್ನು ಕೊಟ್ಟಿದ್ದೀರಿ ಇದನ್ನು ನಾನು ಕೂಲಂಕಷವಾಗಿ ಓದಿ ನೋಡಿದೆ. ೧೯೭೪ರಲ್ಲಿ ಏರ್ ಪೊಲ್ಯೂಷನ್ ಮತ್ತು ವಾಟರ್ ಪೊಲ್ಯೂಷನ್‌ನ್ನು ತಡೆಗಟ್ಟಲು ಸ್ಥಾಪಿತವಾದ ಬೋರ್ಡ್ ಇನ್ನೂ ಬಾಲ್ಯಾವಸ್ಥೆಯಲ್ಲೇ ಇದೆ. ನಮ್ಮ ರಾಜ್ಯದಲ್ಲಿನ ಇಂಡಸ್ಟ್ರೀಸ್‌ಗಳಿಂದಾಗಿ ಆಗುತ್ತಿರುವ ವಾಟರ್ ಪೊಲ್ಯೂಷನ್ ಮತ್ತು ಏರ್ ಪೊಲ್ಯೂಷನ್‌ನ್ನು ತಡೆಗಟ್ಟುವ ಬಗ್ಗೆ ಯಾವ ರೀತಿ ಸಮಗ್ರವಾದ ಒಂದು ಯೋಜನೆಯನ್ನು ರೂಪಿಸಿಕೊಂಡು ಕೆಲಸ ಮಾಡುತ್ತಿದೆ, ಔದ್ಯಮೀಕರಣ ಆಗುವ ಸಂದರ್ಭದಲ್ಲಿ ಯಾವ ನೀತಿ ನಿಯಮಗಳನ್ನು ಹಾಕಿಕೊಂಡಿದೆ ಎಂಬುದನ್ನು ನೋಡುವ ಸಲುವಾಗಿ ಇಲ್ಲಿ ಕೊಟ್ಟಿರತಕ್ಕ ಮಾಹಿತಿಯನ್ನು ನಾನು ನೋಡದಾಗ ಈ ಸಂಸ್ಥೆ ನೂರಕ್ಕೆ ನೂರು ಭಾಗ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಅವರು ಆ ಮಾಹಿತಿಯಲ್ಲಿ ಕೊಟ್ಟಿರುವುದು ಕಂಡುಬಂತು. ಇಂಥ ರಮ್ಯವಾದ ಚಿತ್ರವನ್ನು ನೋಡಿದ ಕೂಡಲೇ ಏರ್ ಪೊಲ್ಯೂಷನ್ ಮತ್ತು ವಾಟರ್ ಪೊಲ್ಯೂಷನ್ ತಡೆಗಟ್ಟುವ ಬಗ್ಗೆ ನಮ್ಮ ರಾಜ್ಯದ ಜನರು ಯಾರೂ ಕೂಡ ಏನೇನೂ ಚಿಂತನೆ ಮಾಡುವ ಆವಶ್ಯಕತೆ ಇಲ್ಲವೆಂದು ನನಗನಿಸುತ್ತದೆ. ಈ ಬೋರ್ಡ್‌ನಲ್ಲಿ ೧೫ ಜನ ಸದಸ್ಯರಿದ್ದಾರೆ. ಛೇರ್ಮನ್ ಮತ್ತು ಸೆಕ್ರೆಟರಿ ಇಬ್ಬರೂ ಸೇರಿ ೧೭ ಮಂದಿ ಆಗುತ್ತಾರೆ ಇವರು ಒಂದು ವರ್ಷದಲ್ಲಿ ಎಷ್ಟು ಸಿಟಿಂಗ್ಸ್ ಕೂತಿದ್ದಾರೆ, ಏನೇನು ಕೆಲಸ ಮಾಡಿದ್ದಾರೆ ಎಂಬುದನ್ನು ಇವರು ಈ ಮಾಹಿತಿಯನ್ನು ಎಲ್ಲೂ ಕಾಣಿಸಿಲ್ಲ ಮೇಲಾಗಿ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುವ ರೀತಿಯಲ್ಲಿ ರಿಮಾರ್ಕ್ಸ್ ಬರೆದಿದ್ದಾರೆ.

"Substantial progress has been achieved. The response from the industries has been fairly satisfactory".

(ಕು॥ ಪ್ರಮಿಳಾರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನನ್ನ ಮತದಾರರ ಕ್ಷೇತ್ರದಲ್ಲಿ ನಡೆದಂಥ ಒಂದು ಘಟನೆಯನ್ನು ತಮಗೆ ಹೇಳುವುದಾದರೆ, ಏರ್ ಪೊಲ್ಯೂಷನ್ ಮತ್ತು ವಾಟರ್ ಪೊಲ್ಯೂಷನ್ ಬಗ್ಗೆ ಅಲ್ಲಿ ಏನು ನಡೆದಿದೆ, ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಹೇಳಿದರೆ ಇವರಿಗೆ ಒಂದು ಐಡಿಯಾ ಬರಬಹುದೆಂದು ನಾನು ಹೇಳುತ್ತಿದೆ ೀನೆ.

ಸ್ವಾಮಿ, ನನಗೆ ಇಲ್ಲಿ ಪೂರೈಸಿರಿತಕ್ಕ ಮಾಹಿತಿಯಲ್ಲಿ ಸಾಧಾರಣ ೯ ಇಂಡಸ್ಟ್ರೀಸ್‌ಗಳ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. ಈ ಬೋರ್ಡ್ ಯಾವ ರೀತಿ ಕೆಲಸಮಾಡುತ್ತಿದೆ, ಯಾವ ರೀತಿ ತನ್ನ ಹತೋಟಿಯನ್ನು ಇಟ್ಟುಕೊಂಡಿದೆ ಎಂಬುದನ್ನು ಇದರಲ್ಲಿ ಏನು ಹೇಳಿದ್ದಾರೆ, ಅದನ್ನು ನಾನು ಹೇಳಬಯಸುತ್ತೇನೆ. ಬಳ್ಳಾರಪುರ ಇಂಡಸ್ಟ್ರೀಸ್, ಕಾರವಾರ ಇಲ್ಲಿ ಒಂದು ಕೆಮಿಕಲ್ಸ್ ಪ್ಲಾಂಟ್ ಇದೆ. ಅದರಲ್ಲಿ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯವರು ಹೈಡ್ರೋಕ್ಲೋರಿಕ್ ಆಸಿಡ್‌ನ್ನು ತಯಾರು ಮಾಡುತ್ತಾರೆ. ಇದರಿಂದಾಗಿ ಏರ್ ಪೊಲ್ಯೂಷನ್ ಮತ್ತು ವಾಟರ್ ಪೊಲ್ಯೂಷನ್ ಆಗುತ್ತದೆ. ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮ ಏನು ಎಂದರೆ ಟ್ರೀಟ್‌ಮೆಂಟ್ ಪ್ಲಾಂಟ್ ಒಂದು ಈಗಾಗಲೇ ಅಲ್ಲಿ ಹುಟ್ಟಿಕೊಂಡು ಟ್ರೀಟೆಡ್ ಆಫ್ಲೂಯಂಟನ್ನು ಸಮುದ್ರದೊಳಕ್ಕೆ ಬಿಡಲಿಕ್ಕೆ ವ್ಯವಸ್ಥೆ ಮಾಡಿದ್ದೇವೆ ಎಂದು ಅದರಲ್ಲಿ ಕಾಣಿಸಿದ್ದಾರೆ. ಕಳೆದ ಫೆಬ್ರುವರಿ ತಿಂಗಳಲ್ಲಿ ಅಲ್ಲಿ ಒಂದು ಘಟನೆ ನಡೆಯಿತು. ಕಾಸ್ಟಿಕ್ ಸೋಡಾ ಫ್ಯಾಕ್ಟರಿಯವರು ತಯಾರು ಮಾಡಿವಂಥ ಹೈಡ್ರೋಕ್ಲೋರಿಕ್ ಆಸಿಡ್‌ನ್ನು ಸ್ಟೋರೇಜ್ ಮಾಡುವುದಕ್ಕೆ

ಬೈಕೋಲ್‌ಬೇನಲ್ಲಿ ೨ ಟ್ಯಾಂಕ್‌ಗಳಲ್ಲಿ ಸ್ಟೋರೇಜ್ ಮಾಡಿದರು. ದುರ್ದೈವದಿಂದ ಆ ಟ್ಯಾಂಕ್ ಒಡೆದು ಆ ಆಸಿಡ್ ಸೋರಿ ಸಮುದ್ರಕ್ಕೆ ಹೋಯಿತು. ಆಗ ಇಡೀ ಸಮುದ್ರಕ್ಕೆ ಬೆಂಕಿ ಹತ್ತಿಕೊಂಡಂತಾಗಿ ಅದರಲ್ಲಿದ್ದ ಮೀನು, ಕಪ್ಪೆ, ಹಾವು ಇನ್ನೂ ಮುಂತಾದ ಪ್ರಾಣಿಗಳೆಲ್ಲಾ ಸತ್ತುಹೋದವು. ಇದರ ಬಗ್ಗೆ ನಾನು ಕಳೆದ ತಿಂಗಳು ೨ನೇ ತಾರೀಖು ನಮ್ಮ ಮಾನ್ಯ ಮುಖ್ಯ ಮಂತ್ರಿಯವರಿಗೆ ಒಂದು ಪತ್ರವನ್ನು ಬರೆದೆ. ಅದಕ್ಕೆ ಪ್ರತ್ಯುತ್ತರವಾಗಿ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟಿನ ಅಂಡರ್ ಸೆಕ್ರೆಟರಿಯವರಿಂದ ನನಗೆ ಒಂದು ಪತ್ರ ಬಂತು. ಅವರು ನನಗೆ ಬರೆದಿರತಕ್ಕ ಪತ್ರದ ಈ ರೀತಿ ಇದೆ :

> "I am directed to state that the tank burst which took place in 1976 was episodal in character and that the Company had taken necessary steps thereafter to strengthen the storage tanks, and the acidity of the water also rapidly returned to normal and subsequently certain precautions are being taken to prevent such accidental occurrences. The land on which storage tanks are constructed belongs to the Forest Department and the road leading to the tanks belong to fisheries department and the factory authorities have obtained. permission from the Fisheries Department to convey the acid to the tanka during night times only when there is no traffic on the road. Similar Acid Storage Tanks have been located and are in existence in the port area in Cochin and Bombay ports also."

ಈ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನವರು ನನಗೆ ಉತ್ತರ ಬರೆಯಬೇಕಾದರೆ ಅವರು ಈ ಬೋರ್ಡ್‌ನವರನ್ನು ಕನ್ಸಲ್ಟ್ ಮಾಡಿ ಬರೆದಿದ್ದಾರೋ ಅಥವಾ ಈ ವಿಚಾರವನ್ನು ಕೂಲಂಕಷವಾಗಿ ಚರ್ಚೆ ಮಾಡಿ ಬರೆದಿದ್ದಾರೋ ನನಗೆ ಗೊತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ಇಂಥ ಒಂದು inrresponsible answer to plead on behalf of the Company and as if he is a lawyer of that particular campany. ಈ ರೀತಿ ಅವರು ಉತ್ತರವನ್ನು ಕೊಟ್ಟಿರುವುದನ್ನು ನೋಡಿ ನನಗೆ ತುಂಬಾ ವ್ಯಥೆಯಾಯಿತು. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ನಾನು ಬರೆದ ಕಾಗದಕ್ಕೆ ಅವರು ಕೊಟ್ಟಿರತಕ್ಕ ಬೇಜವಾಬ್ದಾರಿ ಉತ್ತರವನ್ನು ಮಾನ್ಯ ಮಂತ್ರಿಗಳು ಪರಾಂಬರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸಾರ್ವಜನಿಕರ ಆರೋಗ್ಯಕ್ಕೆ ಇದರಿಂದ ಯಾವ ಹಾನಿಯೂ ಆಗುವುದಿಲ್ಲವೆಂದು ಇದರಿಂದ ಗೊತ್ತಾಗುತ್ತದೆ. ನಾನೇನೂ ಆರೋಗ್ಯ ತಜ್ಞನಲ್ಲ, ನಾನೊಬ್ಬ ಸಾಮಾನ್ಯ ಮನುಷ್ಯ. ಹೈಡ್ರೋಕ್ಲೋರಿಕ್ ಆಸಿಡ್‌ನ್ನು ಸ್ಟೋರೇಜ್ ಮಾಡಿದ್ದರಿಂದ ೨, ತಾಸು ಏನು ಹೊಗೆ ಕಾರುತ್ತದೆ, ಅದು ಗಾಳಿಯಲ್ಲಿ ಸೇರಿ ಜನರ ಆರೋಗ್ಯಕ್ಕೆ ಹಾನಿಯುಂಟುಮಾಡುತ್ತಿದೆ. ಅಲ್ಲಿಯ ಜನರು ಈ ಬಗ್ಗೆ ನಿತ್ಯವೂ ಕಂಪ್ಲೈಂಟ್ ಕೊಡುತ್ತಿದ್ದಾರೆ. ಸ್ವಾಮಿ, ಈ ಟ್ಯಾಂಕ್‌ಗಳನ್ನು ಇಲ್ಲಿ ಕಟ್ಟಿದ್ದರಿಂದ ನನಗೆ ಒಂದು ತರಹದ ಗ್ಯಾಸ್ಟಿಂಗ್ ಅಂದರೆ ಆಸ್ತಮಾ ಟೈಪ್ ಆಗಲಿಕ್ಕೆ ಹತ್ತಿದೆ, ಆದ್ದರಿಂದ ಮೊದಲು ಇದನ್ನು ಇಲ್ಲಿಂದ ರಿಮೂವ್ ಮಾಡಿ. ನಮ್ಮದು ಇನ್ನೇನೂ ಬೇಡಿಕೆ ಇಲ್ಲ. ಅವರ ಉದ್ಯೋಗವೂ ನಡೆಯಲಿ, ಈಗ ಇಲ್ಲಿ ಏನು ಎರಡು ಟ್ಯಾಂಕ್‌ಗಳನ್ನು ಕಟ್ಟಿ ಅದರಲ್ಲಿ ಸ್ಟೋರೇಜ್ ಮಾಡಿದ್ದೀರಿ ಅದನ್ನು ಬೇರೆ ಕಡೆಗೆ ಸಾಗಿಸಿ ಎಂದು ಒಂದು ರೀಸನಬಲ್ ಬೇಡಿಕೆಯನ್ನು ಇಟ್ಟಿದ್ದಾರೆ. ಆದರೆ ಈ ಬೇಡಿಕೆಗೆ ಇದುವರೆಗೂ ಮನ್ನಣೆ ಸಿಕ್ಕಿಲ್ಲ.

ಟ್ಯಾಂಕನ್ನು ಇನ್‌ಸ್ಟಾಲ್ ಮಾಡತಕ್ಕಂಥ ಕಾಲದಲ್ಲಿ ಅಲ್ಲಿ ಜನರು ವಾಸವೇ ಇರಲಿಲ್ಲ. ಈಗ ಅಲ್ಲಿ ತುಂಬ ಚಟುವಟಿಕೆಯಿಂದ ಕೆಲಸಕಾರ್ಯಗಳು ನಡೆಯುತ್ತಿವೆ. ಸಾವಿರಾರು ಜನರು ಕಾರವಾರ ಬಂದರಿನಲ್ಲಿ ಕೆಲಸ ಮಾಡುತ್ತಿದ್ದಾರೆ, ಫಿಜರೀಸ್ ಡಿಪಾರ್ಟ್‌ಮೆಂಟ್‌ನವರು, ಮೀನುಗಾರರು ಮೀನು ಹಿಡಿಯುವ ಕೆಲಸವನ್ನು ಮಾಡುತ್ತಿದ್ದಾರೆ. ಮ್ಯಾಂಗನೀಸ್ ಅನ್‌ಲೋಡಿಂಗ್ ಕೆಲಸದಲ್ಲಿ ಸಾವಿರಾರು ಜನರು ನಿರತರಾಗಿರುತ್ತಾರೆ. ಈ ಮಧ್ಯದಲ್ಲಿ ಹೈಡ್ರೋಕ್ಲೋರಿಕ್ ಆಸಿಡ್‌ನ್ನು ಸ್ಟೋರ್ ಮಾಡಿಕೊಂಡು ನಡುಮಧ್ಯೆ ಟ್ಯಾಂಕ್‌ನ್ನು ಇಟ್ಟುಕೊಳ್ಳುವುದು ಎಷ್ಟರಮಟ್ಟಿಗೆ ಪ್ರಾಮುಖ್ಯತೆ ಮತ್ತು ಉತ್ತಮವಿರುತ್ತದೆ

ಎಂಬುದನ್ನು ಸರ್ಕಾರದವರು ಪರಾಂಬರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ಅಲ್ಲಿಂದ ಬೇರೆ ಕಡೆಗೆ ಷಿಫ್ಟ್ ಮಾಡಲಿಕ್ಕೆ ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ ಅಲ್ಲಿಯ ಜನರ ಪರವಾಗಿ ಬೇಡಿಕೊಳ್ಳುತ್ತೇನೆ ಇದೇ ಪ್ರಕಾರವಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಇದು ಇಷ್ಟೊಂದು ಮಾರಕವಾಗಿದ್ದ ಪಕ್ಷದಲ್ಲಿ ಅದು ಮಾರಕ ಹೌದೋ ಅಲ್ಲವೋ ಎನ್ನುವ ಒಂದು ವಿಚಾರವನ್ನೂ ಸಹ ಮಾಡದೆ ಒಂದು ಏಜೆನ್ಸಿಯನ್ನೂ ನೇಮಕ ಮಾಡದಿರುವುದಕ್ಕೆ ನಾವು ತುಂಬಾ ವಿಶಾದಪಡಬೇಕಾಗಿರುತ್ತದೆ. ಹೈಡ್ರೋಕ್ಲೋರಿಕ್ ಆಸಿಡ್ ಬಗ್ಗೆ ಇಷ್ಟೊಂದು ವಿಚಾರ ಮಾಡುವ ಅವಶ್ಯಕತೆ ಬಹಳ ಗಂಭೀರವಾದ ವಿಚಾರವಾಗಿರುತ್ತದೆ. ಗಂಭೀರ ವಾದ ಅವಶ್ಯಕತೆ ಇಲ್ಲದಿದ್ದ ಪಕ್ಷದಲ್ಲಿ ಇದನ್ನು ನಾವು ಇಷ್ಟರಮಟ್ಟಿಗೆ ವಿಚಾರವನ್ನು ಮಾಡುತ್ತಲೇ ಇರ ಲಿಲ್ಲ. ಆದರೆ ತಂತ್ರಜ್ಞರ ಪ್ರಕಾರ ಹೈಡ್ರೋಕ್ಲೋರಿಕ್ ಆಸಿಡ್ ಅಲ್ಲಿ ಇದ್ದುದರಿಂದ ಏನು ಆಗುತ್ತ ದೆಂಬುದನ್ನು ಹೀಗೆ ಹೇಳಿದ್ದಾರೆ. "It is a very powerful irritant and is a poison by ingestion and inhalation. It is an irritant to the mucous membranes of the eyes and respiratory tract, and a concentration of 35 ppm causes irritation of the throat after short exposure. concentrations of 50 to 100 ppm are tolerable for one hour More severe exposures result in pulmonary edema, and often laryngeal spasm." ಎಂದು ಹೇಳಿ ದ್ದಾರೆ. ಈ ಪ್ರಕಾರವಾಗಿ ಇಷ್ಟೊಂದು ಗಂಭೀರವಾದ ಪ್ರಮಾಣದಲ್ಲಿ ಹೈಡ್ರೋಕ್ಲೋರಿಕ್ ಆಸಿಡ್ ಇದ್ದ ಪಕ್ಷಕ್ಕೆ ಟ್ಯಾಂಕ್‌ನಿಂದ ಸೋರಿಹೋಗಿ ಸಮುದ್ರಕ್ಕೆ ಬೆಂಕಿ ಹೊತ್ತಿಕೊಂಡು ಸುತ್ತಮುತ್ತಲ ಇರತಕ್ಕವರ ಜನರಮೇಲೆ ಏನು ಪರಿಣಾಮವಾಗುತ್ತದೆಂಬುದನ್ನು ಸರ್ಕಾರದವರು ಬಹಳ ಗಂಭೀರವಾಗಿ ವಿಚಾರಿಸಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದರ ಬಗ್ಗೆ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ಈಗ ಬಿನಗ ಎಂಬ ಹಳ್ಳಿಯಲ್ಲಿ ಕಾಸ್ಟಿಕ್‌ಸೋಡಾ ಫ್ಯಾಕ್ಟರಿ ನಡೆಯುತ್ತಿದೆ. ಅಲ್ಲಿ ಉತ್ಪಾದನೆಯಾದ ಎಫ್ಲುಯೆಂಟ್‌ನ್ನು ಟ್ರೀಟ್ ಮಾಡಿಕೊಂಡು ಸಮುದ್ರಕ್ಕೆ ಬಿಡುವಂಥ ವ್ಯವಸ್ಥೆ ಯನ್ನು ಮಾಡಿದ್ದೇವೆಂದು ಹೇಳಿದ್ದಾರೆ, ಇದು ರಿಪೋರ್ಟ್‌ನಲ್ಲಿ ಕಾಣಿಸುತ್ತದೆಯೇ ಹೊರತು ಈ ರೀತಿ ಮಾಡತಕ್ಕಂಥದ್ದು ಸತ್ಯಕ್ಕೆ ದೂರವಾದ ಸಂಗತಿಯಾಗಿರುತ್ತದೆ ಅಲ್ಲಿ ಅವರು ಅಫ್‌ಲೂಯಿಂಟನ್ನು ಡಿಸ್ ಚಾರ್ಜ್ ಮಾಡಿ ಅಲ್ಲಿರತಕ್ಕಂಥ ಹೊಂಡದಲ್ಲಿ ಡಂಪ್ ಮಾಡುತ್ತಾರೆ. ಈ ರೀತಿ ಡಂಪ್ ಮಾಡಿದಂಥ ನೀರು, ಕ್ಲೋರಿನ್ ಮಿಕ್ಸ್‌ಆಪ್ ಆದ ನೀರು ಭೂಮಿಯಲ್ಲಿ ಪರ್‌ಕ್ಯುಲೇಟ್ ಆಗಿ ಇಡಿ ಬಿಲಗಿ ಊರಲ್ಲಿ ಇರತಕ್ಕಂಥ ಬಾವಿಗಳು ವಿಷಯುಕ್ತವಾದ ನೀರನ್ನೇ ಕುಡಿಯುದಂತಾಗಿರುತ್ತದೆ. ಇದರ ಬದಲಾಗಿ ನೆಲ್ಲಿ ಗಳನ್ನು ಅಳವಡಿಸಿದ್ದರೂ ಕುಡಿಯಲಿಕ್ಕೆ ನೀರು ಬರುತ್ತಿಲ್ಲ. ಇಲ್ಲಿ ನಾಲೆಗಳಲ್ಲಿ ಬಿಟ್ಟ ನೀರನ್ನು ಉಪಯೋ ಗಿಸಿಕೊಂಡು ಬೆಳೆದಂಥ ಬೆಳೆ, ಕಾಯಿಪಲ್ಲ್ಯೆಗಳನ್ನು ಪೇಟೆಗೆ ತೆಗೆದುಕೊಂಡು ಹೋದರೆ ಅದನ್ನು ಯಾರು ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ. ಇಲ್ಲಿ ಕಬ್ಬನ್ನು ಬೆಳೆದರೆ ಕಬ್ಬು ಸಿಹಿಯಾಗುವ ಬದಲು ಕಹಿಯಾಗಿರು ತ್ತದೆ. ಇಷ್ಟೆಲ್ಲ ಆದರೂ ಕೂಡ ಇತ್ತಕಡೆ ಯಾರು ತಮ್ಮ ಗಮನವನ್ನು ಹರಿಸುತ್ತಿಲ್ಲ. ಈ ಸಂದರ್ಭದಲ್ಲಿ ನಾನು ಹೇಳುವುದಾದರೂ ಇಷ್ಟೇ ಸರ್ಕಾರದವರು ನೇಮಿಸಿರತಕ್ಕಂಥ ಬೋರ್ಡ್, ಏಜೆನ್ಸಿ ಏನು ಇದೆ ಅದು ಇದೆ ಎನ್ನುವುದು ಸಾರ್ವಜನಿಕರಿಗೆ ಗೊತ್ತೇಇಲ್ಲ. ಅದಕ್ಕಾಗಿ ಸರ್ಕಾರದವರಿಗೆ ನಾನು ಕೊಡತಕ್ಕಂಥ ಸೂಚನೆಯಾದರೂ ಇಷ್ಟೇ ಅಲ್ಲಿಂದ ಅವರು ಅಫ್‌ಲ್ಯೂಯೆಂಟ್ ಟ್ರೀಟ್‌ಮೆಂಟ್ ನೀರನ್ನು ಸಮುದ್ರಕ್ಕೆ ಬಿಡಬೇಕು. preseribed ಸ್ಟಾಂಡರ್ಡ್‌ಯುಕ್ತ ಮರ್‌ಕ್ಯುರಿ ಸಹ ಇಲ್ಲದೆ ಸಮುದ್ರಕ್ಕೆ ಬಿಡುವಂಥ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ಜಪಾನ್‌ನಲ್ಲಿ ಮಿನಿಮಾಟಾ ಇನ್‌ಸಿಡೆಂಟ್ ಆದ ಪ್ರಕಾರವಾಗಿ ವಿಷ ಯುಕ್ತವಾಗಿ ಜನ ಸಂಕಷ್ಟಕ್ಕೆ ಗುರಿಯಾಗುವ ಸಂಭವ ಒದಗುತ್ತದೆಂದು ಹೇಳುತ್ತೇನೆ. ಮತ್ತೆ ಅಲ್ಲಿ ಮರ್‌ಕ್ಯುರಿಯನ್ನು ಸಂಪೂರ್ಣವಾಗಿ ಟ್ರೀಟ್‌ಮೆಂಟ್ ಮಾಡಿ ಅಫಿಲಿಯೆಂಟ್ ವಾಟರ್‌ನ್ನು ಸಮುದ್ರಕ್ಕೆ ಬಿಡುವಂಥ ವ್ಯವಸ್ಥೆ ಆಗುವಹಾಗೆ ಅಲ್ಲಿ ಒಂದು ಆಟೋಮ್ಯಾಟಿಕ್ ಡಿವೈಸ್ ಇಡಬೇಕು. ಮತ್ತು ಸರ್ಕಾರದ ಪ್ರತಿನಿಧಿಯೊಬ್ಬರು ಅಲ್ಲಿ ಅವರು ಮಾಡತಕ್ಕಂಥ ಕುಹಕ ಕೃತ್ಯಗಳನ್ನು ತಪಾಸಣೆ ಮಾಡಲು ಇರಬೇಕು. ಈಗ ಇರತಕ್ಕಂಥ ಬೋರ್ಡ್‌ನಲ್ಲಿ ೧೩ ಜನ ಸದಸ್ಯರು ಇದ್ದಾರೆಂದು ಹೇಳಿದ್ದಾರೆ. ಇವರು ಯಾವ ಪ್ರದೇಶಕ್ಕೆ ಬಹಳವಾಗಿ ತೊಂದರೆ ಇರುತ್ತದೆ, ವಿಶೇಷವಾಗಿ ಕೆಮಿಕಲ್‌ಪ್ಲಾಂಟ್ ಎಲ್ಲಿ ಇರುತ್ತದೆ, ಅದರ ಸುತ್ತಮುತ್ತಲೂ ಜನರಿಗೆ ಆಗತಕ್ಕಂಥ ತೊಂದರೆಗಳನ್ನು ಮತ್ತು ಅವರ ಸಂಕಷ್ಟಗಳನ್ನು ಮತ್ತು ಅಲ್ಲಿ ನಡೆಯುತ್ತಿರುವ ಕೃತ್ಯಗಳನ್ನು ತಿಳಿಸಲಿಕ್ಕೆ ಮತ್ತು ಅದನ್ನು ಸಭೆಯುಮುಂದೆ ಇಡಲಿಕ್ಕೆ ಇರಬೇಕು. ಈಗ ಇಲ್ಲಿ ಸದ್ಯಕ್ಕೆ ಸಮುದ್ರಕ್ಕೆ ಏನು ನೀರನ್ನು ಬಿಡುತ್ತಿದ್ದಾರೆ, ಅವರಲ್ಲಿ ಮರ್‌ಕ್ಯುರಿಯನ್ನು ತೆಗೆದು

ಬಿಡುತ್ತಿಲ್ಲ. ಓಪನ್ ನಾಲೆಯಲ್ಲಿ ಒಂದು ಹೊಂಡದಕಡೆ ನೀರನ್ನು ಬಿಡುತ್ತಿರುತ್ತಾರೆ. ಆ ನೀರು ಕುಡಿಯಲಿಕ್ಕೆ ಯೋಗ್ಯವಾಗಿರುವುದಿಲ್ಲ ಅಲ್ಲದೆ ಅಲ್ಲಿ ಬೋರ್ಡ್‌ನ್ನು ಹಾಕಿರುತ್ತಾರೆ. ದನಕರುಗಳು ಬೋರ್ಡನ್ನು ಓದುವುದಕ್ಕೆ ಬರುವುದಿಲ್ಲ ಹೋಗುತ್ತವೆ ನೀರನ್ನು ಕುಡಿಯುತ್ತವೆ. ಮತ್ತೆ ಮುಂದಿನ ಸಂಗತಿ ಏನಾಗುತ್ತದೆ ಅದು ಹಾಗೆ ಆಗುತ್ತದೆ. ಅವರಿಗೆ ಹೀಗೆ ನೀರನ್ನು ಬಿಡಲು ಯಾರು ಪರ್ಮಿಷನ್ ಕೊಟ್ಟವರು. ಮರ್‌ಕ್ಯುರಿ ಪಾಸ್ ಎಲ್ಲಿ ಹೋಗುತ್ತಿದೆ. ಮೋಟಾರ್‌ನಲ್ಲಿ ಹೋಗುವಾಗ ಕ್ಲೋರಿನ್ ಪಾಸಾಗುವುದನ್ನು ನೋಡಿದರೆ, ನಾವು ಕರ್ಚೀಫ್‌ನ್ನು ಮೂಗಿಗೆ ಮತ್ತು ಬಾಯಿಗೆ ಇಟ್ಟುಕೊಂಡು ಹೋಗಬೇಕು. ಇಲ್ಲದಿದ್ದರೆ ಉರಿಯುತ್ತದೆ. ಅಲ್ಲಿ ಪಕ್ಕದಲ್ಲಿ ಇರತಕ್ಕಂಥ ಗುಡ್ಡೆ ಹಳ್ಳಿಯಲ್ಲಿ ಇಡೀ ಹಳ್ಳಿಯ ಜನರೇ ಕಾಲಿಯಾಗಿಬಿಟ್ಟಿದ್ದಾರೆ, ಅಲ್ಲಿರತಕ್ಕಂಥ ಹಾಲೊಕ್ಕಲು ಸಮಾಜದವರು ಅಲ್ಲಿ ವಾಸಮಾಡುತ್ತಲೇ ಇಲ್ಲ, ಆದ್ದರಿಂದ ಬೋರ್ಡ್‌ನವರು ವಿಶೇಷವಾದ ಗಮನವನ್ನು ಕೊಟ್ಟು ನಾವು ಇಲ್ಲಿ ಮಾಡಿದಂಥ ಸೂಚನೆಗಳ ಹಿನ್ನೆಲೆಯಲ್ಲಿ ಪೂರ್ಣ ವಿಚಾರವನ್ನು ಮಾಡಿ ಸೂಕ್ತ ಕ್ರಮ ಕೈಗೊಳ್ಳುವ ವ್ಯವಸ್ಥೆಯಾಗಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI C. M. ARUMUGHAM.—Madam Chairman, I am grateful to you for giving me an opportunity to speak on the Demand realting to Medical Department and I do not want to take more time than what you have allotted. Last year and year before I had the opportunity, to initiate this Demand. Though the annual report came late, it is accompained by the performance report. I am glad that atleast this Department had brought out the performance report, and I hope, other departments will follow the same. Now, there was a suggestion from the members of this House for creation of an All India Medical Service. Madam, Doctors after putting in number of years of service in the medical field, will become efficient and specialised and the, will be more useful to the society. Here, I would appeal to the Government to retain the experienced Doctors who are specialised in subjects like Cancer, Tuberculosis, Leprosy etc. Even after attaining the age of 55 and by doing so their experience could be utilised. This is a Department which saves the lives of the human beings. Therefore, I suggest that Government must retain the senior and experienced Doctors by Extension of there service or by reappointment on a contract basis after superannuation further. I also, suggest that an all India Medical Service cadre could also be formed on the lines of I.A.S., I.F.S., and I.P.S. cadres.

5-30 P.M.

All specialised doctors should be retained in major hospitals. The Hon. Health Minister will do well if he agrees with me instead of appointing all experts in one hospital. When the Government is spending Rs. 5.79 crores for its development, it should also think about the development district hospitals. We must have experts in all subjects in all district hospitals. Suppose the Gulbarga doctors refer some cases to Manipal or Bangalore hospitals, patients cannot come all the way 400 miles from Gulbarga to Manipal or Bangalore.

Therefore, please consider this point. I big hospitals like Bowring, Victoria, Hubli, Dharwad and Gulbarga hospitals, visisting hours must be restricted. It has become a thorough-fare. A part from patients, their relatives and other friends come and occupy those rooms. Sometimes, they even prepare food and their children play here and there, and move about. There will movement of traffic and due to heavy noise patients cannot sleep at all. Kindly restrict the movement of relatives and friends, of the patient. Their relatives shall not be permitted to stay in wards with families. Sometime back, I have visited a special wards with there, they were cooking food and other eatables for the patient and their family members. Please stop such things in the best interests of patients and their treatment, Further, it would be difficult if any new patient were to go to diffierent wards and rooms. Unless you have got guides in hospitals, it is highly impossible for patients to trace out wards and rooms. Therefore, guides must be appointed to educate patients to take them to proper places and to the proper doctor. When you construct hospitals in future, pleaso see that spacious accomodation is left out ; do not make it congested Kindly restrict visiting hours and pass Government orders to this effect. They should go and see within the visiting hours and they shall not take anything which is not prescribed by the Doctor. Sometimes, they take chillies inside the ward, which is prohibited in the case of typoid; it aggravates that fever. I have got so many points to highlight, but, as the Hon. Chair pointed out, I have not enough time at my disposal. Sometimes, I have to priase and many a time I have to critise the Government. When I criticise the Government, they have to tolerate. So far as praising' is concerned, I praise Sri Abdul Samed and the Government for having given us a Medical College and I praise them for having given the K.G. Medical College also. We are thankful to them and we assure the Government that we will come up to their expectation by rendering service to the community at large. Sir. our one thousand bed hospital will help the surronnding four villages. The opening ceremony could not takes place as I had to go to Delhi for an urgent meeting. If you say, collect capitation fee, we will collect and if you say, we have abolished capitation fee, we will not collect it. We do not want to become an hindrance to the general publish. Nevertheless, since you have given a college. please help us to continue our endeavour. Somebody wants a Medical college for muslims. I also support the demand of minorities in the State for establishing a Mnslim Medical College. There is nothing wrong in it.

The Department of Health, is getting medicines and other surgical instruments, I think, 50% from the Government of India and the remaining 50% from different private concerns. Private concerns are exploiting the Government and they are making huge profits out of their transactions with the Government. Now I would like to tell one instance. There is one wonderful company, it used to supply surgical equipments for all the hospitals. They used to approach District Health Officers and ask them to place orders to to that firm for surgical equipments and other needs. If they refuse to place orders, there will be a telephone from the top man from Bangalore. They say, if you do not place orders, you will have to face the consequences. So, we want to know who is that man and which is that Company ? He has already taken an order worth Rs. 40 lakhs. A man who used to go to one private clinic to another, one hospital to another by carrying a bag, with a tie around his collar, and wearing a pair of shoes without polish, has minted crores and crores of rupees. He has become a multi-millioner now. If the District Health Officer places an order, he will be patted by the higher ups. Now, Rs. 40 lakhs has been released and without any budget provision another 20 lakhs of rupees have been released to ten more districts. Therefore, I would only ask the Government whether any action has been taken against this firm and the top man who sits in Bangalore and rings up to all District Health Offices ?

SRI A. K. ABDUL SAMAD.—Have you got the name of that firm ?

SRI C. M. ARUMUGHAM.—The name of that firm is 'Kapali' Secondly, I demand that this matter should be enquired into by the C.O.D. or Vigilance immediately. This firm must be black listed and the Officer—who is supposed to be the top man-must be suspended immediately forfeiting all his earnings. The Departmental action should be taken against this Officer and he should not be entitled for pension and other retirement benefits. Substandard surgical instruments are being supplied by this firm to the Government hospitals continuously. He brings it from some second hand stores and ask you purchase and it has been purchased by the Government If the D.H.O. refuses to place orders, he will be transferred to remote places within no time and he will be served with showcause notices. This is happening in your Department. I have lot of appreciation for the good work of Sri A K. Abdul Samad. He is inspecting hospitals in the State and of. There is one ESI Hospital at Kolar constructed about 2 years back, but so far, neither the

Labour Department nor the Health Department has taken any action to furnish that hospital and put it into use, The other small point that I would like to mention is, the Budget for all Hospitals in the State was decided about 10 years back. It has not been reviewed and revised since then. The cost of medicines have gone up by 10 times. The value of Rs. one lakh about 10 years ago is not even Twenty-five thousand rupees to-day. Usually public are going to the general hospitals because they get free treatment. I request the Government to provide adequate medicines and injections to hospitals. I also urge the government that every taluka hospital must be equipped with X-ray Plant.

With these few words, I thank the Chair for giving me an opportunity to speak.

Thank you.

† ಶ್ರೀ ಎಸ್. ಭೀಮಣ್ಣ ಖಂಡ್ರೆ (ಭಾಲ್ಕಿ).--ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹೆಲ್ತ್ ಮಿನಿಸ್ಟರ್ ತಂದಿರತಕ್ಕಂತಹ ಡಿಮಾಂಡನ್ನು ಸಪೋರ್ಟ್ ಮಾಡುತ್ತಾ ಕೆಲವು ವಿಚಾರಗಳನ್ನು ಹೇಳಲು ಇಷ್ಟಪಡುತ್ತೇನೆ. ಕೆಲವು ಮಾನ್ಯ ಸ್ನೇಹಿತರು ಈ ಡಿಮಾಂಡಿನ ಬಗ್ಗೆ ಬೇರೆ ಬೇರೆ ದೃಷ್ಟಿಯಿಂದ ಮಾತ ನಾಡಿದ್ದಾರೆ. ಅಲೋಪತಿ, ಹೋಮಿಯೋಪತಿ ಆಯುರ್ವೇಧ, ಸಿದ್ಧ ಮತ್ತು ನೇಚರ್ ಕ್ಯೂರ್ ಅಲ್ಲದೆ ಯೋಗ ಇವುಗಳ ಬಗ್ಗೆ ಆರೋಗ್ಯ ಇಲಾಖೆಯವರು ಈ ಅನ್ಯುಯಲ್ ರಿಪೋರ್ಟ್‌ನಲ್ಲಿ ಪೇಜ್ ನಂ ೨೭ರಲ್ಲಿ ನೇಚರ್ ಕ್ಯೂರ್ ಮತ್ತು ಯೋಗಗಳಿಗೆ ೨೦,೦೦೦ ರೂಪಾಯಿಗಳನ್ನು ಕೊಟ್ಟಿದ್ದು ನಾನ್ ಪ್ಲಾನ್‌ಗೆ ೩೪,೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ, ಎಲ್ಲಾ ಸೇರಿ, ೫೪,೦೦೦ ರೂಪಾಯಿಗಳಾಯಿತು. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಈ ಸದನಕ್ಕೆ ಹೇಳಲು ಇಚ್ಛೆಪಡುತ್ತೇನೆ. ಪರಂಪರೆಯ ಭಾರತ ದಲ್ಲಿ ಏನೊಂದು ಸಿಸ್ಟಮ್ ಇದೆ ಇವುಗಳಲ್ಲಿ ನೇಚರ್ ಕ್ಯೂರ್ ಬಹಳ ಮುಖ್ಯವಾದುದು. ಆಲೋಪತಿ ಯಾಗಲೀ, ಹೋಮಿಯೋಪತಿಯಾಗಲೀ ಎಲ್ಲಕಿಂತಲೂ ಯುನಾನಿ ಇನ್‌ಫ್ಲೂಯೆನ್ಸಿಯಲ್ ಇಡೀ ದೇಶಕ್ಕೆ ಸಮಾಜಕ್ಕೆ ಹೆಚ್ಚು ಲಾಭದಾಯಕವಾಗಬೇಕಾದರೆ ನೇಚರ್ ಕ್ಯೂರ್‌ನಿಂದ ಸಾಧ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಈ ವಿಷಯವನ್ನು ಆರೋಗ್ಯ ಇಲಾಖೆಯವರೂ ಕೂಡ ತಿಳಿದುಕೊಂಡಿದ್ದಾರೆ, ಆಸ್ಪತ್ರೆ ಮತ್ತು ಔಷಧಿಗಳ ಬಗ್ಗೆ ಹೇಳಿದ್ದಾರೆ. ಒಂದು ಇಂಜಕ್ಷನ್ ಕೊಟ್ಟರೆ, ರಿಯಾಕ್ಷನ್ ಆಗುತ್ತದೆ. ಮತ್ತೊಂದು ಉದಾಹರಣೆಗೆ ಒಮ್ಮೆ ನನ್ನ ಧರ್ಮಪತ್ನಿಗೆ ಆಪರೇಷನ್ ಮಾಡಿಸಿದಾಗ, ಸರಿಯಾಗಿ ಅಪ ರೇಷನ್ ಮಾಡದೆ ೪ ಸಾರಿ ಆಪರೇಷನ್ ಮಾಡಲಾಗಿದೆ. ನಮ್ಮಂತಹವರ ಗತಿ ಈಗಾಗದರೆ ಇನ್ನು ಬಡಜನರ ಗತಿ ಏನಾಗಬೇಕು ? ಒಂದು ಸಾರಿ ಅಪರೇಷನ್ ಮಾಡುವುದಕ್ಕೆ ೪ ಸಾರಿ ಮಾಡುತ್ತಾರೆ, ಇಂಜಕ್ಷನ್ ಗಳನ್ನು ಕೊಟ್ಟರೆ ರಿಯಾಕ್ಷನ್ ಆಗುತ್ತದೆ. ಯಾವ ಕಾಯಿಲೆಗೆ ಯಾವ ಔಷಧಿಯನ್ನು ಕೊಡಬೇಕೆಂದು ಸರಿಯಾಗಿ ತಿಳಿದುಕೊಂಡಿರುವುದಿಲ್ಲ, ಇರುವ ಖಾಯಿಲೆ ಒಂದು, ಅವರು ಕೊಡುವ ಔಷದಿಯೇ ಒಂದು. ನೇಚರ್ ಕ್ಯೂರ್‌ನಿಂದ ಪಂಚಭೂತಗಳು ಶುದ್ಧಿಯಾಗುತ್ತವೆ. ಪಂಚಭೂತಗಳು ಶುದ್ಧಿ ಯಾದರೇ ಮನಸ್ಸು ಶುದ್ಧಿಯಾಗಿರುತ್ತದೆ. ಮುಖ್ಯವಾಗಿ ಸೂರ್ಯ ಪ್ರಕಾಶ, ಗಾಳಿ, ಬೆಳಕು. ನೀರುಗಳ ಮಾನವನಿಗೆ ದೊರಕಿದರೆ ಅದರಿಂದ ಮೂರು ಪ್ರಕಾರವಾಗಿ ಶರೀರ ಶುದ್ಧಿಯಾಗು ತ್ತದೆ. ಶರೀರ ಶುದ್ಧಿ, ಮನಸ್ಸು ಶುದ್ಧಿ ಮತ್ತು ಆತ್ಮಶುದ್ಧಿ ಬರುತ್ತದೆ ನಮಗೆ ಸ್ವಾತಂತ್ರ್ಯ ಬಂದು ೩೩ ವರ್ಷಗಳಾದರೂ ನಾವು ಇವತ್ತು ಎಲ್ಲಿ ನೋಡಿದರೂ ಶರೀರಶುದ್ಧಿ ಇರುವುದಿಲ್ಲ. ನಾವು ಇವತ್ತು ೨೦ನೇ ಶತಮಾನದಲ್ಲಿದ್ದೇವೆ ನೀವು ಕೂಡ ಅಭ್ಯಾಸ ಮಾಡಿ ನೋಡಿದರೆ ಗೊತ್ತಾಗುತ್ತದೆ. ಇವತ್ತು ನಾನು ಇಂಡಿಯಾ ಟು--ಡೇ ಮ್ಯಾಗಜೀನ್‌ನಲ್ಲಿ ಒಂದು ವಿಷಯವನ್ನು ನೋಡಿದೆ. ಅದರಲ್ಲಿ ಏನಿದೆ ಅಂದರೆ ೧೯೫೭ನೇ ಚುನಾವಣೆಯಲ್ಲಿ ನೆಹರೂ ಶರ್ಟ್ ಇದೆ, ೧೯೬೨ರಲ್ಲಿ ಜುಬ್ಬ ಇದೆ, ೧೯೬೭ರಲ್ಲಿ ಶರ್ಟ್ ಹೋಗಿ ಪೈಜಾಮ ಬಂತು ೧೯೭೫ರಲ್ಲಿ ಪೈಜಾಮ ಹೋಯಿತು, ೧೯೭೭ರಲ್ಲಿ ಬರೀ ಬೆತ್ತಲೆ ಇದೆ, ೧೯೮೩ಕ್ಕೆ ಏನು ಬರುತ್ತದೆ ಎಂಬುದನ್ನು ಚೆನ್ನಾಗಿ ತೋರಿಸಿದ್ದಾರೆ, ಈ ಪ್ರಕಾರ ನಾವು ಎಷ್ಟರ

ಮಟ್ಟಿಗೆ ಮುಂದುವರಿಯುತ್ತಿದ್ದೇವೆ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ ಜನರಿಗೆ ನಾಲ್ಕು ಸ್ಟ್ರೀಟ್ ಲೈಟು, ರಸ್ತೆಗಳನ್ನು ಮಾಡಿ ಕೊಟ್ಟು ಬಹಳ ದೊಡ್ಡ ಕೆಲಸ ಮಾಡಿದ್ದೇವೆಂದು, ಮೆಡಿಕಲ್ ಕಾಲೇಜು ಗಳನ್ನು ಕೊಟ್ಟಿದ್ದೇವೆಂದು ಹೇಳಿಕೊಳ್ಳುತ್ತೇವೆ. ಇವತ್ತು ಪ್ರವೇಟ್ ಮೆಡಿಕಲ್ ಕಾಲೇಜಿನವರು ಒಂದು ಸೀಟಿಗೆ ೧ ಲಕ್ಷದ ೬೦ ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ಸಮಾಜದ ನೀತಿಗಳೇನು ಎಂಬುದನ್ನು ನಾವು ತಿಳಿದುಕೊಳ್ಳಬೇಕು. ನಾವು ದುಡ್ಡಿಗೆ ಪರೀಕ್ಷೆಗಳನ್ನು ಮಾಡುವುದಾ ದರೆ, ನಮ್ಮ ನೈತಿಕಮಟ್ಟ ಏನಾಗುತ್ತದೆಂಬುದು ತಮಗೆಲ್ಲರಿಗೂ ಗೊತ್ತಿದೆ, ನಾವು ಇವೆಲ್ಲವುಗಳನ್ನು ಸರಿಮಾಡಬೇಕಾದರೆ ನಮ್ಮ ಶಿಕ್ಷಣ ಪದ್ಧತಿ ಬದಲಾವಣೆಯಾಗಬೇಕು ನಾವು ಔಷಧಿಗಳಿಗಾಗಿ ಹಣವನ್ನು ಕೊಡುತ್ತಿದ್ದೇವೆ ಆದ್ದರಿಂದ ಶರೀರ, ಮನಸ್ಸು ಮತ್ತು ಮಾನಸಿಕಸ್ಥಿತಿ ಗುಣಮುಖವಾಗಬೇಕು. ರೋಗ ವಾಸಿಯಾಗಬೇಕು. ಇವತ್ತು ಇದಾವುದು ಆಗುತ್ತಿಲ್ಲ ಇದಕೋಸ್ಕರ ನಾವು ಕೋಟ್ಯಾಂತರ ರೂಪಾಯಿ ಗಳನ್ನು ಖರ್ಚುಮಾಡುತ್ತಿದ್ದೇವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನೇಚರ್ ಕ್ಯೂರ್‌ಗೆ ೨೦ ಸಾವಿರ ೩೦ ಸಾವಿರ ಹಣ ಕೊಟ್ಟರೆ ಏನು ಆಗುವುದಿಲ್ಲ, ಕೊಟ್ಟರತಕ್ಕ ಹಣ ಬಹಳ ಕಡಿಮೆಯ್ಯಾ ಯಿತು. ಆರೋಗ್ಯಕೋಸ್ಕರ ಇಷ್ಟೊಂದು ಹಣವನ್ನು ಖರ್ಚುಮಾಡುತ್ತಿದ್ದೇವೆ, ಅದರಲ್ಲಿ ೧/೧೦ ಭಾಗ ಹಣವನ್ನು ನೇಚರ್ ಕ್ಯೂರ್‌ಗೋಸ್ಕರ ಖರ್ಚುಮಾಡಿದರೆ ಅದರ ರಿಸಲ್ಟ್‌ನ್ನು ನಾನು ತೋರಿಸಿ ಕೊಡುತ್ತೇನೆ. ಈ ಮಾತನ್ನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ನೇಚರ್ ಕ್ಯೂರ್, ಯೋಗಾಸನವನ್ನು ನಾನು ಮುಂದುವರಿಸಿಕೊಂಡು ಬರುತ್ತಿದ್ದೇನೆ. ಶರೀರ ಸ್ವಚ್ಛ ಮಾಡುವುದರಲ್ಲಿ ನಾನು ದೋತಿ ಬಟ್ಟೆಯನ್ನು ನೀರಿನಲ್ಲಿ ಹದ್ದಿ ಹುಂಡೆಮಾಡಿ ನುಂಗಿ ವಾಪಸ್ಸು ತೆಗೆಯುತ್ತೇನೆ, ಬಟ್ಟೆ ಒಳಗೆಡೆ ಹೋಗಿ, ಹೊರಗೆ ಬಂದರೆ ಎಲ್ಲಾ ಸ್ವಚ್ಛವಾಗುತ್ತದೆ. ಈ ವಿಷಯ ನಮ್ಮ ಬಾಸ್ಕರ ಶೆಟ್ಟಿಯ ವರಿಗೂ ಗೊತ್ತಿದೆ. ಈ ರೀತಿ ಮಾಡುವುದರಿಂದ ಹುಬ್ಬಸ ರೋಗ ಬರುವುದಿಲ್ಲ. ಹಿನಿಮಾ ಔಷಧಿ ಯನ್ನು ಕೊಟ್ಟು ಸ್ವಚ್ಛ ಮಾಡುವುದನ್ನು ನಾವೆಲ್ಲರೂ ನೋಡಿದ್ದೇವೆ, ಅದಕ್ಕೆ ಬದಲಾಗಿ ಅಸನ ಹಾಕಿ ದರೆ ಹೊಟ್ಟೆಯನ್ನು ಸ್ವಚ್ಛಮಾಡಬಹುದು. ಒಂದೊಂದು ರೋಗಕ್ಕೂ ಒಂದೊಂದು ಆಸನಗಳಿವೆ, ಆ ರೀತಿ ನಾವು ಮಾಡಿದ್ದ ಆದರೆ, ರೋಗಗಳು ಗುಣಮುಖವಾಗುತ್ತವೆ. ಯೋಗಾಸನಗಳನ್ನು ಮಾಡಿದರೆ ಶರೀರ ಶುದ್ಧಿಯಾಗುತ್ತದೆ. ಔಷಧಿಗಳಿಗಾಗಿ ಖರ್ಚುಮಾಡತಕ್ಕ ಹಣವನ್ನು ನೇಚರ್ ಕ್ಯೂರ್‌ಗೋಸ್ಕರ ಖರ್ಚುಮಾಡಿದರೆ ಬಹಳ ಉಪಯೋಗವಾಗುತ್ತದೆ. ಆದರ ಜೊತೆಗೆ ಯೋಗಾಸನ ಮಾಠಗಳನ್ನು ತೆರೆಯುವುದು ಉತ್ತಮ. ಮಿರಜ್‌ನಲ್ಲಿ ಕೇಂದ್ರ ಸರ್ಕಾರದ ಕ್ಷಯರೋಗ ಅಸ್ಪತ್ರೆ ಇದೆ, ಅಲ್ಲಿ ಕ್ಷಯ ರೋಗಿಗಳು ಹೋಗುತ್ತಾರೆ ಹೋದವರೆಲ್ಲ ಕಾಯಿಲೆಯನ್ನು ವಾಸಿಮಾಡಿಕೊಂಡು ಬರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಶರೀರ ಸ್ವಚ್ಛವಾಗಬೇಕಾದರೆ ಯೋಗಾಸನಗಳನ್ನು ಮಾಡ ಬೇಕು. ಯೋಗಾಸನಗಳ ಕಾಲೇಜುಗಳನ್ನು ತೆರೆಯಬೇಕು, ಅದರ ಮುಖಾಂತರ ಜನರಿಗೆ ಅನುಕೂಲ ಮಾಡಿಕೊಡಬೇಕು. ಮಾನ್ಯ ಆರೋಗ್ಯಮಂತ್ರಿಗಳಾದ ಸಮುದ್‌ರವರು ಕಳೆದ ವರ್ಷ ೧೯೮೦–೮೧ನೇ ಸಾಲಿನ ಬಡ್ಜೆಟ್ ಬಾಷಣದಲ್ಲಿ ನೇಚರ್ ಕ್ಯೂರ್ ಬಗ್ಗೆ ಕೆಲವು ವಿಚಾರಗಳನ್ನು ತಂದಿದ್ದರು. ಗಾಂಧಿ ಸಮಿತಿಯವರು ಕರ್ನಾಟಕ ರಾಜ್ಯ ನೇಚರ್ ಕ್ಯೂರ್ ಸಮ್ಮೇಳನವನ್ನು ಏರ್ಪಾಡು ಮಾಡಿದ್ದರು. ಆ ಸಮ್ಮೇಳನದಲ್ಲಿ ಮಾನ್ಯ ಆರೋಗ್ಯ ಸಚಿವರು ಮಾತನಾಡುತ್ತಾ ನನಗೂ ಕೂಡ ನೇಚರ್ ಕ್ಯೂರ್ ಬಗ್ಗೆ ಇಂಟರೆಸ್ಟ್ ಇದೆ, ಆ ಕಡೆಗೆ ಹೆಚ್ಚು ಹಣ ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಹೈದರಾಬಾದ್‌ನಲ್ಲಿ ಡಾಕ್ಟರ್ ವೆಂಕಟರಾಮ್‌ರವರು. ಯುಮನ್ ಬಾಡಿ ಸರ್ವೀಸ್ ಸೆಂಟರ್. ಎಂದು ತೆರೆದಿದ್ದಾರೆ. ಅದು ಜಸ್ಟ್ ಲೈಕ್ ಎ ಮೋಟಾರು ಬಾಡಿ ಸರ್ವೀಸಿಂಗ್ ಸೆಂಟರ್ ಇದ್ದ ಹಾಗೆ. ಇದೆ ಅಲ್ಲಿ ಸಾವಿರಾರು ಜನರು ಹೆಚ್ಚು ಖರ್ಚಿಲ್ಲದೆ ಚಿಕಿತ್ಸೆಯನ್ನು ಪಡೆಯುತ್ತಿದ್ದಾರ. ಈ ಸೆಂಟರನ್ನು ಗ್ರಾಮಾಂತರ ಪ್ರದೇಶ ಗಳಿಗೂ ವಿಸ್ತರಿಸುವ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಹಳ್ಳಿಗಾಡಿನ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಡಿಸ್ ಪೆನ್ಸರಿಗಳನ್ನು ತೆರೆಯಬೇಕು. ಡಿಸ್‌ಪೆನ್ಸರಿಗಳಲ್ಲಿ ಔಷದ ಇದ್ದರೆ, ಡಾಕ್ಟರ್ ಇರುವುದಿಲ್ಲ. ಡಾಕ್ಟರ್ ಇದ್ದರೆ ಔಷಧಿ ಇರುವುದಿಲ್ಲ, ಈ ರೀತಿ ಆಗಬಾರದು.

ಶ್ರೀಮಾನ್ ಆರುಮುಗಂರವರೂ ಕೂಡ ಈ ಬಗ್ಗೆ ಒಳ್ಳೆಯ ಸಲಹೆಯನ್ನು ಹೇಳಿದ್ದಾರೆ ಈ ಸಂದರ್ಭ ದಲ್ಲಿ ಮಾನ್ಯ ಮಂತ್ರಿಗಳನ್ನು ನಾನು ಕೇಳುವುದು ಇಷ್ಟೆ. ಈವಾಗ ಅರ್ಬನಏರಿಯಾದಲ್ಲಿ, ಸಿಟಿಗಳಲ್ಲಿ ಇರುದ ಆಸ್ಪತ್ರೆಗಳಿಗೆ ಹಾಗೂ ವಿಕ್ಟೋರಿಯಾ ಆಸ್ಪತ್ರೆಗಳಿಗೆ ಏನು ಹಣ ಖರ್ಚು ಮಾಡುತ್ತಿದ್ದಿರೋ ಅದರ ಅರ್ಧ ಭಾಗದಷ್ಟು ಹಣವನ್ನು ಈ ನೇಚರ್ ಕ್ಯೂರ್‌ಗೆ ಖರ್ಚು ಮಾಡಿದರೆ ಸಾಕು. ಇದರಿಂದ

ರೂರಲ್ ಏರಿಯಾದ ಜನಗಳಿಗೆ ಬಹಳ ಅನುಕೂಲವಾಗುತ್ತದೆ. ರೂರಲ್ ಏರಿಯಾದಲ್ಲಿ ಈ ಪ್ರಕೃತಿ ಚಿಕಿತ್ಸೆ ವಿಧಾನ ಹೆಚ್ಚು ಹೆಚ್ಚಾಗಿ ಬರಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ೧೯೬೨ ರಿಂದಲೂ ನಾನು ಎಂ. ಎಲ್. ಎ. ಆಗಿ ಈ ಬಗ್ಗೆ ಏನು ಕೆಲಸ ನಡೆಯುತ್ತಾ ಇದೆ ಅನ್ನುವುದನ್ನು ನೋಡುತ್ತಾ ಇದ್ದೇನೆ. ಸರಿಯಾದ ರೀತಿಯಲ್ಲಿ ಇದರ ಪ್ರಚಾರ ಎಲ್ಲೂ ಆಗಿಲ್ಲಾ. ಅಷ್ಟೇ ಅಲ್ಲ ಇದಕ್ಕಾಗಿ ಹೆಚ್ಚು ಬಡ್ಜೆಟ್ ಕೂಡ ಇಟ್ಟಿಲ್ಲಾ. ರೂರಲ್ ಏರಿಯಾದಲ್ಲೂ ಮತ್ತು ಅರ್ಬನ್ ಏರಿಯಾ ದಲ್ಲೂ ಇಂಪ್ರೂ ಮಾಡುವುದಕ್ಕೆ ಹೆಚ್ಚು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಇದು ಯೋಗ್ಯ ಇದೆ, ಇದರ ಬಗ್ಗೆ ತಾವು ಗಮನ ಕೊಡಬೇಕು. ಇದು ಒಂದು ಪಾಲಿಸಿ ಮ್ಯಾಟರ್ ಅಂತ ಹೇಳುವು ದಾದರೆ ತಪ್ಪಾಗುತ್ತದೆ, ನಾನು ಒಪ್ಪುವುದಿಲ್ಲ. ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂ ನಲ್ಲಿ ಯಾವ ಯಾವ ಭಾಗದಲ್ಲಿ ಯಾವ ಯಾವ ಜನಸಾಮಾನ್ಯರು ಇದ್ದಾರೆ ಅವರಿಗೆ ಇದರ ವಿಧಾನವನ್ನು ತೋರಿಸಿ ಇದರಲ್ಲಿ ಏನು ತಪ್ಪು ಇದೆ ಅನ್ನುವುದನ್ನು ಕಂಡುಹಿಡಿದು ಇದರ ಮೇಲೆ ಆಕ್ಷನ್ ತೆಗೆದುಕೊಳ್ಳ ಬೇಕು, ಹಾಗೆ ಮಾಡದೇ ಇದು ಸರ್ಕಾರದ ಪಾಲಿಸಿ. ಈ ರೀತಿ ಮಾಡಬೇಕು ಸುಮ್ಮಸುಮ್ಮನೆ ಹೇಳಿದರು ಆ ಮಾತಿಗೆ ನಾನು ಒಪ್ಪುವುದಿಲ್ಲ. ಆ ರೀತಿ ಹೇಳುವುದೂ ಸರಿಯಲ್ಲ. ಹಾಗೆ ಏನಾದರೂ ಹೇಳಿದರೆ ನೀವು ಸಮಾಜವಾದಿ ಸಮಾಜವಾದ ರೀತಿ ಏನು ಇದೆಯೋ ಅದಕ್ಕೆ ವಿರುದ್ಧವಾಗಿ ಹೋಗುತ್ತಿ ದ್ದೀರಿ ಅಂತ ನಾನು ಹೇಳಬೇಕಾಗುತ್ತದೆ. ಯಾವಾಗಲೂ ತಾವು ಸಮಾಜವಾದೀ ಸಮಾಜದ ತತ್ವವನ್ನೇ ಹೇಳುತ್ತಿದ್ದೀರಿ. ನಮ್ಮ ಮಾನ್ಯ ಸದಸ್ಯರೊಬ್ಬರು ಹೇಳಿದ ಹಾಗೆ ಈವೊತ್ತಿನ ದಿವಸ ಒಂದು ಮೆಡಿಕಲ್ ಸೀಟಿಗೆ ಒಂದು ಲಕ್ಷ ೬೦ ಸಾವಿರ ರೂಪಾಯಿಯನ್ನು ತೆಗೆದುಕೊಂಡು ಕೊಟ್ಟಿದ್ದಾರಲ್ಲಾ. ಇದು ಎಂತಹ ಸಮಾಜವಾದೀ ಸಮಾಜದ ತ್ವತ ಹೇಳಿ. ಈ ಬಗ್ಗೆ ಹೇಳಬೇಕಾದರೆ ಇದು ಎಲ್ಲಿಂದ ಶುರು ವಾಯಿತು ಎಂದರೆ ನನಗೆ ಗೊತ್ತಿರುವ ಹಾಗೆ ಮೊದಲು ಒಂದು ಸೀಟಿಗೆ ೨ ಸಾವಿರ ಇತ್ತು, ನಂತರ ೪ ಸಾವಿರ ಆಯಿತು, ನಂತರ ೫-೬ ಸಾವಿರಕ್ಕೆ ಬಂತು ಹೀಗೆ ವರ್ಷೇ ವರ್ಷೇ ಹೆಚ್ಚುತ್ತಾ ಹೋಗಿ ಈವೊತ್ತು ಒಂದು ಸೀಟಗೆ ೧ ಲಕ್ಷ ೬೦ ಸಾವಿರಕ್ಕೆ ಬಂದಿದೆ. ಮುಂದಿನ ವರ್ಷ ಇದು ೩ ಲಕ್ಷಕ್ಕೆ ಬರು ತ್ತದೋ ಏನೋ ? ಒಟ್ಟಿನಲ್ಲಿ ಹೇಳುವುದಾದರೆ ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಟ್ಟು ಇದನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಮೇಡಿಕಲ್ ಕಾಲೇಜುಗಳನ್ನು ಕೆಲವು ಕಡೆ ಕೊಡುವುದರಲ್ಲಿ ನನ್ನ ವಾದ ಇಲ್ಲ ಪ್ರತಿ ಯೊಂದು ಸ್ಥಳದಲ್ಲೂ ಕೂಡ ಒಂದೊಂದು ಮೆಡಿಕಲ್ ಸರ್ವಿಸಸ್ ಬಂದರೆ ಬಹಳ ಒಳ್ಳೆಯದು, ನಾನು ಅದನ್ನು ಸ್ವಾಗತ ಮಾಡುತ್ತೇನೆ. ಅಧ್ಯಕ್ಷರೇ, ಇನ್ನೊಂದು ಕುತೂಹಲಕಾರಿಯಾದ ಕೋಮುವಾರು ವಿಚಾರ ಏನು ಇದೆ ಅದನ್ನು ನಾನು ಒಪ್ಪುವುದಿಲ್ಲ. ಈ ವಿಷಯದಲ್ಲಿ ನಾನು ಒಂದೆರಡು ಮಾತನ್ನು ಹೇಳಬೇಕಾಗಿದೆ. ಮೊದಲು ನಮ್ಮಲ್ಲಿ ಪ್ರಾಂತ ರಚನೆ ಆಯಿತು ನಂತರ ಏನೇನು ಉದ್ಭವಿಸಿತು ಅನ್ನುವುದನ್ನು ತಾವೆಲ್ಲರೂ ಈಗಾಗಲೇ ನೋಡಿದ್ದೀರಿ. ಆ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ, ಒಟ್ಟಿನಲ್ಲಿ ಹೇಳ ಬೇಕಾದರೆ ಈವೊತ್ತಿನ ದಿವಸ ಒಂದೊಂದು ಕೋಮಿಗೆ ಒಂದೊಂದು ಮೆಡಿಕಲ್ ಕಾಲೇಜನ್ನು ಕೊಡಿ ಅನ್ನುವ ವಾದ ಮಾಡುವುದಾದರೆ ಮುಂದೆ ಇದು ಯಾವ ಮಟ್ಟಕ್ಕೆ ಹೋಗು ತ್ತದೋ ಗೊತಿಲ್ಲ. ಮೊದಲು ಈ ಬಗ್ಗೆ ಭಾಷಾವರು ಪ್ರಾಂತ ರಚನೆ ಆಯಿತು, ಅವೆಲ್ಲ ಪೇಪರ್‌ನಲ್ಲಿ ಬಂದಿದೆ, ನಾನು ಹೇಳಬೇಕಾದ್ದಲ್ಲಾ. ಈವೊತ್ತಿನ ದಿವಸ ಈ ಬಗ್ಗೆ ಇನ್‌ಕರೆಕ್ಟ್ ರಾಂಗ್ ಪಾಲಿಸಿ ಏನು ಇದೆ ಅದು ಸರಿಯಲ್ಲ. ಆ ರೀತಿ ಮಾಡಿದರೆ ಮುಂದೆ ಪ್ರತಿಯೊಂದು ಜಾತಿಯವರೂ ಕೂಡ ನಮಗೆ ಒಂದು ಸ್ಥಾನ ಬೇಕು, ನಮಗೆ ಒಂದು ಸ್ಥಾನ ಬೇಕು, ಸಿಖ್‌ರು ಮುಂತಾದವರೆಲ್ಲಾ ಕೇಳುತ್ತಾ ಬರುತ್ತಾರೆ. ಆದುದರಿಂದ ಈ ಪಾಲಿಸಿ ಸರಿಯಲ್ಲ ಎಂದು ಹೇಳುತ್ತೇನೆ. ಅಷ್ಟೆ.

ಇನ್ನು ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಅನೇಕ ಸದಸ್ಯರು ಹೇಳಿರುವುದರಿಂದ ಆ ಬಗ್ಗೆ ನಾನು ಹೇಳು ವುದಕ್ಕೆ ಹೋಗುವುದಿಲ್ಲ. ನಮ್ಮ ಬೀದರ್ ಜಿಲ್ಲೆ ಬಗ್ಗೆ ಮಾತ್ರ ನಾನು ಹೇಳುತ್ತೇನೆ. ಇಲ್ಲಿ ಒಂದು ಆಸ್ಪತ್ರೆ ಕಟ್ಟಡ ಕಟ್ಟಬೇಕು ಎಂದು ಒಂದು ಯೋಜನೆ ಮಾಡಿ ಬಹಳ ವರ್ಷವಾಯಿತು. ಮೊದಲು ನಮ್ಮ ಬೀದರ್ ಜಿಲ್ಲೆಗೆ ೪ ತಾಲ್ಲೂಕು ಸೇರಿದಾಗ ಯಾವ ಒಂದು ಹಳೇ ಆಸ್ಪತ್ರೆ ಇತ್ತೋ ಅದೇ ಇದೆ. ಸುಮಾರು ಆ ಕಟ್ಟಡ ಕಟ್ಟಿ ೫೦ ವರ್ಷವಾಗಿರಬಹುದು. ಈಗ ಹೊಸ ಅಡ್ಮಿನಿಸ್ಟ್ರೇಟರ್ ಬಂದಿದ್ದಾರೆ. ಕೇಳಿದರೆ, ಸ್ಯಾಂಕ್ಷನ್ ಆಗಬೇಕು ಎಂದು ಹೇಳುತ್ತಾರೆ. ಈಗಲಾದರೂ ಕೂಡ ೪೦,೫೦ ಲಕ್ಷ ರೂಪಾಯಿನಾದರೂ ಕೊಟ್ಟು ಅಲ್ಲಿ ಆಸ್ಪತ್ರೆ ಕಟ್ಟಡವನ್ನು ಕಟ್ಟಬೇಕು ಎಂದು ಕೇಳಿಕೊಳ್ಳುತ್ತೇನೆ,

ಇನ್ನೂ ಲೆಪ್ರಸಿ ಬಗ್ಗೆ, ಈ ಟಿ. ಬಿ. ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಈ ಒಂದು ಭಯಂಕರವಾದ ರೋಗ ಹಾಗೆಯೇ ಇದೆ. ಇದರ ಬಗ್ಗೆ ತಾವು ವಿಶೇಷ ಗಮನ ಕೊಡುವುದು ಮುಖ್ಯ. ನಾನು ಈ ಬಗ್ಗೆ ಏನು ಆಸೆಪಟ್ಟು ಕೊಂಡಿದ್ದೇನೆ ಎಂದರೆ ನಮ್ಮ ಆರೋಗ್ಯ ಮಂತ್ರಿಗಳು ಈ ನೇಚರ್‌ಕ್ಯೂರ್ ಬಗ್ಗೆ ಏನಾದರೂ ಒಂದು ಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿದಿದ್ದೆ. ಈಗಲಾದರೂ ಕೂಡ ನಾನು ಮೊದಲೆ ಹೇಳಿದ ಹಾಗೆ ಹೈದ್ರಾಬಾದ್ ಟೈಪ್‌ನಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗಾಸನದ ಬಗ್ಗೆ ಒಂದು ಕಾಲೇಜನ್ನು ಆರಂಭಿಸಿ ಪ್ರತಿಯೊಂದು ಸ್ಥಳದಲ್ಲೂ ಕೂಡ ಒಂದೊಂದು ಆಸ್ಪತ್ರೆಯನ್ನು ಮಾಡಬೇಕು ಎಂದು ಹೇಳುತ್ತೇನೆ. ಆ ರೀತಿ ಈ ವರ್ಷವಾದರೂ ಮಾಡುತ್ತಾರೆಂದು ನಾನು ಆಸೆ ಮಾಡಿಕೊಂಡಿದ್ದೇನೆ. ಈವಾಗ ಈ ಬಗ್ಗೆ ಒಂದು ಬೋರ್ಡ್ ಮಾಡುತ್ತಿದ್ದಾರೆ, ಕೊನೆಯದಾಗಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನೀವು ಈಗ ಏನು ಖರ್ಚು ಮಾಡುತ್ತಿದ್ದೀರಿ ಇದರಲ್ಲಿ ಹತ್ತನೆ ಒಂದು ಭಾಗವಾದರೂ ಖರ್ಚು ಮಾಡಿದರೆ ಈ ನೇಚರ್ ಕ್ಯೂರ್‌ನಿಂದ ಒಳ್ಳೆಯ ರಿಸಲ್ಟ್ ಬರುತ್ತದೆ. ಆ ರೀತಿ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಶಿವಪ್ಪ (ಹರಿಹರ).— ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಮಂತ್ರಿಗಳು ತಂದಿರತಕ್ಕಂಥಾ ಈ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಹಾಗೂ ಇದರ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡಲು ಇಚ್ಛೆಪಡುತ್ತೇನೆ ನಾನು ಈ ಬಗ್ಗೆ ಏನು ಭಾವಿಸಿದ್ದೆ ಎಂದರೆ ಈ ಆನ್ಯೂಯಲ್ ರಿಪೋರ್ಟ್‌ನಲ್ಲಿ ಸರ್ಕಾರದ ನೀತಿ ಮತ್ತು ಧೋರಣೆ ಬಗ್ಗೆ ಏನಾದರೂ ಹೇಳುತ್ತಾರೆಂದು ಅಲ್ಲದೆ ನಾನು ಹಿಂದೆ ಇದರ ಬಗ್ಗೆ ಒಂದು ಪ್ರಶ್ನೆಯನೂ ಸಹ ಹಾಕಿದ್ದೆ. ಏನಂತ ಅಂದರೆ ರಾಜ್ಯದಲ್ಲಿ ಇದುವರೆಗೆ ಎಷ್ಟು ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಿದ್ದೀರಿ ಇದರ ಬಗ್ಗೆ ಸರ್ಕಾರದ ಒಂದು ನೀತಿ ಏನು ಹಾಗೂ ಅದರ ಧೋರಣೆ ಏನು ಅಂತ. ಅದಕ್ಕೆ ಇದುವರೆಗೂ ಕೂಡ ಸರಿಯಾದ ಉತ್ತರವನ್ನು ತಿಳಿಸಲಿಲ್ಲಾ. ಹಾಗಾದರೆ ನಾನು ಕೇಳುತ್ತೇನೆ ರಾಜಕೀಯ ಒತ್ತಡದಿಂದ ಏನಾದರೂ ಕೂಡ ಜೋರಾಗಿ ಪ್ರೆಷರ್ ಬಂದಾಗ ಇಂಥಾ ವೈದ್ಯಕೀಯ ಕಾಲೇಜುಗಳನ್ನು ಕೊಡುವುದು ಸರ್ಕಾರದ ನೀತಿಯೇ? ಅಥವಾ ಒಬ್ಬ ಡಾಕ್ಟರ್‌ಗೆ ಎಷ್ಟು ಜನರು ಇರಬೇಕು, ಆ ಪಾಲಿಸಿ ಪ್ರಕಾರ ಡಾಕ್ಟರ್ ರೇಷಿಯೋ ಏನಾದರೂ ಮಾಡಿದ್ದೀರಿ. ಇಂತಿಷ್ಟು ಜನಸಂಖ್ಯೆಗೆ ಇಂತಿಷ್ಟು ಡಾಕ್ಟರ್ ಇರಬೇಕು ಅನ್ನುವ ರೇಷಿಯೋ ಇದೆಯೇ? ನನಗೆ ತಿಳಿದಿರುವ ಹಾಗೆ ಇದರಲ್ಲಿ ಸರಿಯಾದ ಒಂದು ನೀತಿ ಇಲ್ಲ. ಒಂದು ಧೋರಣೆ ಇಲ್ಲಾ. ಈ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡಬೇಕಾದರೆ ಮೂಲತಃ ಯಾವುದಾದರೂ ಒಂದು ತತ್ವದ ಮೇಲಾಗಲಿ ಅಥವಾ ಧೋರಣೆ ಮೇಲಾಗಲಿ ಇರಬೇಕು, ಆರೀತಿ ಏನಾದರೂ ಇದೆಯೇ ಎಂದು ಮಾನ್ಯ ಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಇನ್ನು ಮುಂದಾದರೂ ಕೂಡ ಸರಿಪಡಿಸಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ವೈದ್ಯಕೀಯ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಬೇಕೆಂದು ಬಹುದಿನಗಳಿಂದಲೂ ಒಂದು ಬೇಡಿಕೆ ಇದೆ. ಈ ಬಗ್ಗೆ ಸರ್ಕಾರ ಏನಾದರೂ ಆಸೆ ಪಟ್ಟಿದ್ದರೆ, ಏನಾದರೂ ಮನಸ್ಸು ಮಾಡಿದ್ದರೆ ಈ ವಿಶ್ವವಿದ್ಯಾನಿಲಯವನ್ನು ದಾವಣಗೆರೆ–ಹರಿಹರ ಮಧ್ಯದಲ್ಲಿ ಸ್ಥಾಪನೆ ಮಾಡಬೇಕು ಎಂದು ಹೇಳುತ್ತೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ದಾವಣಗೆರೆ ಯೋಗ್ಯವಾದ ಸ್ಥಳ ಅದಕ್ಕೆ ಹೇಳುತ್ತಿದ್ದೇನೆ. ಅಷ್ಟೇ ಅಲ್ಲದೆ ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲೂ ಒಂದೊಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದ್ದೀರಿ. ಉದಾಹರಣೆಗೆ ಮೈಸೂರು ವಿಶ್ವವಿದ್ಯಾನಿಲಯ ಇದೆ, ಬೆಂಗಳೂರು ವಿಶ್ವವಿದ್ಯಾನಿಲಯ ಇದೆ. ಮಂಗಳೂರು ವಿಶ್ವವಿದ್ಯಾನಿಲಯ ಇದೆ. ಗುಲ್ಬರ್ಗ ವಿಶ್ವವಿದ್ಯಾನಿಲಯ ಇದೆ ಅಲ್ಲದೆ ಧಾರವಾಡ ವಿಶ್ವವಿದ್ಯಾನಿಲಯ ಅಂತ ಇದೆ. ಇಲ್ಲೆಲ್ಲಾ ವಿಶ್ವವಿದ್ಯಾನಿಲಯಗಳು ಇರುವುದರಿಂದ ಈ ವೈದ್ಯಕೀಯ ವಿಶ್ವವಿದ್ಯಾನಿಲಯವನ್ನು ನಮ್ಮ ದಾವಣಗೆರೆಯಲ್ಲಿ ಸ್ಥಾಪನೆ ಮಾಡುವುದು ಒಳ್ಳೆಯದು, ಅಲ್ಲೇ ಮಾಡಬೇಕೆಂದು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಕ್ಯಾಪಿಟೇಷನ್ ಫೀ ವಿಚಾರದ ಬಗ್ಗೆ ಈಗ ಒಂದು ದಾಂಧಲೆ ಎದ್ದಿದೆ. ಈಗ ಈ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ದೊರಕುವುದು ಹೇಗೆಂದರೆ ಮೆರಿಟ್ ೬೫ ಭಾಗ ಎಂತಲೂ ಇನ್ನು ಉಳಿದವು ೩೫ ಭಾಗ ಏನು ಇದೆ ಅದಕ್ಕೆ ಎಷ್ಟು ಬೇಕಾದರೂ ಶುಲ್ಕ ತೆಗೆದುಕೊಂಡು ಮ್ಯಾನೇಜ್‌ಮೆಂಟ್‌ನವರು ಕೊಡುತ್ತಾರೆ. ಅದಕ್ಕೇನೂ ಅರ್ಹತೆ ಬೇಕಾಗಿಲ್ಲಾ. ಅವರು ಆತನ ಹತ್ತಿರ ಒಂದು ಲಕ್ಷ ಬೇಕಾದರೂ ತೆಗೆದುಕೊಳ್ಳಬಹುದು, ಎರಡು ಲಕ್ಷ ಬೇಕಾದರೂ ತೆಗೆದುಕೊಳ್ಳಬಹುದು. ಈ ಒಂದು ಶುಲ್ಕದ ಮೇಲೆ ಸೀಟು

ಗಳನ್ನು ಕೊಡುವುದಾದರೆ ನಮ್ಮನ್ನು ನಾವೇ ಮಾರಿಕೊಂಡ ಹಾಗಾಗುತ್ತದೆ. ಇದು ಒಂದು ರೀತಿ ಬಿಸಿನೆಸ್ ಟೈಪ್ ಆದ ಹಾಗೆ ಇದೆ. It has been almost common. ಇದನ್ನು ಬಿಡಬೇಕು. ಯಾರಿಗೆ ಅರ್ಹತೆ ಇದೆ ಅವರಿಗೆ ಸೀಟುಗಳನ್ನು ಕೊಡಬೇಕು. ಈಗ ೩೫ ಪರ್ಸೆಂಟ್ ಸೀಟು ಅಷ್ಟು ಅರ್ಹತೆಗೆ ಎಂತಲೂ ಇನ್ನು ೩೫ ಪರ್ಸೆಂಟ್ ಅಷ್ಟು ಸೀಟು ಮ್ಯಾನೇಜ್‌ಮೆಂಟ್‌ಗೆ ಅಂತಲೂ ಇದೆ. ಹೀಗೆ ಮಾಡಬೇಕು ಅವರ ಮನಸ್ಸಿನಲ್ಲಿ ಬಂದಿದೆ. ಹೀಗೆ ಇರುವುದರಿಂದ ಆ ಮ್ಯಾನೇಜ್‌ಮೆಂಟ್‌ನವರು ಸಿಕ್ಕಾಪಟ್ಟೆ ಸೀಟುಗಳನ್ನು ಹಂಚಬಹುದು. ಸರ್ಕಾರದ ಧೋರಣೆ ಈ ರೀತಿ ಇದೆ. ಇದು ನಿಜವಾಗಲೂ ಕೂಡ ಯೋಗ್ಯವಾದ ಪಾಲಿಸಿ ಅಲ್ಲ ಎಂದು ಹೇಳುತ್ತೇನೆ. ನಾನು ಈ ಬಗ್ಗೆ ಹೇಳುವುದೇನೆಂದರೆ ಇದೇ ೩೫ ಪರ್ಸೆಂಟ್ ಸೀಟುಗಳನ್ನು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥಾ ರೈತರ ಮಕ್ಕಳಿಗೆ ಕೊಡಿ. ಆ ರೈತರ ಮಕ್ಕಳಿಗೆ ಈ ಸೀಟುಗಳನ್ನು ಮೀಸಲಾಗಿಡಿ. ಈಗ ೧೫.೩ ಪರ್ಸೆಂಟ್ ಅಷ್ಟು ಒಟ್ಟು ೧೮ ಪರ್ಸೆಂಟ್ ಹರಿಜನ-ಗಿರಿಜನರಿಗೆ ಮೀಸಲಾಗಿಡಬೇಕು ಅಂತ ಏನು ಮಾಡಿದ್ದೀರೋ ಅದೇರೀತಿಯಾಗಿ ಹಳ್ಳಿಗಳಿಂದ ಬರತಕ್ಕಂಥಾ ರೈತರ ಮಕ್ಕಳಿಗೆ ಈ ಸೀಟುಗಳನ್ನು ರಿಸರ್ವೇಷನ್ ಆಗಿ ಇಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳುತ್ತೇನೆ ಅಲ್ಲದೇ ಈವೊತ್ತು ನಾವು ಮತ್ತು ನೀವೂ ಎಲ್ಲರೂ ಕೂಡ ಆ ರೈತನನ್ನು ದೇಶದ ಬೆನ್ನೆಲುಬು ಇದ್ದ ಹಾಗೆ ಹಾಗೂ ಆತನು ರಾಷ್ಟ್ರದ ಹಾಗೂ ರಾಜ್ಯದ ಬೆನ್ನೆಲುಬು ಇದ್ದ ಹಾಗೆ ಎಂದು ಬರೇ ಬಾಯಿನಲ್ಲಿ ಹೇಳುತ್ತಾ ಇದ್ದೇವೆ ವಿನಾ ಸರಿಯಾದ ಪ್ರಯೋಜನವಾಗುತ್ತಾ ಇಲ್ಲ. ಆತನಿಗೆ ನಾವು ಅನುಕೂಲ ಮಾಡಿಕೊಡಬೇಕಾದರೆ ಗ್ರಾಮರಾಜ್ಯ ಸ್ಥಾಪನೆ ಮಾಡಬೇಕಾದರೆ ಅವರ ಹೆಸರು ಹೇಳಿಕೊಂಡು ನಾವು ಈಗ ಏನು ಇದ್ದೇವೋ ಅದರಂತೆ ಮಾಡಿ. ನಾನು ಇದ ಬಗ್ಗೆ ಕಳಕಳಿಯಿಂದ ಏತಕ್ಕೆ ಹೇಳುತ್ತಿದ್ದೇನೆಂದರೆ ನಾವು ಇದುವರೆಗೆ ನೋಡಿದ್ದರಲ್ಲಿ ಗ್ರಾಮಾಂತರದಿಂದ ಬಂದಂಥಾ ರೈತರ ಮಕ್ಕಳು ಯಾರೂ ಕೂಡ ಇದುವರೆಗೆ ವೈದ್ಯರಾಗಿಲ್ಲ ಎಲ್ಲಾ ವೈದ್ಯರೂ ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳೇ ಮತ್ತು ಸಾಹುಕಾರರ ಮಕ್ಕಳು. ಬಡವರ ಮಕ್ಕಳಾಗಲಿ ಕೂಲಿಗಾರರ ಮಕ್ಕಳಾಗಲಿ ರೈತರ ಮಕ್ಕಳಾಗಲಿ ಯಾರೂ ಕೂಡ ವೈದ್ಯರಾಗಿರುವುದನ್ನು ನಾನು ಇದುವರೆಗೆ ನೋಡಿಲ್ಲಾ. ಅಂಥಾವರ ಮಕ್ಕಳಿಗೆ ಈ ೩೫ ಪರ್ಸೆಂಟ್ ಸೀಟುಗಳನ್ನು ಮೀಸಲಾಗಿಡಿ ಎಂದು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಹಾಗೆ ಮಾಡಿದರೂ ತಾವು ಕೂಡ ಅವರು ಒಂದು ಸೇವೆಗೆ ಹೆಸರಾಗಿರುವುದಲ್ಲದೆ ಅದರಿಂದ ರೈತನ ಮಕ್ಕಳೂ ಕೂಡ ವೈದ್ಯರಾಗುವ ಅವಕಾಶ ಸಿಗುತ್ತದೆ. ಇಂಥಾ ಒಂದು ಪಾಲಿಸಿಯಿಂದ ನಾವು ಕೆಲಸವನ್ನು ಮಾಡುವುದಾದರೆ ಜನರಲ್ಲೂ ಕೂಡ ಒಂದು ಆಶಾಭಾವನೆ ಬಂದು ತಾವೂ ಸಹ ಒಳ್ಳೆಯ ಹೆಸರು ಪಡೆಯುತ್ತೀರಿ ಎನ್ನುವ ಮಾತನ್ನು ಹೇಳುತ್ತೇನೆ. ಈ ಸೂಚನೆಯನ್ನು ತಾವು ಕೂಲಂಕಷವಾಗಿ ವಿಚಾರ ಮಾಡಿ ಇದನ್ನು ಆದಷ್ಟು ಬೇಗ ಕಾರ್ಯಗತಕ್ಕೆ ತರಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಆಸ್ಪತ್ರೆ ಕಟ್ಟಡಗಳ ವಿಚಾರ. ನಾವು ಎಲ್ಲಾ ಕಡೆಗಳಲ್ಲೂ ಆಸ್ಪತ್ರೆಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಜನವರಿ ೧೫ರಂದು ತಾವು ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹರಿಹರಕ್ಕೆ ಬಂದು ಆಸ್ಪತ್ರೆಯನ್ನು ಸ್ಥಾಪನೆ ಮಾಡಿದರು. ಆದರೆ ಇದುವರೆಗೆ ಆ ಆಸ್ಪತ್ರೆಗೆ ಯಾವ ಸವಲತ್ತುಗಳನ್ನಾಗಲಿ ಕೊಟ್ಟಿಲ್ಲ. ಈ ಆಸ್ಪತ್ರೆಗೆ ಬೇಕಾದಂಥಾ ಮುಖ್ಯವಾಗಿರುವುದು ಬೆಡ್ಸ್, ಅದೇ ಇಲ್ಲ. ಆವೊತ್ತಿನ ಪ್ರಾರಂಭ ಮಾಡಿದ ದಿವಸ ಯಾವುದೋ ಆಫೀಸಿನಲ್ಲಿರುವ ಬೆಡ್ಸ್ ಅನ್ನು ಎಲ್ಲಿಂದಲೋ ತಂದೆವು, ಆಸ್ಪತ್ರೆ ಪ್ರಾರಂಭವಾಯಿತು. ನಂತರ ತಕ್ಷಣವಾಗಿ ಅದನ್ನು ಎಲ್ಲಿ ತೆಗೆದುಕೊಂಡು ಬಂದಿದ್ದೆವೋ ಅಲ್ಲಿಗೆ ಅದನ್ನು ವಾಪಸ್ಸು ಕಳುಹಿಸಲಾಯಿತು. ಆಸ್ಪತ್ರೆ ಪ್ರಾರಂಭವಾಗಿ ೬ ತಿಂಗಳಾಯಿತು, ಯಾವ ಬೆಡ್ಸ್ ಸಹ ಅಲ್ಲಿ ಇಲ್ಲ. ಅಲ್ಲಿಗೆ ಬರತಕ್ಕಂಥಾ ರೋಗಿಯು ಕೆಳಗೇನೇ ಮಲಗಿಕೊಳ್ಳುವ ಪರಿಸ್ಥಿತಿ ಬಂದಿದೆ. ಮೇಲಾಗಿ ಅಲ್ಲಿ ಯಾವ ವಾಟರ್ ಫೆಸಿಲಿಟೀಸ್ ಕೂಡ ಇಲ್ಲ.

೬.೦೦ ಪಿ.ಎಂ.

ಆಸ್ಪತ್ರೆಗಳಲ್ಲಿ ವಾಟರ್ ಫೆಸಿಲಿಟೀಸ್ ಸರಿಯಾದ ರೀತಿಯಲ್ಲಿ ಇಲ್ಲ. ಅಲ್ಲಿ ಕ್ಲೀನ್‌ನೆಸ್ ಸರಿಯಾಗಿ ಮೈನ್‌ಟೈನ್ ಮಾಡುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ರೋಗಿಗಳು ಇದ್ದರೆ ಅವರ ರೋಗ ಜಾಸ್ತಿಯಾಗುತ್ತದೆಯೇ ವಿನಃ ಅದೇನೂ ಕಡಿಮೆಯಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರೋಗಿಗಳು ಇದ್ದಾರಲ್ಲ ಎಂದು ನನಗೆ ಬಹಳ ವ್ಯಥೆಯಾಗುತ್ತಿದೆ. ಆದ್ದರಿಂದ ಅಲ್ಲಿ ವಾಟರ್ ಫೆಸಿಲಿಟೀಸನ್ನು ಕೊಟ್ಟು ಅಲ್ಲಿ ಕ್ಲೀನ್‌ನೆಸ್ ಮೈನ್‌ಟೈನ್ ಮಾಡುವಂತೆ ಸೂಚನೆ ಕೊಡಬೇಕು. ಡಾಕ್ಟರುಗಳಿಗೆ ಮತ್ತು ನರ್ಸ್‌ಗಳಿಗೆ ವಸತಿ ಸೌಕರ್ಯವನ್ನು ಕಲ್ಪಿಸಬೇಕಾದರೆ, ಅವರಿಗಾಗಿ ಬಿಲ್ಡಿಂಗ್ ಕಟ್ಟಿಸಬೇಕಾದರೆ ಆ ಕೆಲಸ

ವನ್ನು ನಿರ್ವಹಿಸಲು ತಮ್ಮ ಡಿಪಾರ್ಟ್‌ಮೆಂಟಿನಲ್ಲಿ ಒಂದು ಬಿಲ್ಡಿಂಗ್ ಡಿವಿಷನ್ ಇರಬೇಕು. ಈಗ ತಾವು ಏನು ಮಾಡುತ್ತಿದ್ದೀರಿ ಎಂದರೆ ಬಿಲ್ಡಿಂಗ್‌ಗಳನ್ನು ಕಟ್ಟಿಸುವುದಕ್ಕಾಗಿ ನೀವು ಪಿ.ಡಬ್ಲ್ಯೂ.ಡಿ. ಇಲಾಖೆಯವರನ್ನು ಅವಲಂಬಿಸಿದ್ದೀರಿ. ಆಸ್ಪತ್ರೆಯ ಕಟ್ಟಡಗಳನ್ನು ಕಟ್ಟಿಸುವುದರಲ್ಲಿ ಕೂಡ ನೀವು ಅವರನ್ನೇ ಅವಲಂಬಿಸಿದ್ದೀರಿ. ಇದೆಲ್ಲವನ್ನೂ ಮಾಡುವುದಕ್ಕೆ ಅವರಿಂದ ತಡವಾಗುತ್ತಿದೆ. ಆದ್ದರಿಂದ ನಾನು ಈ ಬಗ್ಗೆ ಸಲಹೆ ಕೊಡುವುದೇನೆಂದರೆ ತಮ್ಮ ಇಲಾಖೆಯಲ್ಲಿ ತಮ್ಮದೇ ಆದ ಬಿಲ್ಡಿಂಗ್ ಡಿವಿಷನ್ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ತಮ್ಮ ಇಲಾಖೆಯ ಮುಖಾಂತರ ಬಿಲ್ಡಿಂಗ್ ಕಟ್ಟು ವುದಕ್ಕೆ ಪ್ರಯತ್ನ ಮಾಡಬೇಕಾದರೂ ಕೂಡ ಎಲ್ಲಾ ಮೆಟೀರಿಯಲ್ಸ್ ಇದ್ದಾಗ ಮಾತ್ರ ಆ ಕೆಲಸವನ್ನು ಪ್ರಾರಂಭ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಆಸ್ಪತ್ರೆಯಲ್ಲಿರತಕ್ಕಂಥ ಬೋರ್ಡ್ ಆಫ್ ವಿಸಿಟರ್ಸ್ ಬಗ್ಗೆ ತಾವು ಹೇಳಿದ್ದೀರಿ ಈ ಬಗ್ಗೆ ನಮ್ಮ ಮಾನ್ಯ ಸ್ನೇಹಿತರು ಈಗಾಗಲೇ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಎಲ್ಲಾ ಆಸ್ಪತ್ರೆಗಳಲ್ಲೂ ಕೂಡ ಈ ಬೋರ್ಡ್ ಆಫ್ ವಿಸಿಟರ್ಸ್ ಇರಬೇಕು. ಪ್ರತಿಯೊಂದು ತಾಲ್ಲೂಕು ಆಸ್ಪತ್ರೆಗಳಲ್ಲಿ ಕೂಡ ಈ ಬೋರ್ಡ್ ಆಫ್ ವಿಸಿಟರ್ಸ್ ಇದ್ದರೆ ಒಳ್ಳೆಯದು, ಅದರಲ್ಲಿ ಶಾಸಕರನ್ನಾಗಲೀ ಅಥವಾ ಯಾರನ್ನೇ ಆಗಲೀ ತಾವು ಏನು ನೇಮಿಸುತ್ತೀರಿ ಅವರಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು. ಹಾಗೆ ಮಾಡಿದರೆ ಮಾತ್ರ ಪ್ರತಿಯೊಂದು ತಾಲ್ಲೂಕು ಆಸ್ಪತ್ರೆಗಳಲ್ಲಿರತಕ್ಕಂಥ ಅಧಿಕಾರವರ್ಗದವರು ಹೆದರುತ್ತಾರೆಯೇ ವಿನಹ ತಾತ್ಕಾಲಿಕವಾಗಿ ಒಂದು ಕಡೆ ಬೋರ್ಡ್ ಮಾಡಿದ್ದೇವೆ, ಅವರು ಎಲ್ಲಾ ಕಡೆ ಹೋಗಿ ನೋಡಿಕೊಂಡು ಬರುತ್ತಾರೆ ಎಂದು ಹೇಳಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅಧಿಕಾರ ವರ್ಗದವರಿಗೆ ಭಯ ಬೇಕು.. ನಿಮ್ಮ ಇಲಾಖೆಯ ಆಡಳಿತದಲ್ಲಿ ದಕ್ಷತೆ ಬರಬೇಕಾದರೆ ಎಲ್ಲಾ ಕಡೆ ಬೋರ್ಡ್ ಆಫ್ ವಿಸಿಟರ್ಸ್‌ನ್ನು ನೇಮಕ ಮಾಡಿ ಅಧಿಕಾರವರ್ಗದವರಲ್ಲಿ ಭಯ ಇರುವಂತೆ ಮಾಡಬೇಕು. ಹಾಗಾದರೆ ಮಾತ್ರ ಅಧಿಕಾರ ವರ್ಗ ದವರು ಹೆದರುತ್ತಾರೆಯೇ ವಿನಹ ಇಲ್ಲದಿದ್ದರೆ ಹೆದರುವುದಿಲ್ಲ. ಅಲ್ಲದೇ ಈ ಬೋರ್ಡ್ ಮಾಡಿದ ಶಿಫಾರಸ್ಸಿಗೆ ಅವರಿಂದ ಮನ್ನಣೆ ಸಿಕ್ಕುವಂತಾಗಬೇಕು. ಅಂದಾಗ ಮಾತ್ರ ಈ ಎಲ್ಲಾ ಆಸ್ಪತ್ರೆಗಳಲ್ಲಿ ಸುಧಾರಣೆಯನ್ನು ತರಬಹುದು. ಆದ್ದರಿಂದ ಅವರಿಗೆ ಹೆಚ್ಚಿನ ಬಾದು ಅಧಿಕಾರವನ್ನು ಕೊಡುವ ಹಾಗೆ ಇದ್ದರೆ ಮಾತ್ರ ಬೋರ್ಡ್ ಆಫ್ ವಿಸಿಟರ್ಸನ್ನು ಎಲ್ಲಾ ಕಡೆ ಮಾಡಿ ನಿಮ್ಮ ಅಧಿಕಾರಿಗಳ ಮುಖಾಂತರ ನೇರವಾಗಿ ಕೆಲಸವನ್ನು ತೆಗೆದುಕೊಳ್ಳಿ. ಈ ಡಾಕ್ಟರುಗಳ ವಿಚಾರದಲ್ಲಿ ಹೇಳುವುದಾದರೆ ಕೆಲವರು ಒಳ್ಳೆಯ ಯೋಗ್ಯ ಡಾಕ್ಟರುಗಳು ಇದ್ದಾರೆ. ಅವರು ಒಂದು ಕಡೆ ಇರಬೇಕು. ಅವರು ಇಲ್ಲದಿದ್ದರೆ ರೋಗಿಗಳ ಖಾಯಿಲೆಗಳು ಗುಣವಾಗುವುದಿಲ್ಲ. ಅವರು ಇನ್ನೆವಿಟೇಬಲ್. ಆದ್ದರಿಂದ ಅವರು ಅಲ್ಲಿ ಇರಬೇಕು. ಇನ್ನು ಕೆಲವರು ಇನ್ನೆವಿಟೇಬಲ್ ಅಲ್ಲ. ಅಂತಹವರನ್ನು ಬೇರೆ ಕಡೆಗೆ ಕಳಿಸಿ. ಅಥವಾ ಬೇರೆಯವರನ್ನು ತಯಾರು ಮಾಡಬೇಕು ಎನ್ನುವಂಥ ಅಭಿಪ್ರಾಯ ಏನಾದರೂ ಇದ್ದರೆ ಸರ್ಕಾರದವರು ಅದಕ್ಕೆ ಸಪರೇಟಾಗಿ ವ್ಯವಸ್ಥೆ ಮಾಡಿ ಉಳಿದವರಿಗೆ ಟ್ರೈನಿಂಗ್ ಕೊಡಿಸಿ. ಕೊನೆಯವರೆಗೆ ನಾವೇ ಇರು ತ್ತೇವೆ ಎಂದು ಕೆಲವರು ಹೇಳತಕ್ಕಂಥ ವಾದ ತಪ್ಪು. ಆಂತಹ ನೀತಿಯನ್ನೇನಾದರೂ ಹಾಕಿಕೊಂಡಿದ್ದರೆ ಅದನ್ನು ಕಿತ್ತು ಹಾಕಿ. ಪರಿಣತರಾದ ಡಾಕ್ಟರುಗಳನ್ನು ಜಿಲ್ಲಾ ಮಟ್ಟಕ್ಕೂ ಕಳಿಸಿ. ಅವರನ್ನು ಕೇವಲ ಬೆಂಗಳೂರಿನಲ್ಲಿ ಮಾತ್ರ ಕೇಂದ್ರೀಕೃತರನ್ನಾಗಿ ಮಾಡಿದರೆ ನಮ್ಮ ಗತಿ ಏನು? ಬೀದರ್, ಗುಲ್ಬರ್ಗದವರ ಗತಿ ಏನು? ಪರಿಣತರಿಂದ ದೊರಕತಕ್ಕಂಥ ಸಹಾಯ ಹಳ್ಳಿಗಳ ಮೂಲೆ ಮೂಲೆಗೂ ಹೋಗಬೇಕು. ಅವರು ಅಲ್ಲೇ ಇರಬೇಕು ಎನ್ನತಕ್ಕಂಥ ತತ್ವ ಒಳ್ಳೆಯದಲ್ಲ. ಅವರು ಬೇರೆ ಬೇರೆ ಉತ್ತಮರಾದ ಡಾಕ್ಟರುಗಳನ್ನು ತಯಾರು ಮಾಡಬೇಕು. ಅವರಿಗಿಂತ ಹೆಚ್ಚು ಪರಿಣತರನ್ನಾಗಿ ಅವರನ್ನು ಬೆಳೆಸು ವಂತೆ ಮಾಡಬೇಕು. ಇನ್ನು ಆಸ್ಪತ್ರೆಗಳನ್ನು ಕಟ್ಟಿಸಿಕೊಡಲು ಮುಂದೆ ಬರತಕ್ಕಂಥ ದಾನಿಗಳ ವಿಚಾರ ದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಭಾಗದಲ್ಲಿ ದಾಮೋಧರ ಜನರಲ್ ಆಸ್ಪತ್ರೆಯನ್ನು ಕಟ್ಟಿಸಿದಾಗ ಮಾನ್ಯ ಸಿದ್ದವೀರಪ್ಪನವರು ನಮ್ಮ ಆರೋಗ್ಯ ಮಂತ್ರಿಯವರಾಗಿ ದ್ದರುಆಗ ನಡೆದಂಥ ಒಂದು ಪ್ರಕರಣದ ಬಗ್ಗೆ ನಾವು ಅವರ ಗಮನಕ್ಕೆ ತಂದೆವು ಅವರು ಕ್ರಮ ತೆಗೆದು ಕೊಳ್ಳಲಿಲ್ಲ. ಅನೇಕರು ಡೋನರ್ಸ್ ಆಗಿ ಬಂದು ಅಸ್ಪತ್ರೆಯ ಕಟ್ಟಡವನ್ನು ಕಟ್ಟಿಸಿದರು. ಅಲ್ಲಿಗೆ ಒಂದು ಎಕ್ಸರೇ ಪ್ಲಾನ್ಟ್ ಮತ್ತು ಹೆಚ್ಚು ರೂಮುಗಳ ಅವಶ್ಯಕತೆ ಇತ್ತು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಅದನ್ನು ಒದಗಿಸಿಕೊಡಬೇಕು ಎಂದು ಕೇಳಿಕೊಂಡೆವು. ಅದರ ಬಗ್ಗೆ ಯಾವ ಕ್ರಮ ವನ್ನೂ ತೆಗೆದುಕೊಳ್ಳಲಿಲ್ಲ ಮತ್ತು ಅಲ್ಲಿಗೆ ಎಕ್ಸರೇ ಪ್ಲಾನ್ಟ್ ಸಹ ಬಂದಿಲ್ಲ. ಆದ್ದರಿಂದ ನಾನು ಈ ವಿಚಾರದಲ್ಲಿ ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಡುವುದಕ್ಕೆ ಬಯಸುತ್ತೇನೆ, ಇದಕ್ಕಾಗಿ ಡಿಸ್ಟ್ರಿಕ್ಟ್

ಲೆವೆಲ್‌ನಲ್ಲಿ ಮತ್ತು ತಾಲ್ಲೂಕು ಲೆವೆಲ್‌ನಲ್ಲಿ ಒಂದು ಕಮಿಟಿಯನ್ನು ಮಾಡಿ, ಎಲ್ಲಿ ದಾನಿಗಳು ಆಸ್ಪತ್ರೆಯನ್ನು ಕಟ್ಟಿಸುವುದಕ್ಕೆ ಮುಂದೆ ಬರುತ್ತಾರೋ ಅಲ್ಲಿ ಅವರಿಗೆ ಬೇಕಾದಂಥ ಎಲ್ಲಾ ಸೌಕರ್ಯಗಳನ್ನು ತಕ್ಷಣ ಒದಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುವಂಥ ಏರ್ಪಾಡು ಮಾಡಬೇಕು. ನಮ್ಮಲ್ಲಿ ದಾನಿಗಳು ದಾನ ಕೊಟ್ಟು ೨೦ ವರ್ಷ ಆದರೂ ಅದು ಸರಿಯಾದ ರೀತಿಯಲ್ಲಿ ಕೆಲಸ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಈ ಬಗ್ಗೆ ತಾವು ಗಮನಹರಿಸಬೇಕು. ಈ ಬಗ್ಗೆ ನಾನು ಕೊಟ್ಟಿರತಕ್ಕಂಥ ಸಲಹೆಗಳನ್ನು ಸರ್ಕಾರ ಗಮನಿಸಿ ಅನುಷ್ಠಾನಕ್ಕೆ ತರಬೇಕೆಂದು ಹೇಳುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಈ ಹಿಂದೆಯೇ ಇದನ್ನು ಮಾನ್ಯ ಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಕಳೆದ ಎರಡು ಮೂರು ತಿಂಗಳ ಹಿಂದೆ ಈ ಪಿಡಿಯಾಟ್ರಿಕ್ಸ್ ಡಾಕ್ಟರ್ ಅಂದರೆ ಮಕ್ಕಳ ರೋಗ ಚಿಕಿತ್ಸೆ ಮಾಡತಕ್ಕಂಥ ಡಾಕ್ಟರನ್ನು ಮೆಂಟಲ್ ಆಸ್ಪತ್ರೆಗೆ ಪೋಸ್ಟ್ ಮಾಡಿದ್ದಾರೆ. ಧಾರವಾಡಕ್ಕೆ ಬೇರೊಬ್ಬ ಡಾಕ್ಟರನ್ನು ತಂದು ಮಕ್ಕಳ ಚಿಕಿತ್ಸೆ ಮಾಡುವುದಕ್ಕೆ ಹಾಕಿದ್ದಾರೆ. ಈ ಬಗ್ಗೆ ನಾನು ಮಾನ್ಯ ಮಂತ್ರಿಯವರ ಗಮನಕ್ಕೆ ತಂದಿದ್ದರೂ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಇದೇನು ಅವ್ಯವಸ್ಥೆ? ಇದನ್ನು ಯಾರಾದರೂ ಮಾಡುತ್ತಾರೆಯೇ? ಆ ಮಕ್ಕಳ ಡಾಕ್ಟರಿಗೆ ಒಂದು ತರ ಮೆಂಟಲ್ ಫ್ರಸ್ಟ್ರೇಷನ್ ಸ್ಟಾರ್ಟ್ ಆಗುತ್ತಾ ಇದೆ ಮಕ್ಕಳ ಡಾಕ್ಟರನ್ನು ಮೆಂಟಲ್ ಆಸ್ಪತ್ರೆಗೆ ಹಾಕಿದ್ದಾರೆ. ಚಿತ್ರದುರ್ಗದಿಂದ ಬೇರೊಬ್ಬ ಡಾಕ್ಟರನ್ನು ಹುಬ್ಬಳ್ಳಿ ಧಾರವಾಡಕ್ಕೆ ಹಾಕಿದ್ದಾರೆ. ಇಂಥಾದು ಆಗದಹಾಗೆ ಮಾನ್ಯ ಮಂತ್ರಿಯವರು ನೋಡಿಕೊಳ್ಳಬೇಕು ಮತ್ತು ಈಗ ಆಗಿರತಕ್ಕಂಥಾದ್ದನ್ನು ಸರಿಪಡಿಸಬೇಕು. ಈ ವಿಚಾರದಲ್ಲಿ ಇಲಾಖೆಯ ಅಧಿಕಾರಿಗಳ ಮೇಲೆ ಹಿಡಿತವನ್ನು ಇಟ್ಟುಕೊಳ್ಳಬೇಕು ಎಂದು ಅವರಲ್ಲಿ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಹೆಚ್. ಪಾಟೀಲ್ (ಹುಮ್ನಾಬಾದ್) —ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರು ಇಲ್ಲಿ ತಂದಿರತಕ್ಕಂಥ ಆರೋಗ್ಯ ಇಲಾಖೆಯ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಅದಕ್ಕೆ ನನ್ನ ಒಪ್ಪಿಗೆಯನ್ನು ಕೊಡುತ್ತೇನೆ. ಈ ಸಂದರ್ಭದಲ್ಲಿ ನಾನು ನಮ್ಮ ಜಿಲ್ಲೆಗೆ ಆಗಿರತಕ್ಕಂಥ ಕುಂದು ಕೊರತೆಗಳ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಈ ಬಗ್ಗೆ ನಾನು ಸಾಕಷ್ಟು ಭಾಷಣ ಮಾಡುವುದಕ್ಕೆ ಹೋಗದೇ ನಮ್ಮ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಬರತಕ್ಕಂಥ ನನ್ನ ಜಿಲ್ಲೆಯ ಕುಂದುಕೊರತೆಗಳನ್ನು ಮಾನ್ಯ ಮಂತ್ರಿಯವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಸ್ವಾಮಿ, ೧೯೭೮-೭೯ ರಿಂದಲೂ ಕೂಡ ಬಜೆಟ್‌ನಲ್ಲಿ ನಮ್ಮ ಲಿಂಗಸುಗೂರು ೩೦ ಬೆಡ್ ಆಸ್ಪತ್ರೆ ಸೇರುತ್ತಾ ಬಂದಿದೆ. ಆದರೆ ಅದರ ಮುಂದಿನ ವರ್ಷದಿಂದ ಇವತ್ತಿನವರೆಗೆ ಕಟ್ಟಡಕ್ಕೋಸ್ಕರ ೧೦ ರೂಪಾಯಿ ಅಷ್ಟಾದರೂ ಅದರಲ್ಲಿ ಸೇರಿಲ್ಲ. ಅದರಲ್ಲಿ ಇದನ್ನು ಏತಕ್ಕೆ ಸೇರಿಸಿದ್ದಾರೆಯೋ ಗೊತ್ತಿಲ್ಲ. ಮಾನ್ಯ ಅರ್ಥ ಮಂತ್ರಿಯವರ ಜೊತೆಯಲ್ಲಿ ಈ ವಿಚಾರದ ಬಗ್ಗೆ ಸಾಕಷ್ಟು ಮಾತನಾಡಿದ ಮೇಲೆ ಕೆಲವು ವಿಷಯಗಳು ನನಗೆ ಗೊತ್ತಾದವು. ೧೯೭೮-೭೯ರಲ್ಲಿ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಮತ್ತು ಮುನಿಸಿಪಲಿಟಿಯವರು ೧ ಲಕ್ಷ ೫೦ ಸಾವಿರ ರೂಪಾಯಿಗಳನ್ನು ವಂತಿಗೆ ಹಣವಾಗಿ ಕೊಡಬೇಕೆಂದು ಒಂದು ಕಂಡಿಷನ್ ಹಾಕಿ ಅದನ್ನು ಬಜೆಟ್‌ನಲ್ಲಿ ಸೇರಿಸಿದ್ದಾರೆ. ದುರಾದೃಷ್ಟವಶಾತ್ ೪-೬ ವರ್ಷಗಳಿಂದ ಬರಗಾಲ ಬಂದು ಆ ವಂತಿಗೆ ಹಣವನ್ನು ಕೊಡತಕ್ಕಂಥ ಪರಿಸ್ಥಿತಿ ಇಲ್ಲವಾಗಿದೆ. ಅಲ್ಲಿ ಒಂದು ಜನರಲ್ ಆಸ್ಪತ್ರೆಯನ್ನು ಮಾಡಿಕೊಡಿ ಎಂದು ನಾವು ಹಿಂದಿನ ಸರ್ಕಾರಕ್ಕೂ ಕೂಡ ಕೇಳಿಕೊಂಡೆವು. ಆ ಆಸ್ಪತ್ರೆಯನ್ನು ಶೀಘ್ರಗತಿಯಲ್ಲಿ ಮಾಡಿಕೊಡೋಣ ಎನ್ನತಕ್ಕಂಥ ಭರವಸೆಯನ್ನು ಹಿಂದಿನ ಸರ್ಕಾರದವರೂ ಕೂಡ ಕೊಟ್ಟಿದ್ದರು. ಆದರೆ ಅದು ಭರವಸೆಯಾಗಿಯೇ ಉಳಿಯಿತು. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕೂಡ ಹೋದವರ್ಷ ಈ ವಿಚಾರದಲ್ಲಿ ಮಾನ್ಯ ಅರ್ಥ ಮಂತ್ರಿಯವರಲ್ಲಿ ಕೇಳಿಕೊಂಡಾಗ ಅವರು ಅದಕ್ಕೆ ಒಪ್ಪಿಕೊಂಡಿದ್ದರೆ ಆದರೆ ಈ ವರ್ಷದ ಆಯವ್ಯಯ ಪುಸ್ತಕದಲ್ಲಿ ಇದರ ಬಗ್ಗೆ ನೋಡಲಾಗಿ ಮತ್ತೆ ಅದೇ ರೀತಿಯಲ್ಲಿ ಪ್ರಿಂಟ್ ಆಗಿ ಬಂದಿವೆ. ಇದು ಏತಕ್ಕೆ ಈ ರೀತಿ ಆಗುತ್ತಿದೆಯೋ ಗೊತ್ತಿಲ್ಲ ಈ ವಿಚಾರದಲ್ಲಿ ನಮಗೆ ಒಂದು ಪೊಲಿಟಿಕಲ್ ಪ್ರೆಷರ್ ಇಲ್ಲ ಎಂತಲೋ ಅಥವಾ ನಮ್ಮ ಭಾಗದಿಂದ ಕೇಳತಕ್ಕಂಥವರು ಯಾರೂ ಇಲ್ಲ ಎಂತಲೋ ಈ ರೀತಿ ಆಗುತ್ತಾ ಇದೆ ಎನ್ನತಕ್ಕಂಥ ಭಾವನೆ ಜನರಲ್ಲಿ ಮೂಡಿ ಬರುತ್ತಾ ಇದೆ. ಈ ಸಪ್ಲಿಮೆಂಟರಿ ಬಜೆಟ್‌ನಲ್ಲಾದರೂ ಕೂಡ ಅದಕ್ಕೆ ಒಂದೇ ಸಾರಿ ಪೂರ್ತಿ ಹಣವನ್ನು ಇಡದಿದ್ದರೂ ಸ್ವಲ್ಪವಾದರೂ ಹಣವನ್ನು ಒದಗಿಸಿ ಈ ಒಂದು ಕಾರ್ಯವನ್ನು ಶೀಘ್ರದಲ್ಲೇ ಕೈಕೊಳ್ಳುತ್ತಾರೆ ಎನ್ನತಕ್ಕಂಥ ಭರವಸೆಯನ್ನು ನಾವು ಇಟ್ಟುಕೊಂಡಿದ್ದೇವೆ. ಇನ್ನು ಎರಡನೆಯದಾ

ನಮ್ಮ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಪ್ರತಿ ೧೫ ಸಾವಿರ ಜನಸಂಖ್ಯೆ ಇರತಕ್ಕಂಥ ಗ್ರಾಮಾಂತರ ಹಳ್ಳಿಗಳಿಗೆ ತನ್ನದೇ ಆದ ಒಂದು ದವಾಖಾನೆಯನ್ನು ತೆರೆಯಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆಯೆಂದು ನಮಗೆ ಗೊತ್ತಾಗಿದೆ. ಇಂತಹ ಯೋಜನೆಗಳನ್ನು ನಮ್ಮ ಭಾಗದ ಯಾವುದೇ ಗ್ರಾಮದಲ್ಲಿ ಕೂಡ ಸರ್ಕಾರ ಇಲ್ಲಿಯವರೆಗೆ ತೆಗೆದುಕೊಂಡಿಲ್ಲ ಎನ್ನತಕ್ಕಂಥ ವಿಚಾರವನ್ನು ನಾನು ಇಲ್ಲಿ ಗಂಟಾ ಘೋಷವಾಗಿ ಹೇಳುತ್ತೇನೆ. ನಮ್ಮ ಭಾಗದಲ್ಲಿ ಇರತಕ್ಕ ಪ್ರದೇಶ ಬಹಳ ಹಿಂದುಳಿದ ಪ್ರದೇಶ. ಅದಕ್ಕೋಸ್ಕರ ನಮ್ಮ ಬಾಗದ ತಾಲ್ಲೂಕುಗಳಿಂದ, ಸಜ್ಜಲ್‌ಗಡ. ನಗರಾಲ್, ನದಕನಾಳ್, ಈ ಕಡೆಗಳಿಂದ ಈಗಾಗಲೇ ಸರ್ಕಾರಕ್ಕೆ ಅರ್ಜಿಗಳು ಬಂದಿವೆ. ಅವುಗಳನ್ನು ತಾವು ಕೂಡಲೇ ಕೈಗೆತ್ತಿಕೊಂಡು ಅಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನು ತೆರೆಯುತ್ತೀರಿ ಎನ್ನತಕ್ಕಂಥ ಭರವಸೆಯನ್ನು ನಾವು ಹೊಂದುತ್ತಾ ಇದ್ದೇವೆ.

ಇನ್ನು ಮೂರನೆಯದಾಗಿ ನಮ್ಮ ಜಿಲ್ಲೆಯಾದ ರಾಯಚೂರಿನಲ್ಲಿ ೧ ಲಕ್ಷ ೩೫ ಸಾವಿರ ಪ್ರಜಾ ಸಂಖ್ಯೆಯುಳ್ಳ ಜಿಲ್ಲೆಯಾಗಿದೆ. ಇಲ್ಲಿ ಕೇವಲ ೧೭೦ ಹಾಸಿಗೆಗಳಿರುವ ಒಂದೇ ಒಂದು ದಾವಾಖಾನೆ ಇರತಕ್ಕಂತಹ ಪ್ರಸಂಗವನ್ನು ನಾನು ಬಹಳ ಕಳಕಳಿಯಿಂದ ಹೇಳಬೇಕಾಗಿದೆ. ಮಾನ್ಯ ಸದಸ್ಯರಾದ ಶ್ರೀ ಭೀಮಣ್ಣ ಖಂಡ್ರೆ ಅವರ ಕ್ಷೇತ್ರದಲ್ಲಿ ೬-೭ ತಾಲ್ಲೂಕುಗಳು ಇವೆ ಅವರ ಕ್ಷೇತ್ರಕ್ಕೆ ದಾವಾಖಾನೆಯನ್ನು ಕೊಟ್ಟಿರುವುದನ್ನು ನಾನು ವಿರೋಧ ಮಾಡುವುದಿಲ್ಲ. ಆದರೆ ಅದೇ ರೀತಿಯ ನಮ್ಮ ಕ್ಷೇತ್ರಕ್ಕೂ ಎಲ್ಲಾ ತಾಲ್ಲೂಕುಗಳಿಗೂ ದವಾಖಾನೆಗಳನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಎಲ್ಲಾ ಜಿಲ್ಲಾ ದವಾಖಾನೆಗಳಲ್ಲಿ ೨೫೦ ಹಾಸಿಗೆಗಳು ಇರುವ ವ್ಯವಸ್ಥೆ ಇರುವಾಗ ನಮ್ಮ ರಾಯಚೂರು ಜಿಲ್ಲೆಯ ದುರಾದೃಷ್ಟವೋ ಏನೋ ಗೊತ್ತಿಲ್ಲ. ಅಲ್ಲಿ ಕೇವಲ ೧೭೦ ಹಾಸಿಗೆಗಳು ಇರುವ ದವಾಖಾನೆ ಇದೆ. ಇದಕ್ಕಾಗಿ ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಆರೋಗ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ರಾಯಚೂರು ಜಿಲ್ಲೆಯಲ್ಲಿರತಕ್ಕಂತಹ ಕುಂದು ಕೊರತೆಗಳನ್ನು ಇವತ್ತು ನಾನು ಇಲ್ಲಿ ಹೇಳುತ್ತಿದ್ದೇನೆ.

ಇನ್ನು ನಮ್ಮ ಹಳ್ಳಿಗಾಡು ಪ್ರದೇಶದಲ್ಲಿರತಕ್ಕಂತಹ ರೈತರ ಮಕ್ಕಳ ವಿಚಾರದಲ್ಲಿ ನಮ್ಮ ಮಾನ್ಯ ಸದಸ್ಯರು ಅನೇಕರು ಈಗಾಗಲೇ ಸಾಕಷ್ಟು ಮಾತನಾಡಿದ್ದಾರೆ ಅದಕ್ಕಾಗಿ ನಾನು ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ. ನಮ್ಮ ಹಳ್ಳಿಗಾಡು ಪ್ರದೇಶಗಳಿಂದ ಬಂದಂತಹ ರೈತರ ಮಕ್ಕಳಿಗೆ ಇವತ್ತು ಮೆಡಿಕಲ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡಲು ಸಾಧ್ಯವಿಲ್ಲ. ಏಕೆಂದರೆ ಪಟ್ಟಣಗಳಲ್ಲಿ ಇರತಕ್ಕಂತಹ ಮಕ್ಕಳು ೯೦-೯೫ ಪರ್ಸೆಂಟ್ ಅಂಕಗಳನ್ನು ಪಡೆದಿರುತ್ತಾರೆ. ಅದೇ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ರೈತರ ಮಕ್ಕಳು ಅವರು ಕಡಿಮೆ ಅಂಕಗಳನ್ನು ಪಡೆದಿರುತ್ತಾರೆ. ಏತಕ್ಕೆಂದರೆ ಗ್ರಾಮಾಂತರ ಪ್ರದೇಶದ ಹುಡುಗರಿಗೆ ಅಭ್ಯಾಸ ಮಾಡುವುದಕ್ಕೆ ಸೌಕರ್ಯ ಬಹಳ ಕಡಿಮೆ. ಒಂದೊಂದು ಕಾಲೇಜಿನಲ್ಲಿ ೧೦೦ಕ್ಕೆ ೬೦-೭೦ ಹುಡುಗರು ೨೦-೨೫ ಅಂಕಗಳನ್ನು ಗಳಿಸತಕ್ಕಂಥ ಪರಿಸ್ಥಿತಿ ಇದೆ. ಆದ್ದರಿಂದ ಅಗ್ರಿಕಲ್‌ಚರಲ್ ಗ್ರಾಮಾಂತರ ಪ್ರದೇಶದ ಹುಡುಗರಿಗೆ ಸೀಟು ಕೊಡುವುದಕ್ಕೆ ೧೦ ಪರ್ಸೆಂಟ್ ಮಾರ್ಕ್ಸ್ ಅನ್ನು ಯಾವ ರೀತಿ ಗ್ರೇಸ್ ಮಾರ್ಕ್ಸ್ ಸೇರಿಸುತ್ತಾರೆಯೊ ಆ ರೀತಿ ಮೆಡಿಕಲ್ ಕಾಲೇಜುಗಳಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಹುಡುಗರಿಗೆ ಸ್ಪೆಸಿಫಿಕ್ ಆಗಿ ಕೆಲವು ಮಾರ್ಕ್ಸ್‌ನ್ನು ಕೊಟ್ಟು ಆ ಹಳ್ಳಿಯಿಂದ ಬಂದಂತಹ ವಿದ್ಯಾರ್ಥಿಗಳಿಗೂ ಮೆಡಿಕಲ್ ಓದುವ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಮಾನ್ಯ ಆರೋಗ್ಯ ಸಚಿವರಿಗೆ ಹೇಳಬಯಸುತ್ತೇನೆ. ಇನ್ನು ನಮ್ಮ ಪ್ರದೇಶದಲ್ಲಿ ಒಂದು ಮಹಾರೋಗ ಇದೆ. ಈ ಮಹಾರೋಗ ಬಹಳ ಕೆಟ್ಟದ್ದು ಆದ್ದರಿಂದ ಈ ಒಂದು ಪರಿಸ್ಥಿತಿಯನ್ನು ಸರ್ಕಾರದವರು ಇದನ್ನು ತೀವ್ರವಾಗಿ ಪರಿಶೀಲಿಸಿ ಯಾರಿಗೆ ಈ ಒಂದು ಮಹಾರೋಗ ಅಥವಾ ದೊಡ್ಡ ರೋಗ ಇದೆಯೋ ಅಂಥವರಿಗೆ ಸರಿಯಾದ ಒಂದು ಟ್ರೀಟ್‌ಮೆಂಟ್ ಕೊಟ್ಟರೆ ಅದು ಸರಿಹೋಗುತ್ತದೆ ಸಾಮಾನ್ಯವಾಗಿ ಈ ರೋಗ ಬಂದಿರುವಂತಹವರು ಯಾರೂ ಹೇಳಿಕೊಳ್ಳುವುದಿಲ್ಲ. ಇದು ಒಂದು ತರಹ ಅಂಟುರೋಗ ಒಬ್ಬರಿಗೆ ಬಂದರೆ ಅವರಿಂದ ೧೬ ಜನಗಳಿಗೆ ಬರತಕ್ಕಂತಹ ಪರಿಸ್ಥಿತಿ ಇದೆ. ಆದ್ದರಿಂದ ಸರ್ಕಾರದವರೇ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಈ ಮಹಾ ರೋಗಕ್ಕೆ ಚಿಕಿತ್ಸೆಯನ್ನು ಕೊಡತಕ್ಕ ಒಂದೊಂದು ಯೂನಿಟನ್ ತೆರೆದು ಎಲ್ಲರನ್ನೂ ಅವರೇ ಚೆಕ್ ಮಾಡಿ ಸರ್ಕಾರದ ಖರ್ಚಿನಲ್ಲೇ ಅವರಿಗೆ ಪುಕ್ಕಟೆಯಾಗಿ ಔಷಧಿಯನ್ನು ಕೊಡಿಸಿ ಆ ರೋಗವನ್ನು ನಿರ್ಮೂಲನ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳುತ್ತೇನೆ. ನಮ್ಮ ಗ್ರಾಮಕ್ಕೆ ೧೯೮೦-೮೧ರಲ್ಲಿ ಒಂದು ಆಸ್ಪತ್ರೆಯನ್ನು ಮಂಜೂರು ಮಾಡಿದರು ಆದರೆ ಅಲ್ಲಿ ಡಾಕ್ಟರೇ ಇಲ್ಲ ಕಾರಣವೇನೆಂದರೆ ಅಲ್ಲಿಗೆ ಇನ್ನೇನು ೨-೩ ವರ್ಷಗಳಲ್ಲಿ ರಿಟೈರ್ ಆಗುವಂತಹವರನ್ನು ಅಲ್ಲಿಗೆ ಪೋಸ್ಟ್

ಮಾಡುತ್ತಾರೆ. ಅಥವಾ ಹೆಚ್ಚು ತಾಂತ್ರಿಕ ಶಿಕ್ಷಣ ಪಡೆದವರನ್ನು ಪೋಸ್ಟ್ ಮಾಡುತ್ತಾರೆ. ಇದರಿಂದ ಅಲ್ಲಿ ಬಹಳ ತೊಂದರೆಯಾಗುತ್ತದೆ. ಮತ್ತು ಅಲ್ಲಿ ರಾಜಕೀಯ ಶಿಫಾರಸ್ಸು ಮಾಡಿಸಿಕೊಂಡು ಅವರು ಮತ್ತೆ ಪಟ್ಟಣಗಳಿಗೆ ಬರುತ್ತಾರೆ. ಇದರಿಂದ ಗ್ರಾಮಾಂತರ ಪ್ರದೇಶದಲ್ಲಿರುವಂತಹವರಿಗೆ ತೊಂದರೆಯಾಗುತ್ತದೆ. ಮತ್ತು ಇದೇ ಸಂದರ್ಭದಲ್ಲಿ ನನ್ನ ಪಕ್ಕದಲ್ಲಿರತಕ್ಕಂತಹ ಶಾಸಕರಾದ ಶ್ರೀ ಮತ್ತಿಕಟ್ಟಿ ವೀರಣ್ಣನವರು ನನಗೆ ಮಾತನಾಡುವ ಅವಕಾಶವಿಲ್ಲ ಆದ್ದರಿಂದ ನೀವೇ ನನ್ನ ೨ ಬೇಡಿಕೆಗಳಿವೆ ಅವನ್ನು ಸಹಾ ನೀವೇ ಹೇಳಿ ಎಂದು ಹೇಳುತ್ತಿದ್ದಾರೆ. ಅದನ್ನೂ ಸಹಾ ನಾನೇ ಹೇಳುತ್ತೇನೆ. ಅದೇನೆಂದರೆ ೨೫ ಸಾವಿರದಿಂದ ೩೦ ಸಾವಿರ ಜನಸಂಖ್ಯೆಯಿರುವ ಗ್ರಾಮಗಳಲ್ಲಿ ಇಲ್ಲಿಯವರೆವಿಗೆ ಟಿ. ಡಿ. ಬಿ. ಆಸ್ಪತ್ರೆಗಳು ಏನಿದ್ದವು ಅವುಗಳು ಈಗ ಸರ್ಕಾರದವರ ವಶಕ್ಕೆ ತೆಗೆದುಕೊಂಡಿದ್ದಾರೆ. ಅಂಥಾ ದವಾಖಾನೆಗಳಿಗೆ ೩೦–೪೦ ಹಾಸಿಗೆಗಳನ್ನು ಒಂದು ದವಾಖಾನೆಗೆ ಮಂಜೂರು ಮಾಡಿದರೆ ಅಲ್ಲಿರುವ ಜನರಿಗೆ ಅನುಕೂಲವಾಗುತ್ತದೆ. ಮತ್ತು ಇದೇ ಸಂದರ್ಭದಲ್ಲಿ ನಾನು ಸರ್ಕಾರದಲ್ಲಿ ಇನ್ನೊಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅದೇನೆಂದರೆ ಮಲ್ಕಿಯಲ್ಲಿ ೨೦ ಸಾವಿರ ಜನರು ಇದ್ದಾರೆ. ಅಲ್ಲಿಗೆ ಒಂದು ದವಾಖಾನೆ ಕೊಡಬೇಕು ಮತ್ತು ಲಿಂಗಸುಗೂರು ಟೌನ್ ಪಂಚಾಯ್ತಿಯು ಗ್ರಾಮವಾಗಿದೆ. ಅವರು ಸರ್ಕಾರಕ್ಕೆ ಕೊಡಬೇಕಾದ ವಂತಿಗೆ ಹಣ ೧೫ ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಅವರು ಮುಂದೆ ಬಂದಿದ್ದಾರೆ. ಆದ್ದರಿಂದ ಅಲ್ಲಿಗೆ ಒಂದು ಹೆರಿಗೆ ಆಸ್ಪತ್ರೆಯನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೆಯೇ ಮಲ್ಕಿಗೆ ಒಂದು ದವಾಖಾನೆ ಮಾಡಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ನಾನು ನನ್ನ ಈ ಎಲ್ಲಾ ಕುಂದುಕೊರತೆಗಳನ್ನು ಹೇಳಲು ಅವಕಾಶವನ್ನು ಮಾಡಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿನೆ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಮಲ್ಲನಗೌಡ ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಆರೋಗ್ಯ ಸಚಿವರು ಈ ಸಭೆಯ ಮುಂದೆ ತಂದಿರತಕ್ಕಂತಹ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ನಾನು ಸರ್ಕಾರಕ್ಕೆ ತಿಳಿಸಲು ಪ್ರಯತ್ನ ಮಾಡುತ್ತೇನೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷ್ ಸರ್ಕಾರ ಇದ್ದಾಗ ಆರೋಗ್ಯ ಪ್ರತಿಯೊಂದು ಪ್ರದೇಶದಲ್ಲಿಯೂ ಕೂಡ ಅವರು ಆಸ್ಪತ್ರೆಗಳನ್ನು ತೆರೆದು ಅವರು ಜನತೆಗೆ ಮಾಡಿದಂತಹ ಸೇವೆಯನ್ನು ನಾವು ಇಂದು ಸ್ಮರಿಸಬಹುದಾಗಿದೆ. ಈ ಸಂದರ್ಭದಲ್ಲಿ ನಾನು ಆರೋಗ್ಯ ಇಲಾಖೆಯವರಿಗೆ ಹೊಸದಾಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದೇನೆಂದರೆ ಕುಟುಂಬ ಯೋಜನೆಗೆ ಸಂಬಂಧಪಟ್ಟ ಹಾಗೆ ಬಂದಂತಹ ಲೆಪ್ರಾಸ್ಕೋಪ್ ಯಂತ್ರ ಏನಿದೆ ಅದನ್ನು ಪ್ರತಿಯೊಂದು ಜಿಲ್ಲೆಗೂ ಸಹ ಒದಗಿಸಿಕೊಟ್ಟು ತಾಯಂದಿರಿಗೆ ಸಕಾಲದಲ್ಲಿ ಚಿಕಿತ್ಸೆಯನ್ನು ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅದೇ ಪ್ರಕಾರ ಈ ಸದನದಲ್ಲಿ ಹೊಸದಾಗಿ ಇನ್ನೊಂದು ವಿಷಯುವನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಕುಟುಂಬ ಯೋಜನೆಯು ಇಡೀ ರಾಷ್ಟ್ರದಲ್ಲಿಯೇ ನಡೆಯಬೇಕಾಗಿದೆ. ನನಗೆ ಇದರ ಬಗ್ಗೆ ವಿಷಯವೇನೂ ಗೊತ್ತಿಲ್ಲ. ನಾನು ಅದನ್ನು ಅಭ್ಯಾಸದ ಮೂಲಕ ಬೇರೆಯವರನ್ನು ಕೇಳಿಕೊಂಡು ನಾನು ಈ ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಮಹಾರೋಗವಾದ ಕ್ಷಯರೋಗದ ಈ ಬಗ್ಗೆ ಯಾರೂ ಪ್ರಸ್ತಾಪ ಮಾಡಿಲ್ಲ. ಹಳ್ಳಿಗಾಡಿನಲ್ಲಿ ಈ ಒಂದು ಖಾಯಿಲೆ ಮಗುವಿನಿಂದ ಹಿಡಿದು ದೊಡ್ಡವರಿಗೂ ಬರುತ್ತದೆ. ಈ ಒಂದು ಖಾಯಿಲೆಯನ್ನು ನಿರ್ಮೂಲನ ಮಾಡಲು ಏನಾದರೂ ಒಂದು ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಈಗ ಇನ್‌ಷ್ಯೂರೇನ್ಸ್ ಕಂಪನಿಯವರು ಅನೇಕ ಜನಗಳಿಂದ ೨ ಸಾವಿರ ೫ ಸಾವಿರ ೧೦ ಸಾವಿರ ಈ ರೀತಿಯಾಗಿ ಜನರಿಂದ ಬೇಕಾದಷ್ಟು ಇನ್‌ಷ್ಯೂರೇನ್ಸ್ ಮಾಡಿಸುಕೊಳ್ಳುತ್ತಾರೆ. ಈ ಇನ್‌ಷ್ಯೂರೇನ್ಸ್ ಕಂಪನಿಯವರು ಜಿಲ್ಲಾ ಮಟ್ಟದಲ್ಲಿ ಒಂದು ಒಂದು ಆಸ್ಪತ್ರೆಯನ್ನು ಕಟ್ಟಿಸಿಕೊಡಲು ಒತ್ತಾಯ ಮಾಡಬೇಕು. ನಾನು ಬೇರೆ ರಾಜ್ಯಗಳಲ್ಲಿರತಕ್ಕ ಹಲವಾರು ಆಸ್ಪತ್ರೆಗಳನ್ನು ನೋಡಿದ್ದೇವೆ. ಆದರೆ ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಆಸ್ಪತ್ರೆಗಳು ಬೇರೆ ರಾಜ್ಯದ ಆಸ್ಪತ್ರೆಗಳ ಮಟ್ಟದಲ್ಲಿ ಇಲ್ಲ. ಆದ್ದರಿಂದ ನಮ್ಮ ರಾಜ್ಯದ ಆಸ್ಪತ್ರೆಗಳನ್ನು ಉತ್ತಮಪಡಿಸಬೇಕೆಂದು ನಾನು ಕೇಳಿ

ಕೊಳ್ಳುತ್ತೇನೆ. ಮಾನ್ಯ ಸಚಿವರು ಈ ಕಡೆ ತಮ್ಮ ಗಮನವನ್ನು ಹರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ಸಲಹೆ ಏನೆಂದರೆ ನಮ್ಮ ರಾಜ್ಯಕ್ಕೆ ರಾಷ್ಟ್ರ ಮಟ್ಟದ ವ್ಯಕ್ತಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ೪-೫ ಪೇಷೆಂಟ್‌ಗಳಿಗೆ ಅವಕಾಶವಿರುವಂತಹ ಒಂದು ರಾಷ್ಟ್ರ ಮಟ್ಟದ ಆಸ್ಪತ್ರೆಯನ್ನು ನಮ್ಮ ರಾಜ್ಯದಲ್ಲಿ ತೆರೆಯಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ, ನಮ್ಮ ಸರ್ಕಾರದವರು ಸಾರ್ವಜನಿಕರಿಗೆ ಸಹಾಯ ಮಾಡುವ ದೃಷ್ಟಿಯಿಂದ ಇನ್ನೊಂದು ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಅದೇನೆಂದರೆ ಮಾನ್ಯ ಮಂತ್ರಿಗಳು ನಮ್ಮ ಶಾಸಕರೆಲ್ಲರಿಗೂ ತಾಯಿಯ ಮಡಿಲಲ್ಲಿ ಎನ್ನುವ ಒಂದು ಚಿತ್ರವನ್ನು ತೋರಿಸಿದರು. ಇಂಥಾ ಒಂದು ಚಿತ್ರವನ್ನು ರಾಜ್ಯಾದ್ಯಂತ ಎಲ್ಲಾ ಜನರಿಗೂ ತೋರಿಸಿದರೆ ನಿಜವಾಗಿಯೂ ಇದರಿಂದ ಜನರು ನೀತಿ ಪಾಠವನ್ನು ಕಲಿಯುತ್ತಾರೆ. ಈ ಚಿತ್ರವನ್ನು ನೋಡಿದಾಗ ಸಾರ್ವಜನಿಕರಲ್ಲಿ ಒಂದು ಸಂಸ್ಕೃತ ಪರಿಣಾಮ ಬೀರಬಹುದು. ಈ ವೈದ್ಯಕೀಯ ಇಲಾಖೆಯಲ್ಲಿ ಪ್ರಚಾರ ಕಾರ್ಯಕ್ಕಾಗಿ ಎಷ್ಟೋ ಹಣವನ್ನು ಸರ್ಕಾರದವರು ಖರ್ಚು ಮಾಡುತ್ತಾರೆ. ಆ ಹಣದಲ್ಲಿ ಸಾರ್ವಜನಿಕರಿಗೆ ಈ ಚಿತ್ರವನ್ನು ತೋರಿಸುವ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಭೆಯ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ನೆನ್ನೆಯ ದಿವಸ ಒಂದು ವಿಷಯವನ್ನು ನಮ್ಮ ಮಾನ್ಯ ಮಿತ್ರರಾದ ಶ್ರೀ ಆರ್ಮುಗಂರವರು ಪ್ರಸ್ತಾಪ ಮಾಡಿದರು ಅದು ಏನೆಂದರೆ ಇವೊತ್ತು ನಮ್ಮ ರಾಜ್ಯದಲ್ಲಿ ೪೦೦ ಜನ ನಿರುದ್ಯೋಗಿ ಹರಿಜನ ಮತ್ತು ಗಿರಿಜನ ಡಾಕ್ಟರುಗಳು ಇದ್ದಾರೆಂದು ಅವರನ್ನು ಪ್ರೈಮರಿ ಹೆಲ್ತ್ ಯೂನಿಟ್‌ಗಳಿಗೆ ತೆಗೆದುಕೊಂಡು ಅವರಿಗೆ ಕೆಲಸ ಕೊಡಬೇಕು.

ಇನ್ನು ಕೊನೆಯದಾಗಿ ಮಾನ್ಯ ಆರೋಗ್ಯ ಸಚಿವರ ಬಗ್ಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡಿದರೆ ಅದು ಅತಿಶಯೋಕ್ತಿಯಾಗಲಾರದೆಂದು ನಾನು ಈ ಸಂದರ್ಭದಲ್ಲಿ ತಿಳಿದುಕೊಂಡಿದ್ದೇನೆ. ಅದೇನೆಂದರೆ, ಒಳ್ಳೆಯ ಡಾಕ್ಟರ್‌ಗಳಿಗೆ ಒಳ್ಳೆಯ ಗುಣ ಇರಬೇಕಾಗುತ್ತದೆ ಒಳ್ಳೆಯ ಹಿರಿಮೆ ಬೇಕಾಗುತ್ತದೆ. ಒಳ್ಳೆಯದು ಯಾವುದು ಎಂದು ಪರಿಶೀಲನೆ ಮಾಡತಕ್ಕಂಥ ಶಕ್ತಿ ಇರಬೇಕಾಗುತ್ತದೆ. ಇಂತಹ ಒಂದು ಒಳ್ಳೆಯ ಗುಣಗಳು ಇರತಕ್ಕಂಥ ಡಾಕ್ಟರ್‌ಗಳನ್ನು ಈಗಿನ ಆರೋಗ್ಯ ಸಚಿವರು ಆಯ್ಕೆ ಮಾಡುವಲ್ಲಿ ಒಳ್ಳೆಯ ಒಂದು ನಿರ್ಣಯವನ್ನು ಕೈಕೊಳ್ಳುತ್ತಿದ್ದಾರೆ. ಅದಕ್ಕಾಗಿ ಅವರನ್ನು ಈ ಸಂದರ್ಭದಲ್ಲಿ ನಾನು ಅಭಿನಂದಿಸುತ್ತೇನೆ. ಇಲ್ಲಿಯವರೆಗೆ ನಾನು ಕೊಟ್ಟಂಥ ಕೆಲವು ಸೂಚನೆಗಳನ್ನು ಮಾನ್ಯ ಮಂತ್ರಿಗಳು ಕಾರ್ಯಗತ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಇಲಾಖೆಯ ಮೇಲೆ ಮಾತನಾಡುತ್ತೇನೆಂದು ನಾನು ನಮ್ಮ ಪಕ್ಷದ ಮುಖ್ಯ ಸಚೇತಕರನ್ನು ಕೇಳಿಕೊಂಡಾಗ ಅವರು ಸಮಯವಿಲ್ಲ, ಬೇರೆ ಇಲಾಖೆಗಳ ಡಿಮ್ಯಾಂಡ್‌ಗಳು ಬಂದಾಗ ಮಾತನಾಡಿ ಎಂದು ಹೇಳಿದರು. ಆದರೂ ಸಹ ಅಧ್ಯಕ್ಷರು ಈ ಇಲಾಖೆಯ ಮೇಲೆ ಮಾತನಾಡಲು ಸ್ವಲ್ಪ ಕಾಲಾವಕಾಶ ಮಾಡಿಕೊಟ್ಟರು. ಅವರು ಕೊಟ್ಟ ಸ್ವಲ್ಪ ವೇಳೆಯಲ್ಲಿಯೇ ಕೆಲವೊಂದು ಸೂಚನೆಗಳನ್ನು ಕೊಟ್ಟಿದ್ದೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಚೇರ್‌ಮನ್.—೨೮ ಮತ್ತು ೨೯ನೇ ಡಿಮ್ಯಾಂಡ್‌ಗಳ ಮೇಲಿನ ಚರ್ಚೆ ಮುಗಿದಿದೆ. ಈಗ ಸಭೆ ಮೇಲೆದ್ದು ಮತ್ತೆ ನಾಳೆ ಮಧ್ಯಾಹ್ನ ೧೨ ಗಂಟೆಗೆ ಸರಿಯಾಗಿ ಸೇರಲಿದೆ

The House adjourned at 22 minutes past Six of the Clock to meet again at 12 Noon on Friday 3rd July 1981